ನಮ್ಮ ಶರೀರಕ್ಕೆ ಒಟ್ಟಾರೆ ಒಂಭತ್ತು ರಂಧ್ರಗಳಿವೆ. ಅವುಗಳನ್ನೇ ಒಂಭತ್ತು ಬಾಗಿಲುಗಳು ಎಂದಿದ್ದಾರೆ. ಶರೀರದ ಮೇಲೆ ಧ್ಯಾಸವಿಲ್ಲದಂತೆ ಮಾಡುವುದನ್ನು ಒಂಭತ್ತು ಬಾಗಿಲನ್ನು ಮುಚ್ಚಿಹಾಕಿದಂತೆ ಎಂದಿದ್ದಾರೆ. ಅಜ್ಞಾನದಿಂದ ಜ್ಞಾನದಲ್ಲಿ ಪ್ರವೇಶಿಸುವುದಕ್ಕೆ ಕಾಣಿಸದ ಒಂದು ಬಾಗಿಲು ಇದೆ. ಅದನ್ನೇ ಮುಕ್ತಿಬಾಗಿಲು ಎಂದಿದ್ದಾರೆ. ಒಬ್ಬ ಮನುಷ್ಯ ತನ್ನ ಶರೀರದ ಮೇಲೆ ಧ್ಯಾಸವಿಲ್ಲದೆ ಮಾಡಿಕೊಂಡು ತನ್ನ ಜ್ಞಾನದ ಮೂಲಕ ಯೋಗದೊಳಗೆ ಪ್ರವೇಶಿಸುವುದನ್ನೇ ಮೇಲಿನ ತತ್ತ್ವದಲ್ಲಿ 'ಮೂರಾರು (ಮೂರು ಆರು ಒಟ್ಟು ಒಂಭತ್ತು) ಬಾಗಿಲುಗಳನ್ನು ಮುಚ್ಚಬೇಕಣ್ಣಾ ಮುಕ್ತಿಬಾಗಿಲಲ್ಲಿ ನಿಂತು ಬಾಗಿಲು ತೆಗೆಯಣ್ಣಾ' ಎಂದು ಅಂದಿದ್ದಾರೆ. ಆ ವಿಧವಾಗಿ ಶರೀರದ ಮೇಲೆ ಕೂಡಾ ಧ್ಯಾಸವಿಲ್ಲದೆ ಜ್ಞಾನದ ಮೂಲಕ ಮುಕ್ತಿಬಾಗಿಲು ತೆರೆದು ಬ್ರಹ್ಮಯೋಗದೊಳಗೆ ಹೋದವನಿಗೆ ಆತ್ಮ ತಿಳಿಯುತ್ತದೆ. ಆತ್ಮ ತಿಳಿಯುವುದರಿಂದ ಜ್ಞಾನಶಕ್ತಿ ಲಭಿಸುತ್ತದೆ. ಆತ್ಮದ ಮೂಲಕ ಆ ಜ್ಞಾನಾಗ್ನಿಯನ್ನು ಹೊಂದಿದವನು ತನಗಿರುವ ಕರ್ಮಗಳೆನ್ನುವ ಕಟ್ಟಿಗೆಗಳನ್ನು ಪೂರ್ತಿಯಾಗಿ ಸುಟ್ಟುಹಾಕಿಕೊಂಡು ಮೋಕ್ಷವನ್ನು ಹೊಂದುತ್ತಾನೆ. ಆದ್ದರಿಂದ 'ಬಾಗಿಲು ತೆಗೆದ ಅಂಬ ತೇಜಕೊಡುತ್ತದಣ್ಣ, ತೇಜಹೊಂದಿದವನು ತಾಗುರುವೋ ಯಣ್ಣಾ' ಎಂದು ಎರಡನೆ ಚರಣದಲ್ಲಿ ಎರಡನೆ ವಾಕ್ಯದಲ್ಲಿ ಹೇಳಿದ್ದಾರೆ. ಮೂರಾರು ಬಾಗಿಲುಗಳು ಶರೀರದಲ್ಲಿನ ಒಂಭತ್ತು ರಂಧ್ರಗಳೆಂದು, ಬಾಗಿಲು ತೆಗೆಯುವುದೆಂದರೇ ಯೋಗವನ್ನು ಹೊಂದುವುದೆಂದು, ಅಂಬ ತೇಜವನ್ನು ಜ್ಞಾನಾಗ್ನಿ ಪ್ರಕಾಶವೆಂದು, ಅಂಬ ಎಂದರೇ ಆತ್ಮವೆಂದು, ಕರ್ಮ ಸುಟ್ಟುಹೋಗಿ ಮೋಕ್ಷ ಹೊಂದಿದವನನ್ನು ಗುರುಯೆಂದು ಮೇಲಿನ ಚರಣದಲ್ಲಿ ತಿಳಿಸಿದ್ದಾರೆ.

3. **ఆరునదుల మీద అంబయున్నదన్న**
**అంబతోఁ దుర్గాంబ ఆటలాడునన్నా**
**ఆటలాటలోఁ మంచి అర్థమున్నదన్న**
**అర్థమెరిగినవాడు తాహరిగురుడన్నా** ॥ఈ జన్మ॥

ನಮ್ಮ ಶರೀರದಲ್ಲಿ ಅತಿ ದೊಡ್ಡ ನಾಡಿ ಬ್ರಹ್ಮನಾಡಿ. ಅದನ್ನೇ ಸುಷುಮ್ನನಾಡಿ ಎಂದು ಕೂಡಾ ಕರೆಯುತ್ತಿರುತ್ತಾರೆ. ಈ ನಾಡಿಯಲ್ಲಿ ಒಟ್ಟು ಏಳು ಕೇಂದ್ರಗಳಿವೆ. ಆರು ಕೇಂದ್ರಗಳಿಗೆ ಮೇಲೆ ಏಳನೇ ಕೇಂದ್ರದಲ್ಲಿ ಆತ್ಮ ನಿವಾಸ ಮಾಡುತ್ತಿದೆ. ಆದ್ದರಿಂದ ಮೂರನೆ ಚರಣದಲ್ಲಿ ಕೆಳಗಿನ ಆರು ನಾಡಿಕೇಂದ್ರಗಳನ್ನು ಆರು ನದಿಗಳಾಗಿ ಹೋಲಿಸಿ, ಮೇಲೆ ಏಳನೇ ಕೇಂದ್ರ ದಲ್ಲಿರುವ ಆತ್ಮವನ್ನು ಅಂಬ ಎಂದು, ಆರು ನದಿಗಳ ಮೇಲೆ ಅಂಬ ಇದೆಯೆಂದಿದ್ದಾರೆ. ಆತ್ಮ ಪರಮಾತ್ಮ ಸ್ವರೂಪವಾದ 'ಓಂ' ಎನ್ನುವ ಪಂಚಾಕ್ಷರಿಯಿಂದ ಶ್ವಾಸವನ್ನು ನಡೆಸುತ್ತಿದೆ ಆದ್ದರಿಂದ ಶ್ವಾಸ ನಡೆಯುವುದನ್ನು ಆಟಯೆಂದು, ಶ್ವಾಸದಲ್ಲಿ ಒಳಗೊಂಡಿರುವ 'ಓಂ'ನ್ನು ಒಳ್ಳೆಯ ಅರ್ಥವೆಂದು, ಓಂಕಾರವನ್ನು ತಿಳಿದವನು ಆಟದಲ್ಲಿನ ಅರ್ಥ ತಿಳಿದವನೆಂದು, ಪರಮಾತ್ಮ ನೊಳಗೆ ಐಕ್ಯವಾದವನನ್ನು ಹರಿಗುರುಯೆಂದು ಕೂಡಾ ಈ ಚರಣದಲ್ಲಿ ಹೇಳಿದ್ದಾರೆ.

4. **నాసికముప్పే దృష్టి నడిపించుమన్న**
**నడిపించి హరిని నీవు నమ్మియుండన్నా**
**నమ్మి నవరత్నముల పీఠమెక్కన్న**
**పీఠమెక్కిన అంబ పిలుచునోయన్నా** ॥ఈ జన్మ॥

ನಾಶಿಕ ಎಂದರೇ ಮೂಗು. ಈ ತತ್ತ್ವದಲ್ಲಿ ನಾಶಿಕದ ಮೇಲೆ ಎಂದಿದ್ದಾರೆ. ನಾಶಿಕಾಗ್ರದ (ನಾಶಿಕದ ಮೇಲೆ) ಮೇಲೆ ಎಂದರೇ ಏನೋ ತಿಳಿಯದೆ ಬಹಳಜನ ಸಾಧಕರು ಗೊಂದಲ ಪಡುತ್ತಿದ್ದಾರೆ. ಮೇಲ್ಭಾಗವನ್ನು ಅಗ್ರಭಾಗ ಎನ್ನುತ್ತೇವೆ. ಮೂಗಿನ ಮೇಲ್ಭಾಗವನ್ನು ನಾಶಿಕಾಗ್ರವೆಂದು ಆಧ್ಯಾತ್ಮಿಕ

ವಿದ್ಯೆಯಲ್ಲಿ ಬಹಳ ಕಡೆ ಹೇಳಿದ್ದಾರೆ. ನಾಶಿಕಾಗ್ರದ ಮೇಲೆ ದೃಷ್ಠಿ ನಿಲ್ಲಿಸೆಂದು ದೊಡ್ಡವರು ಹೇಳಿದರೆ ಅದು ಅರ್ಥವಾಗದೆ, ಮನೋಧ್ಯಾಸವನ್ನು ಮೂಗಿನ ಮೇಲ್ಭಾಗದಲ್ಲಿರುವ ಏಳನೇ ಕೇಂದ್ರದಲ್ಲಿ ನಿಲ್ಲಿಸಬೇಕೆಂದು ತಿಳಿಯದೆ, ಹೊರಗಿನ ದೃಷ್ಠಿಯನ್ನು ಮೂಗಿನ ಕೆಳಗಿನ ಕೊನೆಭಾಗದಲ್ಲಿ ನಿಲ್ಲಿಸಿ ನೋಡುವವರು ಕೆಲವರು ಇದ್ದಾರೆ. ಮತ್ತೆ ಕೆಲವರು ಮೂಗಿನ ಮೇಲ್ಭಾಗವಾದ ಕಣ್ಣುಬ್ಬುಗಳ ಮಧ್ಯಭಾಗದಲ್ಲಿ ದೃಷ್ಠಿಯನ್ನು ನಿಲ್ಲಿಸಿ ನೋಡುವವರು ಇದ್ದಾರೆ. ಮೇಲ್ನೋಟದಿಂದ ನೋಡುವ ಈ ಎರಡು ವಿಧಾನಗಳು ತಪ್ಪೆಂದು, ದೃಷ್ಠಿ ಎಂದರೇ ಮನೋದೃಷ್ಠಿ ಯಾದ ಧ್ಯಾಸವೆಂದು, ನಾಶಿಕಾಗ್ರ ಎಂದರೇ ಒಳಗಿರುವ ಏಳನೇ ನಾಡಿಕೇಂದ್ರ ವೆಂದು ತಿಳಿದಿಲ್ಲ. ಏಳನೇ ನಾಡಿಕೇಂದ್ರದಲ್ಲಿ ಆತ್ಮ ನಿವಾಸವಿದೆ. ಏಳನೇ ಕೇಂದ್ರದಲ್ಲಿ ಮನೋದೃಷ್ಠಿಯನ್ನು ನಿಲ್ಲಿಸಿದಾಗ ಸ್ವಲ್ಪಕಾಲಕ್ಕೆ ಆತ್ಮ ತಿಳಿಯುತ್ತದೆ, ಆತ್ಮವನ್ನು ತಿಳಿದ ನಂತರ ಪರಮಾತ್ಮನನ್ನು ಹೊಂದಬಹುದು. ಈ ವಿಷಯವನ್ನು ತಿಳಿಸುತ್ತಾ ಮೇಲಿನ ತತ್ತ್ವದಲ್ಲಿನ ನಾಲ್ಕನೇ ಚರಣದಲ್ಲಿ 'ನಾಶಿಕದ ಮೇಲೆ ದೃಷ್ಠಿ ನಿಲ್ಲಿಸಣ್ಣಾ' ಎಂದಿದ್ದಾರೆ. ಆತ್ಮ ನಿವಾಸವನ್ನು ನವರತ್ನ ಪೀಠವಾಗಿ ವರ್ಣಿಸುತ್ತಾ, ಸಪ್ತಸ್ಥಾನವನ್ನು ಸೇರಿದವನನ್ನು ಪೀಠ ಏರಿದವನೆಂದು ಹೇಳಿದ್ದಾರೆ. ಅಂಬ ಎಂದರೇ ಆತ್ಮಯೆಂದು, ಆತ್ಮ ಮೂಲಕ ಪರಮಾತ್ಮನನ್ನು ಸೇರುವುದನ್ನು 'ಅಂಬ ಕರೆಯೆಂದು' ಈ ಚರಣದಲ್ಲಿ ಹೇಳಿದ್ದಾರೆ ಈ ವಿಧವಾಗಿ ಏಳನೇ ಕೇಂದ್ರದಲ್ಲಿ ಮನಸ್ಸನ್ನು ನಿಲ್ಲಿಸಿ, ಬ್ರಹ್ಮಯೋಗ ಹೊಂದುವುದನ್ನು ಕುರಿತು ಹೇಳಿದ್ದಾರೆ.

**5.** **ಜಂಟ ತ್ರೊವಲ ರೆಂಡಿನಂಟಿ ಊದನ್ನ**
**ಅಂಟಿ ಯೂದಿ ಮೇನ್ಮರಚಿ ಯಟ್ಟೇ ನಿಲುವನ್ನಾ**
**ಮೇನು ಮರಚಿ ಘಂಟಾನಾದ ವಿನುಮನ್ನ**
**ನಾದಮುವಿನಿ ಪೋತುಲೂರಿನಿ ನಮ್ಮಿಯುಂಡನ್ನಾ ॥ಈ ಜನ್ಮ॥**

ಶರೀರದಲ್ಲಿನ ದೊಡ್ಡ ನಾಡಿಯಾದ ಬ್ರಹ್ಮನಾಡಿಯಿಂದ ಬರುವ ಆತ್ಮ ಚೈತನ್ಯವು ಶ್ವಾಸಕೋಶಗಳಿಗೆ ಸೇರಿ, ಅವುಗಳನ್ನು ಕದಲಿಸಿ ಶ್ವಾಸ ಆಡುವಂತೆ ಮಾಡುತ್ತಿದೆ. ಶ್ವಾಸ ಎರಡು ಮೂಗಿನ ರಂಧ್ರಗಳ ಮೂಲಕ ಆಡುತ್ತಿದೆ. ಎರಡು

ಮೂಗಿನ ರಂಧ್ರಗಳಲ್ಲಿ ಆಡುತ್ತಿರುವ ಶ್ವಾಸವನ್ನು ಪ್ರಯತ್ನ ಮಾಡಿ 'ಕುಂಭಕ' ಎಂಬ ಸಾಧನೆ ಮೂಲಕ ನಿಲ್ಲಿಸಿದಾಗ ಶರೀರದಲ್ಲಿ ಎಲ್ಲಾ ಕದಲಿಕೆಗಳು ನಿಂತುಹೋಗುತ್ತವೆ. ಶರೀರವೆಲ್ಲವನ್ನು ಮರೆತು ಮನಸ್ಸು ಒಂದೇ ಧ್ಯಾಸದಲ್ಲಿ ನಿಂತುಹೋಗುತ್ತದೆ. ಆಗ ಶರೀರದಲ್ಲಿನ ಆತ್ಮ ತಿಳಿಯುತ್ತದೆ. ಗಂಟಾನಾದ ಏಕಸ್ಥಾಯಿ ಶಬ್ದಹೊಂದಿರುವಂತೆ ಒಂದೇಸ್ಥಾಯಿಯಲ್ಲಿ ಆತ್ಮವನ್ನು ತಿಳಿಯುವ ವನು ನಿಜಯೋಗಿ ಆಗುತ್ತಾನೆ. ಈ ವಿಷಯವನ್ನು ಹೇಳುತ್ತಾ ಎರಡು ಮೂಗಿನ ರಂಧ್ರಗಳಲ್ಲಿ ಶ್ವಾಸವನ್ನು ಒಳಗೆ ತೆಗೆದುಕೊಂಡು ನಿಲ್ಲಿಸುವುದನ್ನು 'ಜಂಟತ್ರೋವಲ ರೆಂಟಿನಂಟಿ ಊದಣ್ಣಾ' ಎಂದಿದ್ದಾರೆ. ಶರೀರದ ಮೇಲೆ ಧ್ಯಾಸವಿಲ್ಲದೆ ಮನಸ್ಸು ನಿಂತುಹೋಗುವುದನ್ನು 'ಶರೀರವನ್ನು ಮರೆತು ಹಾಗೆ ನಿಲ್ಲಿರಣ್ಣಾ' ಎಂದಿದ್ದಾರೆ. ಪ್ರಪಂಚ ವಿಷಯಗಳನ್ನು ಬಿಟ್ಟು ನಿಂತುಹೋದ ಮನಸ್ಸು ಆತ್ಮವನ್ನು ತಿಳಿಯುತ್ತಿದೆ. ಆದ್ದರಿಂದ 'ಗಂಟಾನಾದ ಕೇಳಿರಣ್ಣಾ' ಎಂದಿದ್ದಾರೆ. ಹೀಗೆ ಶ್ವಾಸದ ಮೂಲಕ ಬ್ರಹ್ಮಯೋಗವನ್ನು ಹೊಂದಿ ಆತ್ಮವನ್ನು ತಿಳಿಯುವ ವಿಧಾನವನ್ನು ಈ ತತ್ತ್ವದಲ್ಲಿ ವರ್ಣಿಸಿ ಹೇಳಿದ್ದಾರೆ.

## 6. ತತ್ತ್ವ

**ಚಿಲ್ಲರ ರಾಳ್ಳಕು ಮ್ರುಕ್ಕುಚುವುಂಟೆ ಚಿತ್ತಮು ಚೆಡುನುರ ಒರೇಯೊರೇ ಚಿತ್ತಮುನಂದು ಚಿನ್ನಯ ಜ್ಯೋತಿನಿ ಚೂಚುಚು ನುಂಡುಟ ಸರೇ ಸರೇ**

**||ಚಿ||**

1. **ಒಕ್ಕ ಪ್ರೊದ್ದುಲನಿ ಎಂಚುಚುಯುಂಟೇ ಒನರುಗ ಚಡುದುವು ಒರೇಯೊರೇ ಏಕಮ್ಮೆನ ಆ ವೈಭವಮೂರ್ತಿನಿ ಚೂಚುಚು ನುಂಡುಟ ಸರೇ ಸರೇ**

**||ಚಿ||**

2. **ನಿಳ್ಳಲೋ ಮುನಿಗಿ ಗೊನುಗುಚುಯುಂಟೆ ನಿಲಕಡ ಚೆಡುನುರ ಒರೇ ಒರೇ ನಲೋಯುಂಡೇ ನಿರ್ಮಲ ಜ್ಯೋತಿನಿ ಚೂಚುಚು ನುಂಡುಟ ಸರೇ ಸರೇ** ||ಚಿ||

3. **ಬಾಧ ಗುರುವುಲ ಪಂಚನು ಜೇರಿತೇ ಭಾವಮು ಚೆಡುನುರ ಒರೇ ಯುರೇ ಭಾವಮಂದುನ ಬ್ರಹ್ಮಕಾಂತಿನಿ ಚೂಚುಚು ನುಂಡುಟ ಸರೇ ಸರೇ** ||ಚಿ||

4. **ಭೂಮುಲು ಅಡವುಲು ತಿರುಗುಚುನುಂಟೇ ಬುದ್ಧುಲು ಚೆಡುನುರ ಒರೇಯೊರೇ ಬುದ್ಧಿಲೋಯುಂಟೇ ಪುನ್ನಮಿಚಂದ್ರುನಿ ಚೂಚುಚು ನುಂಡುಟ ಸರೇ ಸರೇ** ||ಚಿ||

5. **ವೀರಯ್ಯ ಹೇಳಿನ ವಾಕ್ಕುನ ನಮ್ಮಿತೇ ವಿವರಮು ತೆಲಿಯುನು ಒರೇಯೊರೇ ವಿವರಮಂದುಂಡೇ ವಿಗ್ರಹಮೂರ್ತಿನನಿ ಚೂಚುಚು ನುಂಡುಟ ಸರೇ ಸರೇ** ||ಚಿ||

**ವಿವರ :–** 5160 ವರ್ಷಗಳ ಪೂರ್ವದಲ್ಲಿ ಹೇಳಿದ ಇಂದೂಮತ ಗ್ರಂಥವಾದ ಭಗವದ್ಗೀತೆಯಲ್ಲಿಯೂ, 2017 ವರ್ಷಗಳ ಪೂರ್ವದಲ್ಲಿ ಹೇಳಿದ ಕ್ರೈಸ್ಥ ಮತಗ್ರಂಥವಾದ ಬೈಬಲ್‌ನಲ್ಲಿಯೂ ಮತ್ತು ಸುಮಾರು 1420 ವರ್ಷಗಳ ಪೂರ್ವದಲ್ಲಿ ಹೇಳಿದ ಇಸ್ಲಾಮ್ ಮತಗ್ರಂಥವಾದ ಖುರಾನ್‌ನಲ್ಲಿಯೂ 'ಏಕೇಶ್ವರೋಪಸನೆ' ಹೇಳಲ್ಪಟ್ಟಿದೆ. ಎಲ್ಲರಿಗಿಂತ ಮೀರಿದ ದೇವರೊಬ್ಬನಿದ್ದಾನೆಂದು, ಆತನನ್ನೇ ಆರಾಧಿಸಬೇಕೆಂದು ಮತ ಗ್ರಂಥಗಳೆಲ್ಲವೂ ಘೋಷಿಸುತ್ತಿವೆ. ಆದರೂ ಮಾನವರು ಎಲ್ಲರಿಗಿಂತ ದೊಡ್ಡವನಾದ ಪರಮಾತ್ಮನನ್ನು ಆರಾಧಿಸದೆ ಅನ್ಯದೇವತಾರಾಧನೆಗಳಲ್ಲಿ ಮುಳುಗಿಹೋಗಿದ್ದಾರೆ. ಅಸಲಾದ ದೇವರನ್ನು ಮರೆತು ಚಿಲ್ಲರೆ ದೇವತೆಗಳನ್ನು ಮುಗಿಯುವುದು ಆರಂಭ ಮಾಡಿದ್ದಾರೆ. ಎಲ್ಲರಲ್ಲಿಯೂ, ಎಲ್ಲಾ ಸ್ಥಳಗಳಲ್ಲಿಯೂ ಎಲ್ಲವೇಳೆಯಲ್ಲಿ ಎಲ್ಲಾಕಡೆ ವ್ಯಾಪಿಸಿರುವ ಪರಮಾತ್ಮ ಜ್ಞಾನ ತಿಳಿಯದೆ ಉಳಿದ ಚಿಲ್ಲರೆ ದೇವತೆಗಳನ್ನು ದೊಡ್ಡದಾಗಿ ಇಟ್ಟುಕೊಂಡಿದ್ದಾರೆ. ಒಬ್ಬೊಬ್ಬ ದೇವರಿಗೆ ಒಂದೊಂದು ನಿಯಮದ ಪ್ರಕಾರ ಪೂಜೆಗಳು

ಮಾಡುತ್ತಿದ್ದಾರೆ. ತನ್ನಲ್ಲಿಯೇ ಇರುವ ಪರಮಾತ್ಮನನ್ನು ಗುರುತಿಸಲಾರದೆ ಕೆಲವರು ತೀರ್ಥಯಾತ್ರೆಗಳು, ಕೆಲವರು ವ್ರತಕ್ರತುಗಳು, ಕೆಲವರು ಯಜ್ಞಯಾಗಾದಿಗಳನ್ನು ಮಾಡುತ್ತಿದ್ದಾರೆ. ಕೊನೆಗೆ ಇವೆಲ್ಲಾ ವೃಥಾ ಪ್ರಯಾಸಗಳೆಂದು ತಿಳಿದುಕೊಂಡವರು ದೇವರ ಜ್ಞಾನವನ್ನು ಹೊಂದುತ್ತಿದ್ದಾರೆ. ಈ ವಿಧವಾಗಿ ಅಸಲಾದ ದೇವರ ಜ್ಞಾನ ತಿಳಿದ ಹಿರಿಯರು ಜ್ಞಾನ ತಿಳಿಯದವರನ್ನು ಕುರಿತು ತತ್ತ್ವರೂಪದಲ್ಲಿ ಹೇಳಿರುವುದನ್ನು ಕೆಳಗೆ ವಿವರಿಸಿಕೊಳ್ಳೋಣ.

**ಚಿಲ್ಲರ ರಾಳ್ಳಕು ಮ್ರುಕ್ಕುಚುವುಂಟೆ ಚಿತ್ತಮು ಚೆಡುನುರ ಒರೇಒರೇ**
**ಚಿತ್ತಮುನಂದು ಚಿನ್ಮಯ ಜ್ಯೋತಿನಿ ಚೂಚುಚು ನುಂಡುಟ ಸರೇ ಸರೇ**
**||೩||**

ಸರ್ವಸೃಷ್ಟಿಗೆ ಮೂಲಕರ್ತನಾದ ಪರಮಾತ್ಮ ವಿಶ್ವವೆಲ್ಲಾ ವ್ಯಾಪಿಸಿ ಅಣುಅಣುವಿನಲ್ಲಿ ತುಂಬಿದ್ದಾನೆ. ಮಾನವ ಜನ್ಮವೊಂದರ ಅಂತರಾರ್ಥವು ಪರಮಾತ್ಮನನ್ನು ತಿಳಿದುಕೊಳ್ಳುವುದು ಆದರೆ ಆ ದೇವರನ್ನು ತಿಳಿದುಕೊಳ್ಳುವ ಜ್ಞಾನ ತಿಳಿಯದೆ ಹೋಗಿದೆ. ಜ್ಞಾನ ತಿಳಿಯದೆ ಮಾಯೆಯಲ್ಲಿ ಮುಳುಗಿರುವ ಮಾನವರು ತಮ್ಮಲ್ಲಿನ ಭಕ್ತಿಯನ್ನು ದೇವರಾದ ಪರಮಾತ್ಮ ಮೇಲಲ್ಲದೆ ಮಾಯೆಯಾದ ಚಿಲ್ಲರೆ ದೇವರುಗಳ ಮೇಲೆ ತೋರಿಸುತ್ತಿದ್ದಾರೆ. ದೇವರು ಅಲ್ಲದಂತಹ ಮಾಯೆಯಾದ ಚಿಲ್ಲರೆ ದೇವತೆಗಳನ್ನು ಮುಗಿಯುವುದರಿಂದ ಮನುಷ್ಯನಲ್ಲಿನ ಚಿತ್ತವು ಅನೇಕ ಭ್ರಮೆಗಳಲ್ಲಿ ಮುಳುಗಿಹೋಗುತ್ತಿದೆ. ಅನೇಕ ದೇವುರುಗಳಲ್ಲಿ ಯಾವೊಂದು ದೇವರ ಮೇಲಲ್ಲದೇ ಅನೇಕ ದೇವರುಗಳನ್ನು ಹಬ್ಬಗಳನ್ನನುಸರಿಸಿ, ಕೋರಿಕೆಗಳನ್ನು ಅನುಸರಿಸಿ ಪೂಜಿಸುವುದರಿಂದ ಚಿತ್ತದಲ್ಲಿ ಸ್ವಲ್ಪವೂ ಶಾಂತಿ ಏರ್ಪಡದೆ ಮನುಷ್ಯ ಅಶಾಂತಿಯಿಂದ ಮುಳುಗಿಹೋಗುತ್ತಿದ್ದಾನೆ. ಆದ್ದರಿಂದ ಜ್ಞಾನ ತಿಳಿದ ಹಿರಿಯರು ಮೇಲಿನ ತತ್ತ್ವದಲ್ಲಿ 'ಚಿಲ್ಲರೆ ಕಲ್ಲುಗಳಿಗೆ ಮುಗಿಯುತ್ತಿದ್ದರೆ ಚಿತ್ತವು ಕೆಡುತ್ತದಯ್ಯಾ' ಎಂದಿದ್ದಾರೆ. ದೈವಜ್ಞಾನ ತಿಳಿದವರು ಚಿಲ್ಲರೆ ದೇವತೆಗಳ ವ್ಯಾಮೋಹದಲ್ಲಿ ಬೀಳದೆ, ಕಾಣಿಸಿದ ಪ್ರತಿ ಗೊಂಬೆಗು ಮುಗಿಯದೆ, ಶರೀರದಲ್ಲಿಯೇ ದೇವರಿದ್ದಾನೆಂದು, ಉಳಿದವರು ಅಸಲಾದ

ದೇವರು ಆಗಲಾರರೆಂದು, ಶರೀರದಲ್ಲಿಯೇ ದೇವರನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನಿಸುತ್ತಿರುತ್ತಾರೆ. ಅಂತವರು 'ಚಿತ್ತದಲ್ಲಿನ ಚಿನ್ಮಯಜ್ಯೋತಿಯನ್ನು ನೋಡಿ ಕೊಳ್ಳುವುದೇ ಒಳ್ಳೆಯದೆಂದು' ತಿಳಿಸಿದ್ದಾರೆ.

**1. ಒಕ್ಕ ಪೊದ್ದುಲನಿ ಎಂಚುಚುಯುಂಟೇ ಒನರುಗ ಚಡುದುವು ಒರೇಯುರೇ**
**ಏಕಮ್ಮೈನ ಆ ವೈಭವಮೂರ್ತಿನಿ ಚೂಚುಚು ನುಂಡುಟ ಸರೇ ಸರೇ**
**||೩||**

ಶರೀರದಲ್ಲಿನ ಪರಮಾತ್ಮನನ್ನು ತಿಳಿದುಕೊಳ್ಳುವ ಜ್ಞಾನವಿಲ್ಲದವರು ಶರೀರಕ್ಕೆ ಹೊರಗಿರುವ ಪ್ರತಿಮೆಗಳನ್ನು ಅನೇಕ ದೇವರುಗಳ ಹೆಸರಿನಿಂದ ಆರಾಧಿಸುತ್ತಿರುತ್ತಾರೆ ಎಂದುಕೊಂಡಿದ್ದೇವಲ್ಲವೇ! ಅಂತಹ ಆರಾಧನೆಗಳಲ್ಲಿ ಉಪವಾಸಗಳು ಇರುವುದು ಕೂಡಾ ಕೆಲವರು ಮಾಡುತ್ತಿರುತ್ತಾರೆ. ಉಪವಾಸ ಗಳಿಂದ ಆರೋಗ್ಯವೇ ಕೆಡುತ್ತದೆ ಹೊರತು ಶರೀರದಲ್ಲಿನ ದೇವರು ತಿಳಿಯುವು ದಿಲ್ಲ. ಉಪವಾಸಗಳಿಂದ ಆತ್ಮಗೆ ಶಕ್ತಿ ಇಲ್ಲದೇ ಹೋಗುತ್ತದೆ. ಆತ್ಮ ಬಲಹೀನ ವಾಗುತ್ತದೆ. ಆದ್ದರಿಂದ ಆತ್ಮವನ್ನು ತೊಂದರೆ ಇಟ್ಟವರಾಗುತ್ತೇವೆ. ಇದೇ ವಿಷಯವನ್ನೇ ಭಗವದ್ಗೀತೆಯಲ್ಲಿ ಶ್ರದ್ಧಾತ್ರಯ ಯೋಗವೆನ್ನುವ ಅಧ್ಯಾಯದಲ್ಲಿ 4, 5, 6ನೇ ಶ್ಲೋಕಗಳಲ್ಲಿ **"ಇತರ ದೇವತೆಗಳ ಪೂಜೆ ಮಾಡುವವರು, ಅಶಾಸ್ತ್ರೀಯ ಪದ್ಧತಿಗಳನ್ನು ಆಚರಿಸುತ್ತಾ, ಅವರು ಬಾಧೆಪಡುವುದೆ ಅಲ್ಲದೇ ಅವರೊಳಗಿರುವ ನನ್ನನ್ನು ಕೂಡಾ ಬಾಧಿಸುತ್ತಾರೆಂದು"** ದೇವರು ಹೇಳಿದಂತೆ ಇದೆ. ಆದ್ದರಿಂದ ಉಪವಾಸಗಳಿಂದ ತಾನಾದ ಜೀವಾತ್ಮ ಬಾಧೆಪಡುವುದೇ ಅಲ್ಲದೇ ಒಳಗಿರುವ ಆತ್ಮವನ್ನು ಕೂಡಾ ಬಾಧಿಸಿದವರಾ ಗುತ್ತಿದ್ದೇವೆ. ಆದ್ದರಿಂದ ಉಪವಾಸಗಳಿಂದ ಏನು ಪ್ರಯೋಜನವಿಲ್ಲವೆಂದು ತಿಳಿಸುತ್ತಾ 'ಒಂದೊತ್ತೆಂದು ಎಣಿಸುತ್ತಿದ್ದರೆ ಕೆಡುತ್ತೀಯಾ' ಎಂದು ಮೇಲಿನ ತತ್ತ್ವದಲ್ಲಿ ಹೇಳಿದ್ದಾರೆ. ಅಷ್ಟೇ ಅಲ್ಲದೆ ಎಲ್ಲಾಕಡೆ ವ್ಯಾಪಿಸಿರುವ ಪರಮಾತ್ಮನನ್ನು ತಿಳಿಯುವುದೇ ಒಳ್ಳೆಯಮಾರ್ಗವೆಂದು ತಿಳಿಸುತ್ತಾ 'ಏಕವಾದ ಆ ವೈಭವಮೂರ್ತಿಯನ್ನು ನೋಡುತ್ತಿರುವುದು ಸರೇ ಸರೇ' ಎಂದಿದ್ದಾರೆ.

**2. ನಿಲ್ವಲೋ ಮುನಿಗಿ ಗೊನುಗುಚುಯುಂಟೆ ನಿಲಕಡ ಚೆಡುನುರ ಒರೇ ಒರೇ ನೀಲೋಯುಂಡೇ ನಿರ್ಮಲ ಜ್ಯೋತಿನಿ ಚೂಚುಚು ನುಂಡುಟ ಸರೇ ಸರೇ ||ಚ||**

ಕೆಲವರು ಮಂತ್ರೋಪದೇಶಗಳನ್ನು ಹೊಂದಿ ಆ ಮಂತ್ರಗಳನ್ನು ನಿಯಮದ ಪ್ರಕಾರ ಜಪಿಸುತ್ತಿರುತ್ತಾರೆ. ಅಂತಹ ನಿಯಮಗಳಲ್ಲಿ ನೀರಿನಲ್ಲಿ ಕುತ್ತಿಗೆವರೆಗು ಇಳಿದು ಇಲ್ಲವೆ ಸೊಂಟದವರೆಗು ಇಳಿದು ಜಪಿಸಬೇಕೆನ್ನುವ ಪದ್ಧತಿಗಳಿರುತ್ತವೆ. ಹಾಗೆ ಜಪಿಸುವುದರಿಂದ ಮಂತ್ರದ ಮೇಲೆ ಧ್ಯಾಸ ಬೆಳೆಯುತ್ತದೆಂದು ಅವರಿಗೆ ನಂಬಿಕೆ. ಈ ವಿಧವಾಗಿ ನೀರಿನಲ್ಲಿ ಇಳಿದು ಮಂತ್ರಜಪ ಮಾಡುವುದರಿಂದ, ನೀರಿನಲ್ಲಿ ಮುಳುಗಿ ಶಿವನ ಜಪ ಮಾಡುವುದರಿಂದ ಇಲ್ಲದ ಆಸ್ಥಮ (ಉಬ್ಬಸ) ರೋಗ ಬರುತ್ತದೆ ಆದರೆ ಮನಸ್ಸು ಸ್ಥಿಮಿತ ವಾಗಿರುವುದಿಲ್ಲ. ಸ್ವಲ್ಪವೂ ಜ್ಞಾನ ಅಭಿವೃದ್ಧಿಹೊಂದುವುದಿಲ್ಲ. ಹಾಗೆ ಹೊರಗಿನ ಪೂಜೆಗಳಿಗೆ ಜಪಗಳಿಗೆ ಅಭ್ಯಾಸವಾಗುವುದರಿಂದ ನಮ್ಮ ಶರೀರದಲ್ಲಿ ಇರುವ ನಿರ್ಮಲ ಜ್ಯೋತಿಯಾದ ಪರಮಾತ್ಮನನ್ನು ತಿಳಿಯಲಾರೆವು. ದೇವರು ತಿಳಯಬೇಕೆಂದರೆ ನಿಜವಾದ ಭಕ್ತಿ ಅಗತ್ಯ. ಆ ನಿಜವಾದ ಭಕ್ತಿ ನಮ್ಮ ಶರೀರದಲ್ಲಿನ ದೇವರ ಮೇಲೆ ತೋರಿಸುವುದೇ ಸರಿಯಾದುದು. ಹಾಗಲ್ಲದೆ ಬಾಹ್ಯಾ ಚರಣೆಗಳಿಂದ, ಅನ್ಯದೇವತೆಗಳ ಆರಾಧನೆಗಳಿಂದ ಯಾರಿಗೂ ಅಂತರಂಗದಲ್ಲಿನ ದೇವರು ತಿಳಿಯುವುದಿಲ್ಲ. ಆದ್ದರಿಂದ ಈ ತತ್ತ್ವದಲ್ಲಿ 'ನೀರಿನಲ್ಲಿ ಮುಳುಗಿ ಗೊನುಗುತ್ತಿದ್ದರೆ ಸ್ಥಿಮಿತವು ಕೆಡುತ್ತದೆ' ಎಂದಿದ್ದಾರೆ. ಅಷ್ಟೇ ಅಲ್ಲದೆ 'ನಿನ್ನಲ್ಲಿರುವ ನಿರ್ಮಲ ಜ್ಯೋತಿಯನ್ನು ನೋಡುತ್ತಿರುವುದು ಸರೇ ಸರೇ' ಎಂದಿದ್ದಾರೆ.

**3. ಬಾಧ ಗುರುವುಲ ಪಂಚನು ಜೇರಿತೇ ಭಾವಮು ಚೆಡುನುರ ಒರೇ ಯೊರೇ ಭಾವಮಂದುನ ಬ್ರಹ್ಮಕಾಂತಿನಿ ಚೂಚುಚು ನುಂಡುಟ ಸರೇ ಸರೇ ||ಚ||**

ಈಗಿನ ಕಾಲದಲ್ಲಿ ಭೂಮಿಮೇಲೆ ಎರಡು ವಿಧಗಳ ಗುರುಗಳು ಇದ್ದಾರೆ. ಒಂದು ವಿಧ ಬಾಧೆ ಗುರುಗಳು, ಎರಡನೆ ವಿಧ ಬೋಧ ಗುರುಗಳು. ಶರೀರಕ್ಕೆ

ಕೆಲಸ ಕಲ್ಪಿಸಿ ಅದರ ಮೂಲಕ ದೇವರನ್ನು ತಿಳಿದುಕೊಳ್ಳಬಹುದೆಂದು ತಿಳಿಸುವವರು ಬಾಧೆ ಗುರುಗಳು. ಶರೀರಕ್ಕೆ ಬಾಧೆಯನ್ನು ಕಲ್ಪಿಸುವವರೆಲ್ಲರೂ ಬಾಧೆ ಗುರುಗಳೇ. ಉದಾಹರಣೆಗೆ 'ದೇವರ ಪ್ರತಿಮೆಗೆ ಪ್ರದಕ್ಷಿಣೆಗಳು ಮಾಡಿರೆಂದು ಹೇಳುವ ಗುರುಗಳು ಬಾಧೆಗುರುಗಳೇ' ಆಗುತ್ತಾರೆ. ಹಾಗೆ ಪ್ರದಕ್ಷಿಣೆ ಮಾಡುವುದು ಕೆಲಸ ಆಗುತ್ತಿದೆ ಅದರಿಂದ ಶರೀರಕ್ಕೆ ಶ್ರಮ ಏರ್ಪಡುತ್ತಿದೆ. ಈ ವಿಧವಾಗಿ ಶರೀರದೊಂದಿಗೆ ಮಾಡುವ ಆರಾಧನೆಗಳನ್ನು ಹೇಳುವವರಾಗಲಿ, ಮಂತ್ರ ಹೇಳುವ ಗುರುಗಳಾಗಲಿ ಬಾಧೆಗುರುಗಳೇ ಆಗುತ್ತಾರೆ. ಈ ವಿಷಯವನ್ನೇ ವೇಮನಯೋಗಿ ತನ್ನ ಪದ್ಯದಲ್ಲಿ. ..

**ಕರ್ಮಲ ಚೆಪ್ಪುವಾಡು ಕಡಗುರುಡು**
**ಮಂತ್ರಮು ಚೆಪ್ಪುವಾಡು ಮಧ್ಯಮ ಗುರುಡು**
**ಊರುಕುಂಡುಮನು ವಾಡು ಉತ್ತಮ ಗುರುಡು**
**ವಿಶ್ವದಾಭಿರಾಮ ವಿನರವೇಮಾ.**

ಎಂದಿದ್ದಾನೆ. ಶರೀರ ಶ್ರಮವನ್ನು ಉಂಟುಮಾಡುವ ಬೋಧನೆಗಳನ್ನು ಮಾಡುವವರೆಲ್ಲರೂ ಬಾಧೆಗುರುಗಳೆಂದು ಹೇಳುವುದೇ ಈ ಪದ್ಯದಲ್ಲಿನ ಅಂತರಾರ್ಥ. ಭಕ್ತಿಯಲ್ಲಿ ಕೆಲಸಗಳು ಹೇಳುವವರು ಕಡಿಮೆ ಗುರುವೆಂದು, ಹಾಗೇ ಮಂತ್ರ ಹೇಳಿ ಅದರ ಕೆಲಸದಲ್ಲಿ ಇರು ಎನ್ನುವವನು ಮಧ್ಯಮ ಗುರುವೆಂದು ವೇಮನಯೋಗಿ ಹೇಳಿದ್ದಾನೆ. ಹಾಗೇ ಶರೀರದೊಂದಿಗೆ ಯಾವ ಕೆಲಸಗಳು ಇಲ್ಲದೇ, ಮನಸ್ಸಿಂದಲು ಕೂಡಾ ಕೆಲಸವಿಲ್ಲದೇ, ಯಾವ ಸಂಕಲ್ಪ ಇಲ್ಲದೇ ಇರು ಎಂದು ಬೋಧಿಸುವವನು ಉತ್ತಮಗುರುವೆಂದು ಆತನೇ ಬೋಧನೆ ಗುರುವೆಂದು, ಹಾಗೆ ಹೇಳದಂತೆ ಮನಸ್ಸಿನಿಂದಾಗಲಿ, ಶರೀರ ದಿಂದಾಗಲಿ ಕೆಲಸ ಕಲ್ಪಿಸುವ ಬೋಧನೆ ಮಾಡುವವರೆಲ್ಲರೂ ಬಾಧೆ ಗುರುಗಳೆಂದು ಹೇಳಿದ್ದಾರೆ. ಆದ್ದರಿಂದ ಈ ತತ್ತ್ವದಲ್ಲಿ 'ಬಾಧೆ ಗುರುಗಳ ಬಳಿ ಸೇರಿದರೇ ಭಾವನೆ ಕೆಡುತ್ತದೆ' ಎಂದಿದ್ದಾರೆ. ಮನಸ್ಸನ್ನು ನಿಲ್ಲಿಸಿ ಆತ್ಮ ದರ್ಶನವನ್ನು ಮಾಡಿಕೊಳ್ಳುವುದು ಸರಿಯಾದ ಪದ್ಧತಿಯೆಂದು ತಿಳಿಸುತ್ತಾ 'ಭಾವನೆಯಲ್ಲಿರುವ ಬ್ರಹ್ಮಕಾಂತಿಯನ್ನು ನೋಡುತ್ತಿರುವುದು ಸರೇ ಸರೇ' ಎಂದಿದ್ದಾರೆ.

**4. ಭೂಮುಲು ಅಡವುಲು ತಿರುಗುಚುನುಂಟೇ ಬುದ್ಧುಲು ಚೆಡುನುರ**
**ಒರೇಯೊರೇ ಬುದ್ಧಿಲೋಯುಂಟೇ ಪುನ್ನಮಿಚಂದ್ರುನಿ ಚೂಚುಚು**
**ನುಂಡುಟ ಸರೇ ಸರೇ ||ಚ||**

ಎಷ್ಟೋಜನ ದೈವಭಕ್ತಿ ಹೊಂದಿದವರು ಇದ್ದಾರೆ. ಅವರಿಗೆ ದೈವಭಕ್ತಿ ಇದೆ ಆದರೆ ದೇವರ್‍ಯಾರೆಂದು ತಿಳಿದಿಲ್ಲ. ಹಾಗೆ ತಿಳಿಯದೆ ಹೋಗುವುದರಿಂದ ತೀರ್ಥಯಾತ್ರೆಗಳೆನ್ನುವ ಹೆಸರಿನಿಂದ ಎಷ್ಟೋಜನ ದೇವರುಗಳನ್ನು ದರ್ಶಿಸುತ್ತಿರುತ್ತಾರೆ. ಎಷ್ಟೋ ಪುಣ್ಯಕ್ಷೇತ್ರಗಳನ್ನು ನೋಡುತ್ತಿರುತ್ತಾರೆ. ಈ ವಿಧವಾಗಿ ಮಾಡಿದರೂ ಅಸಲಾದ ಜ್ಞಾನ ತಿಳಿದಿಲ್ಲ, ಅಸಲಾದ ದೇವರು ತಿಳಿಯಲ್ಪಡುವುದಿಲ್ಲ. ತೀರ್ಥಯಾತ್ರೆಗಳಿಂದ ಪುಣ್ಯಕ್ಷೇತ್ರಗಳನ್ನು ದರ್ಶಿಸುವುದರಿಂದ ಪುಣ್ಯ ಬರುತ್ತದೇನೊ ಆದರೆ ಜ್ಞಾನ ಮಾತ್ರ ಬರುವುದಿಲ್ಲ. ಅವು ಕೇವಲ ಪುಣ್ಯಕ್ಷೇತ್ರಗಳು ಮಾತ್ರವೆ, ಆದರೆ ಜ್ಞಾನ ಕ್ಷೇತ್ರಗಳು ಅಲ್ಲ ಅಲ್ಲವೆ! ಭೂಮಿ ಮೇಲೆ ಕೆಲವು ಕ್ಷೇತ್ರಗಳನ್ನು ದರ್ಶಿಸಿ ದೈವದರ್ಶನ ಮಾಡಿಕೊಂಡಿದ್ದೇ ವೆಂದುಕೊಳ್ಳುವುದು ಬಹಳ ತಪ್ಪು. ನಿಜ ದೈವವು ಕೆಲವು ಪುಣ್ಯಕ್ಷೇತ್ರಗಳಲ್ಲಿಯೇ ಅಲ್ಲದೇ ಭೂಗೋಳವೆಲ್ಲವೂ ತುಂಬಿದ್ದಾನೆ. ದೇವರು ಬಾಹ್ಯವಾಗಿ ತಿಳಿಯುವ ವನಲ್ಲ, ಆದ್ದರಿಂದ ಶರೀರವೆನ್ನುವ ಕ್ಷೇತ್ರದೊಳಗೇ ದರ್ಶಿಸಿಕೊಳ್ಳಬೇ ಕಾಗಿದೆ. ಆ ವಿಷಯ ನಮಗೆ ತಿಳಿಯುವುದಕ್ಕೆ ಈ ತತ್ತ್ವದಲ್ಲಿ 'ಭೂಮಿಗಳು ಕಾಡುಗಳು ತಿರುಗುತ್ತಿದ್ದರೆ ಬುದ್ದಿಗಳು ಕೆಡುತ್ತವೆ' ಎಂದಿದ್ದಾರೆ. ಶರೀರದಲ್ಲಿಯೇ ದೈವವು ತಿಳಿಯತ್ತದೆಂದು ಹೇಳುವುದಕ್ಕೆ 'ಬುದ್ಧಿಯಲ್ಲಿರುವ ಹುಣ್ಣಿಮೆ ಚಂದ್ರನನ್ನು ನೋಡುತ್ತಿರುವುದು ಸರೇ ಸರೇ' ಎಂದಿದ್ದಾರೆ. ಈ ತತ್ತ್ವವನ್ನು ನೋಡಿದ ನಂತರವಾದರೂ ನಾವು ಬಾಹ್ಯವಾಗಿರುವ ಭಕ್ತಿಯನ್ನು ಬಿಟ್ಟು ಅಂತರಂಗದಲ್ಲಿ ಭಕ್ತಿಯನ್ನು ಹೊಂದಿ ಒಳಗೇ ಇರುವ ದೇವರನ್ನು ತಿಳಿಯಬೇಕೆಂದು ತಿಳಿಸುತ್ತಿದ್ದೇವೆ.

# 7. ತತ್ತ್ವ

**ನೇಜೂಚಿನಾನೇ ಬ್ರಹ್ಮಮುನಾಲೋ ನೇಜೂಚಿನಾನೇ ಸದ್ಗುರುನಾಲೋ ನೇಜೂಚುನಾನೇ ನೇಜೂಚಿನಾನೇ ತಲೆಯಲ್ಲಿ ತಾರಕಯೋಗಮಂದು ರಂಜಿಲ್ಲು ನಾಗುರುನಿ ನೇಜೂಚಿನಾನೇ**

**1.** **ಕನ್ನುಲ ನಡುಮನು ಸನ್ನಪು ದಿಡ್ಡಿನ ತಿನ್ನಗಾ ವೆಲಿಗೇಟಿ ಪುನ್ನಮಿ ಚಂದ್ರನಿ ನೇಜೂಚಿನಾನೇ** ||ನೇಜೂ||

**2.** **ಪಾಲಭಾಗಮಂದು ನೀಲಜ್ಯೋತುಲ ನಡುಮ ನೋಲಲಾಡುಚುನ್ನ ಪರಲಿಂಗ ಮೂರ್ತಿನಿ ನೇಜೂಚಿನಾನೇ** ||ನೇಜೂ||

**3.** **ಚೂಪುಲೋಪಲ ಪಾಪಲ ನಡುಮನು ವ್ಯಾಪಿಂಚಿ ವೆಲಿಗೇಟಿ ಆ ಪರಂಜ್ಯೋತಿನಿ ನೇಜೂಚಿನಾನೇ** ||ನೇಜೂ||

**4.** **ಚಕ್ಷುರಾಗ್ರಮುನಂದು ಪಶ್ಚಿಮವೀಧಿನಿ ನಿಕ್ಷೇಪಮ್ಮೈ ವೆಲುಗು ಸಾಕ್ಷಿಭೂತುನಿ ನೇಜೂಚಿನಾನೇ** ||ನೇಜೂ||

**5.** **ಚಂದಮಾಮಕು ನಡುಮನು ಕುಂಡಲಾಕೃತಿಯನ್ನು ಆನಂದಮುಗ ನುನ್ನ ಹರಿ ಗೋವಿಂದುನಿ ನೇಜೂಚಿನಾನೇ** ||ನೇಜೂ||

**ವಿವರ :–** ಇದಕ್ಕು ಮೊದಲಿರುವ ತತ್ತ್ವದಲ್ಲಿ "ಬಾಹ್ಯವಾಗಿ ದೇವರನ್ನು ತಿಳಿಯಲಾರೆವು" ಎಂದು ತಿಳಿದುಕೊಂಡಿದ್ದೇವೆ. ಆ ವಿಷಯ ತಿಳಿದ ಕೆಲವರು ಅಂತರ್ಮುಖ ಜ್ಞಾನವನ್ನು ಸಂಪಾದಿಸಿ ಹೊರಗಿನ ಚಿಂತೆಗಳು ಬಿಟ್ಟು ಶರೀರದ ಒಳಗೇ ಆತ್ಮವನ್ನು ದರ್ಶಿಸಿಕೊಂಡ ವಿಧಾನವನ್ನು ಈಗಿನ ತತ್ತ್ವದಲ್ಲಿ ತಿಳಿಸಿದ್ದಾರೆ. ಅವರು ಶರೀರದಲ್ಲಿ ತಿಳಿದುಕೊಂಡ ವಿಧಾನವನ್ನು ಕುರಿತು ಏನನ್ನುತ್ತಿದ್ದಾರೋ ಕೆಳಗೆ ನೋಡೋಣ.

"ಬ್ರಹ್ಮ" ಎಂದರೇ ದೊಡ್ಡದು ಎಂದು ಅರ್ಥ, ಬ್ರಹ್ಮ ಎಂದರೇ ಪ್ರಪಂಚದಲ್ಲಿ ಎಲ್ಲದಕ್ಕಿಂತ ದೊಡ್ಡದು ದೈವ. ಆದ್ದರಿಂದ ದೇವರನ್ನು 'ಬ್ರಹ್ಮ' ಎಂದು ಕರೆಯುತ್ತಿದ್ದೇವೆ. ಬ್ರಹ್ಮ ಎಂದರೇ ತ್ರಿಮೂರ್ತಿಗಳಲ್ಲಿ ಒಬ್ಬರಾದ ಮೂರುತಲೆಗಳ ಬ್ರಹ್ಮನೆಂದು ಇಲ್ಲಿ ಅಂದುಕೊಳ್ಳಬಾರದು. ಹಾಗೇ ಗುರು ಎಂದರೂ ದೇವರೆಂದೇ ಇಲ್ಲಿ ಅರ್ಥ ಮಾಡಿಕೊಳ್ಳಬೇಕು, ಆದರೆ ಮಂತ್ರೋಪದೇಶಕೊಡುವ ಗುರುವು ಎಂದು ಅಂದುಕೊಳ್ಳಬಾರದು. ಶರೀರದಲ್ಲಿ ಯೋಗದ ಮೂಲಕವೇ ಆತ್ಮವನ್ನು ತಿಳಿಯಬಹುದು. ಶರೀರದಲ್ಲಿ ಧ್ಯಾಸವಿಟ್ಟು ಆತ್ಮವನ್ನು ತಿಳಿಯುವ ವಿಧಾನವನ್ನು ಯೋಗ ಎನ್ನುತ್ತಿದ್ದೇವೆ. ಈ ವಿಧವಾಗಿ ಯೋಗದ ಮೂಲಕ ಒಳಗಿನ ಆತ್ಮವನ್ನು ನಾ ತಿಳಿದುಕೊಂಡಿದ್ದೇನೆಂದು ಒಬ್ಬ ಯೋಗಿ ಹೇಳುತ್ತಾ 'ನಾ ನೋಡಿದ್ದೇನೆ ನನ್ನಲ್ಲಿ ಬ್ರಹ್ಮವನ್ನು ನಾನೋಡಿದ್ದೇನೆ' ಎಂದಿದ್ದಾನೆ..

**1. ಕನ್ನುಲ ನಡುಮನು ಸನ್ನಪು ದಿಡ್ಡಿನ ತಿನ್ನಗಾ ವೆಲಿಗೇಟಿ ಪುನ್ನಮಿ ಚಂದ್ರನಿ ನೇಜೂಚಿನಾನೇ ||ನೇಜೂ||**

ಎರಡು ಕಣ್ಣುಗಳ ನಡುವೆ ಶರೀರದ ಒಳಗೆ ಮೂರು ನಾಡಿಗಳ ಕೂಡುವಿಕೆ ಇದೆ. ಶರೀರದೊಳಗೆ ಮೂರುಲಕ್ಷಗಳ ಐವತ್ತುಸಾವಿರ ನಾಡಿಗಳಲ್ಲಿ ಮುಖ್ಯವಾದವು ಸೂರ್ಯ, ಚಂದ್ರ, ಬ್ರಹ್ಮನಾಡಿಗಳು. ಈ ಮೂರುನಾಡಿಗಳಲ್ಲಿ ಸೂರ್ಯ, ಚಂದ್ರನಾಡಿಗಳು ಬ್ರಹ್ಮನಾಡಿಯೊಂದಿಗೆ ಕಣ್ಣುಗಳ ಮಧ್ಯದಲ್ಲಿಯೇ ಬೆರೆತುಹೋಗುತ್ತಿವೆ. ಇದನ್ನೇ ತ್ರಿಕೂಟ ಸ್ಥಾನ ಎನ್ನುತ್ತೇವೆ. ಈ ಸ್ಥಾನದಲ್ಲಿಯೇ ಮನುಷ್ಯನ ಜ್ಞಾಪಕ (ಯಾದ್) ಎಲ್ಲವೂ ಇರುತ್ತದೆ. ಈ ಜ್ಞಾಪಕವನ್ನೇ ಆತ್ಮ ಎನ್ನುತ್ತೇವೆ. ಮನುಷ್ಯ ಯೋಗದಿಂದ ಮನಸ್ಸೊಂದರ ಸಂಕಲ್ಪಗಳನ್ನು ಇಲ್ಲದಂತೆ ಮಾಡಿಕೊಂಡರೂ, ಯಾವ ಆಲೋಚನೆಯಿಲ್ಲದ ಜ್ಞಾಪಕ ಮಾತ್ರ ಉಳಿದುಹೋಗುತ್ತದೆ. ಆಲೋಚನೆಯಿಲ್ಲದ ಜ್ಞಾಪಕವನ್ನು ನೋಡುತ್ತಿರುವುದೇ ನಿಜವಾದ ಯೋಗವಾಗುತ್ತದೆ. ಆಗ ತಿಳಿಯಲ್ಪಡುವ ಆತ್ಮವನ್ನು ಹುಣ್ಣಿಮೆ ಚಂದ್ರನಿಗೆ ಹೋಲಿಸಿ ಈ ತತ್ತ್ವದಲ್ಲಿ 'ಕಣ್ಣುಗಳ ನಡುವೆ ಸೂಕ್ಷ್ಮವಾಗಿ ಹೊಳೆಯುವ ಹುಣ್ಣಿಮೆ ಚಂದ್ರನನ್ನು ನಾ ನೋಡಿದ್ದೇನೆ' ಎಂದಿದ್ದಾರೆ. ಇಲ್ಲಿ

'ಚಿಕ್ಕದಾಗಿ' ಎಂದರೇ 'ಬ್ರಹ್ಮನಾಡಿಯಲ್ಲಿ ಸೂಕ್ಷ್ಮವಾಗಿರುವ' ಎಂದು ಅರ್ಥ. 'ಹೊಳೆಯುವ ಹುಣ್ಣಿಮೆ ಚಂದ್ರನು' ಎಂದರೇ ತ್ರಿಕೂಟ ಸ್ಥಾನದಲ್ಲಿರುವ **ಆತ್ಮ** ಎಂದು ಅರ್ಥ.

**2. ಪಾಲಭಾಗಮಂದು ನೀಲಜ್ಯೋತುಲ ನಡುಮ ನೋಲಲಾಡುಚುನ್ನ ಪರಲಿಂಗ ಮೂರ್ತಿನಿ ನೇಜೂಚಿನಾನೇ ॥ನೇಜೂ॥**

ಇದೇ ವಿಷಯವನ್ನೇ ಕೆಳಗಿನ ಚರಣದಲ್ಲಿ ಕೂಡಾ ಹೇಳುತ್ತಿದ್ದಾರೆ. ತಲೆ ಭಾಗದಲ್ಲಿ ಒಳಗೆ ಎರಡು ನಾಡಿಗಳ ನಡುವೆ ಇರುವ ಬ್ರಹ್ಮನಾಡಿಯಲ್ಲಿ ಆತ್ಮ ನಿವಾಸಿಸುತ್ತಿದೆ. ಆದ್ದರಿಂದ 'ತಲೆಭಾಗದಲ್ಲಿ ನೀಲಜ್ಯೋತಿಗಳ ನಡುವೆ ಲೋಲಾಡುತ್ತಿರುವ ಪರಲಿಂಗ ಮೂರ್ತಿಯನ್ನು ನಾನೋಡಿದ್ದೇನೆ' ಎಂದಿದ್ದಾರೆ. ಇಲ್ಲಿ ಲಿಂಗಮೂರ್ತಿ ಎಂದರೇ ಆತ್ಮ ಎಂದೂ, ನೀಲಜ್ಯೋತಿಗಳ ನಡುವೆ ಎಂದರೇ ಸೂರ್ಯ ಚಂದ್ರ ನಾಡಿಗಳ ಮಧ್ಯೆ ಎಂದು ಅರ್ಥ.

**3. ಚೂಪುಲೋಪಲ ಪಾಪಲ ನಡುಮನು ವ್ಯಾಪಿಂಚಿ ವೆಲಿಗೇಟಿ ಆ ಪರಂಜ್ಯೋತಿನಿ ನೇಜೂಚಿನಾನೇ ॥ನೇಜೂ॥**

ಶರೀರ ಮಧ್ಯದಲ್ಲಿರುವ ಬ್ರಹ್ಮನಾಡಿಯಲ್ಲಿ ಆತ್ಮ ನಿವಾಸವಿರುತ್ತಾ ಶರೀರವೆಲ್ಲಾ ವ್ಯಾಪಿಸಿದೆ. ಪ್ರಪಂಚ ವಸ್ತುಗಳನ್ನು ತೋರಿಸುವ ಕಣ್ಣಿನಲ್ಲಿರುವ ದೃಷ್ಠಿಗೆ ಕಾಂತಿಕೊಡುವುದು ಆತ್ಮವೇ. ಆದ್ದರಿಂದ 'ದೃಷ್ಠಿಯೊಳಗೆ ಕಣ್ಣ ಪಾಪೆಗಳ ನಡುವೆ ವ್ಯಾಪಿಸಿ ಬೆಳಗುವ ಪರಂಜ್ಯೋತಿಯನ್ನು ನಾನೋಡಿದ್ದೇನೆ' ಎಂದಿದ್ದಾರೆ. ಪರಂಜ್ಯೋತಿ ಎಂದರೇ ಆತ್ಮ ಎಂದು ಅರ್ಥ.

**4. ಚಕ್ಷುರಾಗ್ರಮುನಂದು ಪಶ್ಚಿಮವೀಥಿನಿ ನಿಕ್ಷೇಪಮ್ಮೆ ವೆಲುಗು ಸಾಕ್ಷಿಭೂನಿ ನೇಜೂಚಿನಾನೇ ॥ನೇಜೂ॥**

ಇದೇ ವಿಷಯವನ್ನೇ ಕೆಳಗಿನ ಚರಣದಲ್ಲಿ ಕೂಡಾ ಹೇಳಿದ್ದಾರೆ. ಕಣ್ಣುಗಳ ತುದಿಗಳಿಗೆ ಮುಂದಿರುವ ಸ್ಥಾನದಲ್ಲಿ ನಿವಾಸವಿರುವ ಆತ್ಮವನ್ನು

ನೋಡಿದ್ದೇನೆಂದು ಹೇಳುತ್ತಾ 'ಚಕ್ಷುರಾಗ್ರದಲ್ಲಿ ಪಶ್ಚಿಮ ಬೀದಿಯನ್ನು ನಿಕ್ಷೇಪವಾಗಿ ಬೆಳಗುವ ಸಾಕ್ಷಿಭೂತನನ್ನು ನನ್ನಲ್ಲಿ ನಾನೋಡಿದ್ದೇನೆ' ಎಂದಿದ್ದಾರೆ.

**5. ಚಂದಮಾಮಕು ನಡುಮನು ಕುಂಡಲಾಕ್ಕತಿಯನ್ನು ಆನಂದಮುಗ**
**ನುನ್ನ ಹರಿ ಗೋವಿಂದುನಿ ನೇಜೂಚಿನಾನೇ ॥ನೇಜೂ॥**

ಜ್ಞಾನದಲ್ಲಿ ಸಾರಾಂಶವಾಗಿದ್ದು ಜ್ಞಾನ ಮಧ್ಯದಲ್ಲಿ ತೇಲಾಡುತ್ತಿರುವ ಕಿವಿ ಎಳೆಯಂತೆ ಮೆರೆಯುತ್ತಾ ಆನಂದವೆನ್ನುವ ಹೆಸರಿನಿಂದಿರುವ ಆತ್ಮವನ್ನು ನಾ ನೋಡಿದ್ದೇನೆ.

# 8. ತತ್ತ್ವ

**ಮೂರುಕಾಲ್ವಲು ದಾಟಲೇರಯ್ಯಾ ಇಲ ಮೂಢಜನುಲು ಮೂರು ಕಾಲ್ವಲು ದಾಟಲೇರಯ್ಯಾ ಮೂಡುಕಾಲ್ವಲತೋನು ಕೂಡುಚು ಇಡ ಪಿಂಗಳ ಮಧ್ಯಮಂಬುನ ಸೇರಿವುಂಡನಿ ಮೂಢು ಲೆಲ್ಲರು**

**1. ಓಡ ಲೇಕನು ಈದ ಬೊಯ್ಯೇರು – ಸಂಸಾರವಾರಧಿಲೋ ಜಾಡ**
**ತಿಳಿಯದೆ ಮುನಿಗಿಪೊಯ್ಯೇರು ಆತ್ಮಜ್ಞಾನವನ್ನು ಓಡನೆಕ್ಕಿ–**
**ಏಡುಕೊಂಡಲು ದಾಟಲೇನಿ ಮೂಢುಲೆಲ್ಲರು ॥ಮೂಡು ಕಾಲ್ವಲು॥**

**2. ಬಂಡರಾಳ್ಳಕು ಮ್ರುಕ್ಕಬೋಯ್ಯೇರು – ಅಜ್ಞಾನಪೂಜೆಗಲು**
**ಚೇಯಪೂನೇರು ಚೇತಿಲೋನಿ ಜ್ಞಾನಮೇರುಗಕ – ಚೇತುಲೆತ್ತಿ**
**ಮ್ರೊಕ್ಕು ಮೂಢುಲೆಲ್ಲರು ॥ಮೂಡು ಕಾಲ್ವಲು॥**

**3. ಬಾಧಗುರುವುಲ ಪಂಚಚೇರೇರು – ಬೋಧನೆರುಗಕ**
**ಘೋರವಾಗಿಮೋಸ ಪೊಯ್ಯೇರು ಬೋಧಲೋನಿ ಜ್ಞಾನಮೆರುಗಕ –**
**ತತ್ತ್ವಮಂತ ತೆಲುಸುನನು ಮೂಢುಲೆಲ್ಲರು ॥ಮೂಡು ಕಾಲ್ವಲು॥**

**4. ವೇದಮಂತ್ರಗಳು ಗೊನುಗು ನೇರ್ಚೇರು – ಬಾಹ್ಯಯಜ್ಞಗಳು**
**ಚೇಯಪೂನೇರು ಮಂತ್ರಮುಲೋನಿ ಮರ್ಮಮೆರುಗಕ –**
**ಯಜ್ಞಮುಲೋನಿ ಚಾವ ತಿಳಿಯದ ಮೂಢುಲೆಲ್ಲರು ॥ಮೂಡು ಕಾಲ್ವಲು॥**

**5. ಉಪದೇಶಮಂಟು ಊರ್ಲು ತಿರಿಗೇರು – ಸನ್ಯಾಸಮಂಟು ಭಾರ್ಯಪಿಲ್ಲಲ**
**ವದಲಿಪೊಯ್ಯೇರು ಉಪದೇಶಮುಲೋನಿ ಪ್ರದೇಶ ತೆಲಿಯಕ –**
**ಸನ್ಯಾಸಮುಲೋನಿ ಸಾರ ತೆಲಿಯನಿ ಮೂಢುಲೆಲ್ಲರು**
**॥ಮೂಡು ಕಾಲ್ವಲು॥**

**6. ರಾಗಮುಲ ಭಜನ ಚೇಯಪೂನೇರು – ಸನ್ಮಾರ್ಗಲನು ಲೆಕ್ಕಚೇಯಕ**
**ಮಾಟಲಾಡೇರು ಭಜನಲೋನಿ ಮರ್ಮಮೆರುಗಕ – ಸನ್ಮಾರ್ಗಲಲೋನಿ**
**ಜ್ಞಾನಮೆರುಗನಿ ಮೂಢುಲೆಲ್ಲರು ॥ಮೂಡು ಕಾಲ್ವಲು॥**

**ವಿವರ :–** ಮೂರು ಕಾಲುವೆಗಳೇನು? ಆರು ಕಾಲುವೆಗಳಾದರೂ ದಾಟುತ್ತೇವೆನ್ನುವವರು ಇದ್ದಾರೆ. ಬಾಹ್ಯವಾಗಿರುವ ಕಾಲುವೆಗಳಾದರೆ ಎಷ್ಟಾದರೂ ದಾಟಬಹುದು. ಆದರೆ ಇಲ್ಲಿ ಹೇಳಿರುವುದು ಹೊರಗಿನ ಕಾಲುವೆಗಳಲ್ಲ. ಅಂತರಂಗದಲ್ಲಿರುವ ಕಾಲುವೆಗಳು. ಮನುಷ್ಯ ಯಾವಾಗಲೂ ಹೊರಗಿನ ವಿಷಯಗಳನ್ನೇ ನೋಡುತ್ತಿರುತ್ತಾನೆ, ಯೋಚಿಸುತ್ತಿರುತ್ತಾನೆ. ತನ್ನ ಶರೀರದೊಳಗೆ ಎಂದಿಗೂ ಆಲೋಚಿಸುವುದಿಲ್ಲ, ಆದ್ದರಿಂದ ಅಂತರಂಗವೊಂದರ ವಿಷಯ ಬಹಳಜನರಿಗೆ ತಿಳಿಯದೇ ಹೋಗಿದೆ. ಹೊರಗೆ ಒಂದು ಹೆಸರು ಬಳಸಿ ಸಂಚರಿಸುವ ಮನುಷ್ಯ ತನ್ನ ಶರೀರವನ್ನು ನೋಡಿಕೊಂಡು ಶರೀರವೇ ತಾನೆಂದು ಭ್ರಮಿಸುತ್ತಿದ್ದಾನೆ. ವಾಸ್ತವಕ್ಕೆ ಶರೀರ ಬೇರೆ, ನಾನು ಬೇರೆಯೆಂದು ತಿಳಿಯುತ್ತಿಲ್ಲ. ನಾನು ಎಂದುಕೊಳ್ಳುವವನು ಜೀವಿಯಾಗಿದ್ದು, ಶರೀರ ಜೀವಿಯು ನಿವಾಸಿಸುವುದಕ್ಕೆ ಮನೆಯಂತೆ ಇದೆ. ಶರೀರ ಗೃಹದಲ್ಲಿ ನಿವಾಸಿಸುವ ಜೀವಿಯು ಸ್ವಲ್ಪ ಜ್ಞಾನ ತಿಳಿದುಕೊಂಡಾಗಲೇ ತಾನು ಬೇರೆ, ಶರೀರ ಬೇರೆಯೆಂದು ತಿಳಿಯಬಲ್ಲನು. ತಾನು ಬೇರೆಯೆಂದು ತಿಳಿದ ನಂತರ ಶರೀರದಲ್ಲಿ ತಾನು ಹೇಗೆ ನಿವಾಸಿಸುತ್ತಿರುವುದು, ಹೇಗೆ ವ್ಯವಹರಿಸುತ್ತಿರುವುದು ತಿಳಿಯಬಲ್ಲನು.

ಆಗ ತಾನು ನಿವಾಸಿಸುವ ಶರೀರ ಒಂದು ಯಂತ್ರದಂತಹದ್ದೆಂದು, ಯಂತ್ರದಲ್ಲಿ ಎಷ್ಟೋ ಭಾಗಗಳಿರುವಂತೆ ಶರೀರದಲ್ಲಿ ಕೂಡಾ ಎಷ್ಟೋ ಭಾಗಗಳಿವೆಯೆಂದು ತಿಳಿಯುತ್ತಿದೆ. ಅಷ್ಟೇ ಅಲ್ಲದೆ ಶರೀರದಲ್ಲಿನ ಭಾಗಗಳು ಒಂದೊಂದು ಒಂದೊಂದು ವಿಧವಾಗಿ ಕೆಲಸ ಮಾಡುವುದರಿಂದ ತಾನು ಶರೀರದಲ್ಲಿ ನಿವಾಸಿಸುತ್ತಿದ್ದಾನೆಂದು ಕೂಡಾ ತಿಳಿಯುತ್ತಿದೆ. ಹೀಗೆ ತಿಳಿದುಕೊಳ್ಳುತ್ತಾ ಹೋದರೆ ಎಷ್ಟೋ ರಹಸ್ಯಗಳು ತಿಳಿಯಬಲ್ಲವು.

ನಮ್ಮ ಶರೀರದಲ್ಲಿ ಮೂರು ವಿಧಗಳಾದ ಗುಣ ಭಾಗಗಳಿವೆಯೆಂದು, ಒಂದೊಂದು ಭಾಗದಲ್ಲಿ ಹನ್ನೆರಡು ಗುಣಗಳು ಇವೆಯೆಂದು ಅವುಗಳ ಪ್ರಭಾವದಿಂದ ಯೋಚಿಸುತ್ತಿದ್ದೇವೆಂದು ತಿಳಿಯಬಲ್ಲನು. ಮಾನವನು ದೇವರ ಕಡೆ ಹೋಗದಂತಿರುವುದಕ್ಕೆ ಈ ಮೂರು ಗುಣಭಾಗಗಳೇ ದೊಡ್ಡ ಆತಂಕ. ಇವುಗಳನ್ನೇ ಮಾಯೆ ಎಂದು ಕೂಡಾ ಕರೆಯುತ್ತೇವೆ. ಪ್ರಯಾಣಿಕನಿಗೆ ದಾಟಲಾರದ ಕಾಲುವೆಗಳು ಅಡ್ಡವಾದಂತೆ, ದೈವಮಾರ್ಗದಲ್ಲಿ ಪ್ರಯಾಣಿಸುವವನಿಗೆ ಮೂರು ಗುಣಗಳು ದಾಟಲಾರದ ಮೂರು ಕಾಲುವೆಗಳಾಗಿ ಅಡ್ಡವಾಗಿವೆ. ಮೂರು ಗುಣಗಳನ್ನು ಜಯಿಸುವುದು ದುಸ್ಸಾಧ್ಯವಾದ ಕೆಲಸವೆಂದು ಭಗವದ್ಗೀತೆಯಲ್ಲಿ ಕೃಷ್ಣನು ಕೂಡಾ **"ಗುಣಮಯಿ ಮಮ ಮಾಯಾ ದುರತ್ಯಯಾ"** ಎಂದಿದ್ದಾನೆ. ಗುಣರೂಪದಲ್ಲಿರುವ ಮಾಯೆಯನ್ನು ದಾಟುವುದು ದುಸ್ಸಾಧ್ಯವಾದ ಕೆಲಸ ಎಂದು ಇದರ ಅರ್ಥ. ತಾಮಸ, ರಾಜಸ, ಸಾತ್ತ್ವಿಕವೆನ್ನುವ ಮೂರು ಗುಣಗಳನ್ನೇ ಈ ತತ್ತ್ವದಲ್ಲಿ ಮೂರು ಕಾಲುವೆಗಳೆಂದಿದ್ದಾರೆ. ಸ್ವಲ್ಪ ಜ್ಞಾನ ಇರುವವರೇ ದಾಟುವುದಕ್ಕೆ ಸಾಧ್ಯವಾಗದ ಗುಣಗಳನ್ನು ಜ್ಞಾನವಿಲ್ಲದ ಮೂಢರು ಸ್ವಲ್ಪವೂ ದಾಟಲಾರರು. ಆದ್ದರಿಂದ ಮೂರು ಕಾಲುವೆಗಳು ದಾಟಲಾರರಯ್ಯಾ ಇಹ ಮೂಢಜನರು ಮೂರು ಕಾಲುವೆಗಳು ದಾಟಲಾರರಯ್ಯಾ ಎಂದಿದ್ದಾರೆ.

**1. ಓಡ ಲೇಕನು ಈದ ಬೊಯ್ಯೇರು – ಸಂಸಾರವಾರಧಿಲೋ ಜಾಡ**
**ತಿಳಿಯದೆ ಮುನಿಗಿಪೊಯ್ಯೇರು ಆತ್ಮಜ್ಞಾನವೆನ್ನುವ ಓಡನೆಕ್ಕಿ –**
**ಏಡುಕೊಂಡಲು ದಾಟಲೇನಿ ಮೂಢುಲೆಲ್ಲರು ॥ಮೂಡು ಕಾಲ್ವಲು॥**

ಒಂದು ನದಿಯನ್ನು ದಾಟುವುದಕ್ಕೆ ಚಿಕ್ಕ ತೆಪ್ಪ ಅಗತ್ಯ. ಹಾಗೇ ಸಮುದ್ರವನ್ನು ದಾಟುವುದಕ್ಕೆ ಹಡಗು ಅಗತ್ಯ. ಸಂಸಾರವೆನ್ನುವ ಅತಿದೊಡ್ಡ ಸಮುದ್ರವನ್ನು ದಾಟುವುದಕ್ಕೆ ಬಲವಾದ ಜ್ಞಾನವೆನ್ನುವ ಹಡಗು ಅಗತ್ಯ. ಈಗಿನ ಕಾಲದಲ್ಲಿ ಪ್ರಜೆಗಳು ಸ್ವಲ್ಪವೂ ಜ್ಞಾನ ಇಲ್ಲದವರಾಗಿ, ಸಂಸಾರಸಾಗರವನ್ನು ಈಜಲುಹೋಗಿ ಅದರಲ್ಲಿಯೇ ಮುಳುಗಿಹೋಗುತ್ತಿದ್ದಾರೆ. ಸಂಸಾರದಿಂದ ದಡಸೇರಬೇಕೆಂದರೆ ಆತ್ಮಜ್ಞಾನವೆನ್ನುವ ಹಡಗು ಅಗತ್ಯ. ಆತ್ಮಜ್ಞಾನವನ್ನು ತಿಳಿದವನು ಸಂಸಾರದಲ್ಲಿ ಇದ್ದರೂ ಅದರ ಸಿಕ್ಕಿನಲ್ಲಿ ಸಿಲುಕಿಕೊಳ್ಳದೆ ಅಂತರಂಗದಲ್ಲಿನ ಏಳು ಬೆಟ್ಟಗಳೆನ್ನುವ ಸಪ್ತನಾಡಿಕೇಂದ್ರಗಳನ್ನು ದಾಟಿ, ಆಚೆ ಇರುವ ಆತ್ಮವನ್ನು ತಿಳಿಯಬಲ್ಲನು. ಈ ವಿಷಯವನ್ನು ತಿಳಿಸುವುದಕ್ಕೆ ಮೇಲಿನ ತತ್ತ್ವದಲ್ಲಿ "ಹಡಗಿಲ್ಲದೆ ಈಜಲುಹೋದರು ಸಂಸಾರಸಾಗರದಲ್ಲಿ ಜಾಡು ತಿಳಿಯದೆ ಮುಳುಗಿ ಹೋದರು ಆತ್ಮಜ್ಞಾನವೆನ್ನುವ ಹಡಗನ್ನೇರಿ ಏಳುಬೆಟ್ಟಗಳು ದಾಟಲಾರದ ಮೂಢರೆಲ್ಲರು ಮೂರು ಕಾಲುವೆಗಳು ದಾಟಲಾರರು" ಎಂದಿದ್ದಾರೆ.

**2. ಬಂಡರಾಳ್ಳಕು ಮ್ರುಕ್ಕಬೊಯ್ಯೇರು – ಅಜ್ಞಾನಪೂಜೆಗಳು**
**ಚೇಯಪೂನೇರು ಚೇತಿಲೋನಿ ಜ್ಞಾನಮೇರುಗಕ – ಚೇತುಲೆತ್ತಿ ಮ್ರುಕ್ಕು**
**ಮೂಢುಲೆಲ್ಲರು ॥ಮೂಡು ಕಾಲ್ವಲು॥**

ಪ್ರಪಂಚದಲ್ಲಿ ಕೃತಯುಗದಲ್ಲಿಯೇ ಮನುಷ್ಯರಿಗೆ ಜ್ಞಾನ ತಿಳಿಸುವ ಸಲುವಾಗಿ ಪ್ರತಿಮೆಗಳನ್ನಿಟ್ಟು ಪೂಜಿಸಿದ್ದಾರೆ. ಹಾಗೆ ಮೊಟ್ಟಮೊದಲು ತಯಾರಾದ ಪ್ರತಿಮೆ ಶಿವಲಿಂಗ, ನಂತರ ಪಾಂಡುರಂಗನ ಪ್ರತಿಮೆ. ಒಂದು ನಿರಾಕಾರವನ್ನು ತಿಳಿಸುವುದಕ್ಕೆ ಲಿಂಗ ಇಟ್ಟರೆ, ಎರಡನೆಯದು ಸಾಕಾರವನ್ನು ತಿಳಿಸುವುದಕ್ಕೆ ಇಟ್ಟಿರುವುದು ರಂಗನ ಪ್ರತಿಮೆ. ಈ ಎರಡು ದೇವಾಲಯಗಳೇ ಸಾಕಾರ, ನಿರಾಕಾರ ಅರ್ಥದಿಂದ ಕೂಡಿಕೊಂಡಿವೆ. ಈ ಎರಡು ದೇವಾಲಯಗಳು ಹೊರತುಪಡಿಸಿ ಯಾವ ದೇವಾಲಯಗಳು ಪೂರ್ವದಲ್ಲಿ ಇರುತ್ತಿರಲಿಲ್ಲ. ಕಾಲಕ್ರಮವಾಗಿ ಅಜ್ಞಾನ ಬೆಳೆದುಹೋಗಿ ಎಷ್ಟೋ ದೇವಾಲಯಗಳು ತಯಾರಾಗಿವೆ. ನಿರಾಕಾರ ಪರಮಾತ್ಮಗೆ ಸಾಕಾರ ಭಗವಂತನಿಗೆ ಚಿಹ್ನೆಗಳಾದ

ಎರಡು ದೇವಾಲಯಗಳನ್ನು ಯಾರೂ ಗುರುತಿಸಲಾರದೆ ಹೋಗಿದ್ದಾರೆ. ಅರ್ಥವಿರುವ ದೇವಾಲಯಗಳನ್ನು ಅರ್ಥವಿಲ್ಲದ ದೇವಾಲಯಗಳೊಳಗೆ ಬೆರೆಸಿದ್ದಾರೆ. ಜ್ಞಾನ ತಿಳಿದ ಹಿರಿಯರು ಇಂದಿಗೂ ಮೊದಲ ಎರಡು ಆಲಯಗಳೇ ಜ್ಞಾನದಿಂದ ಕೂಡಿಕೊಂಡಿವೆಯೆಂದು ನಂತರ ತಯಾರಾದವೆಲ್ಲ ಜ್ಞಾನಭಾವವಿಲ್ಲದವುಗಳೆಂದು ಹೇಳುತ್ತಿರುವರು. ಆದ್ದರಿಂದಲೇ ಕಾಣಿಸಿದ ಕಲ್ಲಿಗೆಲ್ಲ ಮುಗಿಯಬೇಡವೆಂದು 'ಚಿಲ್ಲರೆ ಕಲ್ಲುಗಳಿಗೆ ಮುಗಿಯುತ್ತಿದ್ದರೆ ಚಿತ್ತವು ಕೆಡುತ್ತದೆ ಎಂದಿದ್ದಾರೆ' ಈಗಿನ ಪೂಜೆಗಳು ಕೂಡಾ ಅರ್ಥವಿಲ್ಲದವುಗಳಾಗಿ ಎಲ್ಲರೂ ಹೇಗೆ ಮಾಡುತ್ತಿದ್ದರೆ ಹಾಗೆ ಮಾಡಬೇಕೆಂದು ಮಾಡುತ್ತಿದ್ದಾರೆ ಹೊರತು ಅವುಗಳ ಅರ್ಥ ಪೂರ್ತಿಯಾಗಿ ತಿಳಿದಿಲ್ಲ. ಆದ್ದರಿಂದ ಅರ್ಥವಿಲ್ಲದ ಅಜ್ಞಾನ ಪೂಜೆಗಳು ಚಿಲ್ಲರೆ ದೇವತೆಗಳಿಗೆ ಮಾಡುತ್ತಾ ಹೋಗುತ್ತಿದ್ದಾರೆ. ಆದ್ದರಿಂದ ಈ ತತ್ತ್ವದಲ್ಲಿ "ಬಂಡೆಕಲ್ಲುಗಳಿಗೆ ಮುಗಿಯುತ್ತಿದ್ದಾರೆ ಅಜ್ಞಾನ ಪೂಜೆಗಳು ಮಾಡುತ್ತಿದ್ದಾರೆ" ಎಂದು ಹೇಳಿದ್ದಾರೆ.

ಪರಮಾತ್ಮ ನಿರಾಕಾರವನ್ನು, ಭಗವಂತನ ಸಾಕಾರವನ್ನು ತಿಳಿಸುವ ನಿಮಿತ್ತ, ಪೂರ್ವದಲ್ಲಿ ತಿಳಿದ ಜ್ಞಾನಿಗಳು ಮೂಗು, ಮುಖ ಆಕಾರವಿಲ್ಲದ ಲಿಂಗವನ್ನು, ಮೂಗು ಮುಖವಿರುವ ಪ್ರತಿಮೆಯನ್ನು ತಯಾರು ಮಾಡಿ ಇಟ್ಟಂತೆ, ಅಂತರಂಗದಲ್ಲಿನ ಜೀವಾತ್ಮ, ಆತ್ಮ, ಪರಮಾತ್ಮಗಳ ವಿವರ ತಿಳಿಯುವಂತೆ, ದೇವರೇ ಮಾನವನ ಅಂಗೈಯಲ್ಲಿ ಮೂರು ರೇಖೆಗಳನ್ನು ಜೋಡಿಸಿ ಹುಟ್ಟಿಸಿದ್ದಾನೆ. ಪ್ರತಿಮೆ ಆಕಾರವಿರುವ ನಾಮಗಳ ದೇವರಾದ ಆಲಯಗಳಲ್ಲಿ ಇದೇ ವಿಷಯವನ್ನು ತಿಳಿಸುವಂತೆ ಹಸ್ತವನ್ನು ತೋರಿಸುತ್ತಾ ಪ್ರತಿಮೆ ಆಕಾರವಿರುತ್ತದೆ. ಹಸ್ತದಲ್ಲಿ ಎಷ್ಟೋ ಜ್ಞಾನವಿದೆಯೆಂದು ಪೂರ್ವದ ಹಿರಿಯರು ಕೂಡ ಹೇಳುತ್ತಿದ್ದರು. ಆದ್ದರಿಂದ ಬೆಳಗ್ಗೆ ನಿದ್ರೆಯಿಂದ ಏಳುತ್ತಲೇ ಯಾರ ಮುಖವನ್ನು ನೋಡದ ಮುನ್ನವೇ ತನ್ನ ಹಸ್ತದಲ್ಲಿನ ರೇಖೆಗಳನ್ನು ನೋಡಿಕೊಳ್ಳಿರೆಂದು ಹೇಳುತ್ತಿದ್ದರು. ಕೈಗಳಲ್ಲಿ ಆತ್ಮ, ಪರಮಾತ್ಮರ ಜ್ಞಾನವಿದೆಯೆಂದು ತಿಳಿಯದೆ, ಚಿಲ್ಲರೆ ದೇವರುಗಳಿಗೆ ಹಸ್ತಗಳನ್ನೆತ್ತಿ ಮುಗಿಯುತ್ತಿ

ದ್ದಾರೆ. ಆದ್ದರಿಂದ ಈ ತತ್ತ್ವದಲ್ಲಿ "ಕೈಯಲ್ಲಿನ ಜ್ಞಾನವನ್ನು ಅರಿಯದೆ ಕೈಗಳೆತ್ತಿ ಮುಗಿಯುವ ಮೂಢರೆಲ್ಲರೂ ಮೂರು ಕಾಲುವೆಗಳು ದಾಟಲಾರರಯ್ಯ" ಎಂದಿದ್ದಾರೆ. ಆದ್ದರಿಂದ ಹಿರಿಯರ ಮಾತಿನ ಪ್ರಕಾರ ಹಸ್ತದಲ್ಲಿನ ಆತ್ಮ, ಪರಮಾತ್ಮರ ವಿವರವನ್ನು ತಿಳಿದು, ಹಾಗೇ ಗುಡಿಗಳಲ್ಲಿನ ಸಾಕಾರ, ನಿರಾಕಾರ ಗುರುತುಗಳಾದ ಎರಡು ಗುಡಿಗಳನ್ನು ತಿಳಿದು ಪೂಜೆಗಳು ಮಾಡೋಣ.

**3. ಬಾಧೆ ಗುರುವುಲ ಪಂಚ ಚೇರೇರು – ಬೋಧನೆರುಗಕ ಘೋರಮುಗಾ ಮೋಸಪೋಯೇರು. ಬೋಧೆಯಲ್ಲಿನ ಜ್ಞಾನ ತಿಳಿಯದೆ ತತ್ತ್ವವೆಲ್ಲ ತಿಳಿದಿದೆಯೆನ್ನುವ ಮೂಢರೆಲ್ಲರೂ ॥ಮೂಡು ಕಾಲ್ವಲು॥**

ದೇಶದಲ್ಲಿನ ಗುರುಗಳೆಲ್ಲರೂ ಯಾವುದೋ ಒಂದು ಬೋಧನೆ ಹೇಳುತ್ತಿದ್ದರೂ ಎಲ್ಲರನ್ನೂ ಬೋಧ ಗುರುಗಳೆನ್ನುವುದಕ್ಕೆ ಅವಕಾಶವಿಲ್ಲ. ಬೋಧನೆಗಳು ಹೇಳುವ ಗುರುಗಳಲ್ಲಿ ಸಹ ಬೋಧ ಗುರುಗಳು, ಬಾಧೆ ಗುರುಗಳೆಂದು ಎರಡು ವಿಧಗಳು ಇದ್ದಾರೆ. ಬಾಹ್ಯವಾಗಿ ಶರೀರಕ್ಕೆ, ಅಂತರಂಗದಲ್ಲಿ ಮನಸ್ಸಿಗು ಕೆಲಸವನ್ನು ಕಲ್ಪಿಸುವ ಎಂತಹ ಬೋಧನೆಗಳು ಹೇಳುವವರಾದರೂ ಬಾಧೆ ಗುರುಗಳೇ ಆಗುತ್ತಾರೆ. ಶರೀರಕ್ಕೂ ಮನಸ್ಸಿಗೂ ಕೆಲಸವಿಲ್ಲದ ಬೋಧನೆಗಳು ಹೇಳುವವರೇ ಬೋಧ ಗುರುಗಳಾಗುತ್ತಾರೆ. ಶರೀರ, ಮನಸ್ಸು ಕೆಲಸಗಳಲ್ಲಿ ಲಗ್ನವಾದಾಗ ಪ್ರಪಂಚವೇ ತಿಳಿಯುತ್ತದಾಗಲೀ ಆತ್ಮ ತಿಳಿಯುವುದಿಲ್ಲ. ಹೊರಗೆ ಶರೀರ, ಒಳಗೆ ಮನಸ್ಸು ಕೆಲಸವನ್ನು ಬಿಟ್ಟಾಗಲೇ ಆತ್ಮ ತಿಳಿಯುವ ಬ್ರಹ್ಮಯೋಗವಾಗುತ್ತದೆ. ಹಾಗಲ್ಲದೆ ವ್ರತಕ್ರತುಗಳು, ಯಜ್ಞಯಾಗಗಳು, ವೇದಪಠನಗಳು, ದಾನಗಳು, ಮಂತ್ರ ಬೋಧನೆಯೊಂದಿಗೆ ಕೂಡಿದ ತಪಸ್ಸುಗಳನ್ನು ಬೋಧಿಸುವವರು ಬಾಧೆಗುರುಗಳೇ ಆಗುತ್ತಾರೆ. ಆದ್ದರಿಂದಲೇ ಭಗವದ್ಗೀತೆಯಲ್ಲಿ ಸಹ "ಯಜ್ಞಗಳಿಂದಲೂ, ವೇದಾಧ್ಯಯನ ಗಳಿಂದಲೂ, ದಾನಗಳಿಂದಲೂ, ತಪಸ್ಸುಗಳಿಂದಲೂ ದೇವರು ತಿಳಿಯುವುದಿಲ್ಲ ವೆಂದು" ವಿಶ್ವರೂಪ ಸಂದರ್ಶನ ಯೋಗವೆನ್ನುವ ಅಧ್ಯಾಯದಲ್ಲಿ 48ನೇ ಶ್ಲೋಕದಲ್ಲಿ ಮತ್ತು 53ನೇ ಶ್ಲೋಕದಲ್ಲಿ ಹೇಳಲ್ಪಟ್ಟಿದೆ.

ಈ ವಿಧವಾಗಿ ಬಾಧೆ, ಬೋಧ ಗುರುಗಳಿರುವಾಗ ಜ್ಞಾನವನ್ನು ತಿಳಿದುಕೊಳ್ಳಬೇಕೆಂದುಕೊಂಡ ಪ್ರಜೆಗಳು ಗುರುಗಳನ್ನು ಗುರುತಿಸದೆ, ಜ್ಞಾನದಲ್ಲಿನ ತಾರತಮ್ಯ ತಿಳಿಯದೆ, ಆಧ್ಯಾತ್ಮಿಕ ವಿದ್ಯೆಯಲ್ಲಿ ಘೋರವಾಗಿ ಮೋಸಹೋಗುತ್ತಿದ್ದಾರೆ. ಹಾಗೆ ಮೋಸಹೋದವರು ತಾವು ತಿಳಿದುಕೊಂಡಿರು ವುದು ಬಾಧೆ ಬೋಧವಾ ಅಥವಾ ಆತ್ಮ ಬೋಧವಾ ಎಂದು ತಿಳಿಯದೆ, ತಮಗೆ ಎಲ್ಲಾ ತಿಳಿದಿದೆಯೆನ್ನುವ ಅಹಮ್‌ನಿಂದ ದೇವರನ್ನು, ದೇವರ ಜ್ಞಾನ ಪೂರ್ತಿಯಾಗಿ ತಿಳಿದಿದೆಯೆಂದು ಹೇಳಿಕೊಳ್ಳುತ್ತಿದ್ದಾರೆ. ಇಂತಹವರು ಎಂದಿಗೂ ತಮ್ಮಲ್ಲಿನ ಆತ್ಮವನ್ನು ತಿಳಿಯಲಾರರು. ಆದ್ದರಿಂದ ಈ ತತ್ತ್ವದಲ್ಲಿ "ಬಾಧೆ ಗುರುಗಳ ಬಳಿ ಸೇರುವರು, ಬೋಧ ತಿಳಿಯದೆ ಘೋರವಾಗಿ ಮೋಸ ಹೋಗುತ್ತಾರೆ, ಬೋಧನೆಯಲ್ಲಿನ ಜ್ಞಾನ ತಿಳಿಯದೆ ತತ್ತ್ವವೆಲ್ಲ ತಿಳಿದಿದೆಯೆನ್ನುವ ಮೂಢರೆಲ್ಲರು ಮೂರು ಕಾಲುವೆಗಳು ದಾಟಲಾರರಯ್ಯ" ಎಂದಿದ್ದಾರೆ.

**4. ವೇದಮಂತ್ರಗಳು ಗೊನುಗ ನೇರ್ಚೇರು – ಬಾಹ್ಯಯಜ್ಞಗಳು ಚೇಯಪೂನೇರು ಮಂತ್ರಮುಲೋನಿ ಮರ್ಮಮೆರುಗಕ – ಯಜ್ಞಮುಲೋನಿ ಚಾವ ತಿಳಿಯದ ಮೂಢುಲೆಲ್ಲರು**

**||ಮೂಡು ಕಾಲ್ವಲು||**

ದೈವ ಪೂಜೆಗಳಲ್ಲಿ ಆಧ್ಯಾತ್ಮಿಕವಿದ್ಯೆಯಲ್ಲಿ ಮಂತ್ರಕ್ಕು, ಯಜ್ಞಕ್ಕು ವಿಶೇಷವಾದ ಬೆಲೆಯಿದೆ. ಆದ್ದರಿಂದ ಎಷ್ಟೋ ಮಂತ್ರಗಳು ಕಲಿತು ದೈವ ಪೂಜೆಗಳು, ಎಷ್ಟೋ ಯಜ್ಞಗಳು ಮಾಡಿ ದೈವಶಾಂತಿಗಳು ಮಾಡುವುದು ಇಂದಿನ ಸಮಾಜದಲ್ಲಿ ಅದೂ ಕೆಲವರಲ್ಲಿ ಸ್ಥಿರವಾಗಿಹೋಗಿರುವ ಆಚಾರಗಳು. ಏನೂ ಮಾಡದೆ ಪೂರ್ತಿ ಅಜ್ಞಾನದಿಂದ ಬಹಳಜನ ಇರುವಾಗ ಅವರಿಗಿಂತ ನಾವು ಉತ್ತಮರೆಂದು, ಜ್ಞಾನಿಗಳೆಂದು, ಮಂತ್ರಪಠನೆಗಳು, ಯಜ್ಞಗಳು ಮಾಡುವವರು ಇದ್ದಾರೆ. ಯಾವ ಪೂಜೆಗಳು ಮಾಡದವರಿಗಿಂತ ಮಂತ್ರಗಳಿಂದ ಪೂಜೆಗಳು ಮಾಡುವವರು, ಯಜ್ಞಗಳು ಮಾಡುವವರು ದೊಡ್ಡದಾಗಿ ಕಾಣಿಸುತ್ತಿದ್ದರೂ ಅದರಿಂದ ದೈವ ತಿಳಿಯುವುದಿಲ್ಲವೆಂದು ಭಗವದ್ಗೀತೆಯಲ್ಲಿ

ಕೂಡಾ ಹೇಳಿದ್ದಾರೆಂದು ಮೇಲೆ ಬರೆದುಕೊಂಡಿದ್ದೇವೆ. ಅಂತಹದರಲ್ಲಿ ಯಜ್ಞಗಳಿಗು, ಮಂತ್ರಗಳಿಗು ಬೆಲೆ ಇಲ್ಲವಾ! ಎಂದು ಕೇಳಬಹುದು. ಅದಕ್ಕೆ ನಮ್ಮ ಸಮಾಧಾನ ಏನೆಂದರೇ!

ಯಜ್ಞಗಳಿಗು, ಮಂತ್ರಗಳಿಗು ಎಷ್ಟೋ ಬೆಲೆಯಿದೆ. ಆದರೆ ಅವು ನೀವು ಅಂದುಕೊಂಡಂತೆ ಎಲ್ಲರೂ ಮಾಡುವ ಯಜ್ಞಗ್ಗಳಲ್ಲ, ಹಾಗೇ ಮಂತ್ರಗಳು ಕೂಡಾ ಎಲ್ಲರೂ ಅಂದುಕೊಂಡಂತೆ ಪಠಿಸುವವಲ್ಲ. ಬ್ರಹ್ಮವಿದ್ಯಾಶಾಸ್ತ್ರದ ಪ್ರಕಾರ ಮಂತ್ರಕ್ಕು, ಯಜ್ಞಕ್ಕು ಪ್ರತ್ಯೇಕ ಅರ್ಥ, ಅನುಭವವಿದೆ. **ಮಂತ್ರವೆಂದರೇ ತನಗೆ ತಾನು ಪಠಿಸಲ್ಪಡುವುದು, ಯಜ್ಞವೆಂದರೇ ತನ್ನನ್ನು ತಾನು ನಡೆಸಲ್ಪಡುವುದು.** ಮನುಷ್ಯ ಪಠಿಸದೆಯೇ ಉಚ್ಛರಿಸಲ್ಪಡುವುದು ಮಂತ್ರ, ಹಾಗೇ ಮನುಷ್ಯ ಮಾಡದೆಯೇ ಮಾಡಲ್ಪಡುವುದು ಯಜ್ಞ. ಇದೆಲ್ಲಿಯ ವಿಚಿತ್ರ ಎಂದುಕೊಳ್ಳಬೇಡಿ, ಇರುವ ಸತ್ಯ ಅಷ್ಟೇ. ಈ ವಿಷಯ ತಿಳಿಯದೆಯೇ ಎಲ್ಲರೂ ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ. ಆದ್ದರಿಂದ ಗೀತೆಯಲ್ಲಿ ಕೂಡಾ 'ಬಾಹ್ಯ ಯಜ್ಞಗಳಿಂದಾಗಲಿ, ಬಾಹ್ಯ ಮಂತ್ರಗಳಿಂದಾಗಲಿ ದೇವರು ತಿಳಿಯುವುದಿಲ್ಲವೆಂದು' ತೀರ್ಮಾನಿಸಿ ಹೇಳಿದ್ದಾರೆ. ಯಜ್ಞಗಳಿಗು, ಮಂತ್ರಗಳಿಗು ಪ್ರತ್ಯೇಕ ಅರ್ಥ ಬೆಲೆ ಇದೆಯೆಂದು ಹೇಳಿದ್ದೀರೆಂದು ನಮ್ಮನ್ನು ಪ್ರಶ್ನಿಸಿದರೇ ಆ ಮಾತು ವಾಸ್ತವ. ಯಜ್ಞಗಳು ನಮ್ಮ ಶರೀರದಲ್ಲಿ ನಮ್ಮ ಪ್ರಮೇಯ ಇಲ್ಲದೇಯೆ ಪ್ರತಿನಿತ್ಯ ನಡೆಯುತ್ತಿವೆ. ಹಾಗೇ ಮಂತ್ರ ಪ್ರತಿನಿತ್ಯ ನಮ್ಮ ಶರೀರದಲ್ಲಿ ನಮ್ಮ ಪ್ರಮೇಯ ಇಲ್ಲದೇ ಜಪಿಸಲ್ಪಡುತ್ತಿದೆ. ಶರೀರದಲ್ಲಿ ಎರಡು ವಿಧಗಳ ಯಜ್ಞಗಳು ನಡೆಯುತ್ತಿವೆ. ಅನೇಕ ಮಂತ್ರಗಳು ಮೊಳಗುತ್ತಿವೆ. ಯಜ್ಞಗಳಲ್ಲಿ ಶ್ರೇಷ್ಠವಾದ ಯಜ್ಞ ಒಂದು, ಮಂತ್ರಗಳಲ್ಲಿ ಶ್ರೇಷ್ಠವಾದ ಮಂತ್ರವೊಂದು ಇದೆ. ಯಜ್ಞಗಳಲ್ಲಿ 'ಜ್ಞಾನಯಜ್ಞ', ಮಂತ್ರಗಳಲ್ಲಿ 'ಓಂ' ಶಬ್ಧ ಶ್ರೇಷ್ಠವಾದವು. ಯಾವ ಮನುಷ್ಯನಾದರೂ ಜ್ಞಾನಯಜ್ಞ ಮಾಡುವುದರಿಂದ, ಓಂ ಮಂತ್ರವನ್ನು ಸ್ಮರಿಸುವುದರಿಂದಾದರೂ ಮುಕ್ತಿ ಹೊಂದಬಹುದು.

ಬಾಹ್ಯಯಜ್ಞಗಳಿಂದ, ಬಾಹ್ಯ ಮಂತ್ರಗಳಿಂದ ಹೊಂದದ ಮೋಕ್ಷವನ್ನು ಅಂತರಂಗದಲ್ಲಿ ಸ್ವತಃವಾಗಿ ಆತ್ಮಮಾಡುವ ಜ್ಞಾನಯಜ್ಞದಲ್ಲಿ ನೀನು (ಜೀವಿಯು) ಆತ್ಮದೊಂದಿಗೆ ಬೆರೆತು ಮಾಡಿದರೆ ಕರ್ಮ ಸುಟ್ಟುಹೋಗುತ್ತದೆ. ಹಾಗೇ ಅಂತರಂಗದಲ್ಲಿ ಸ್ವತಃವಾಗಿ ಆತ್ಮ ಜಪಿಸುವ ಓಂ ಅಕ್ಷರ ನೀನು (ಜೀವಾತ್ಮ) ಆತ್ಮದೊಂದಿಗೆ ಸೇರಿ ಜಪಿಸುವುದರಿಂದ ಮುಕ್ತಿ ಹೊಂದಬಹುದು. ಈ ರಹಸ್ಯ ತಿಳಿಯದೆ ಮಂತ್ರದಲ್ಲಿನ ಮರ್ಮವನ್ನು, ಯಜ್ಞದಲ್ಲಿನ ಸಾರಾಂಶವನ್ನು ತಿಳಿಯುದವರು ಮೂರು ಗುಣಗಳಲ್ಲಿಯೇ ಸಿಲುಕಿಕೊಂಡು, ಕರ್ಮ ಸಂಪಾದಿಸಿಕೊಳ್ಳುತ್ತಿರುತ್ತಾರೆ. ಮಂತ್ರ ನಮ್ಮಲ್ಲಿಯೇ ಇದೆಯೆಂದು ತಿಳಿಯದೆ ಸ್ವಾರ್ಥಕ್ಕಾಗಿ ಹೊರಗಿನ ಮಂತ್ರಗಳಿಗೆ ಅಭ್ಯಾಸವಾಗಿದ್ದಾರೆ. ಸ್ವಾರ್ಥದಿಂದಲೇ ಪಠಿಸುತ್ತಿದ್ದಾರೆ. ಎಷ್ಟೋ ಕೋಟಿಗಳ ವರ್ಷಗಳಿಂದ ವಿಶ್ವವನ್ನು ಸ್ಥಾಪಿಸಿ, ನಡೆಸುವ ದೇವರನ್ನು ಮರೆತುಹೋಗಿ, ಸ್ವಲ್ಪಕಾಲ ಇದ್ದು ಹೋಗುವ ಜೀವನವನ್ನು ದೊಡ್ಡದಾಗಿ ಆರಿಸಿಕೊಂಡು, ಅದರಲ್ಲಿನ ಬದುಕೇ ಬೆಲೆಯುಳ್ಳದ್ದೆಂದು, ಬದುಕುವುದಕ್ಕಾಗಿ, ಜೀವನದಲ್ಲಿ ಲಾಭಕ್ಕಾಗಿ ಮಂತ್ರಗಳನ್ನುಚ್ಚರಿಸುವುದು ಯಜ್ಞಗಳು ಮಾಡುವುದು ನಡೆಯುತ್ತಿದೆ. ವ್ಯಾಪಾರಸ್ತನು ಅಂಗಡಿಗೆ ಹಾಕಲ್ಪಟ್ಟ ಬೀಗಕ್ಕೆ ಕೈಮುಗಿಯುತ್ತಿದ್ದಾನೆ, ಬಾಗಿಲಿಗೆ ಕೈಮುಗಿಯುತ್ತಿದ್ದಾನೆ, ಒಳಗೆ ಹೋಗಿ ಅನ್ಯದೇವತೆಗಳಿಗೆ ಮುಗಿಯುತ್ತಿದ್ದಾನೆ. ಅಸಲಾದ ದೇವರನ್ನು, ಎಲ್ಲದಕ್ಕು ಆಧಾರವಾದ ದೇವರನ್ನು, ತನ್ನನ್ನು ನಡೆಸುವ ದೇವರನ್ನು ಮರೆತುಹೋಗುತ್ತಿದ್ದಾನೆ. ಪ್ರಜೆಗಳು ದೇವರನ್ನು ಮರೆತು ಮಾಡುವ ಅಜ್ಞಾನ ಕೆಲಸಗಳನ್ನು, ಸ್ವಾರ್ಥ ಕೆಲಸಗಳನ್ನು ನೋಡಿದ ಹಿರಿಯರು ಈ ತತ್ತ್ವದಲ್ಲಿ "ವೇದಮಂತ್ರಗಳು ಗೊಣಗುವುದು ಕಲಿತ್ತಿದ್ದಾರೆ, ಬಾಹ್ಯಯಜ್ಞಗಳು ಮಾಡುತ್ತಿದ್ದಾರೆ. ಮಂತ್ರದಲ್ಲಿನ ಮರ್ಮವನ್ನರಿಯದೆ, ಯಜ್ಞದಲ್ಲಿನ ಭಾವ ತಿಳಿಯದ ಮೂಢರೆಲ್ಲರು ಮೂರು ಕಾಲುವೆಗಳು ದಾಟಲಾರರಯ್ಯ" ಎಂದಿದ್ದಾರೆ. ಮಂತ್ರಗಳ ವಿಷಯ ತಿಳಿಯದವರು ಯಜ್ಞಗಳ ವಾಸ್ತವವನ್ನು ತಿಳಿಯದವರು ಮೂರು ಗುಣಗಳನ್ನು ಜಯಿಸದೇ ಮುಕ್ತಿ ಹೊಂದಲಾರದೆ ಜನನ ಮರಣ ಚಕ್ರದಲ್ಲಿಯೇ ಸಿಲುಕಿಕೊಳ್ಳುತ್ತಾರೆಂದು ಇದರ ಅರ್ಥ.

**5. ಉಪದೇಶಮಂಟು ಊರ್ಲು ತಿರಿಗೇರು – ಸನ್ಯಾಸಮಂಟು ಭಾರ್ಯಪಿಲ್ಲಲ ವದಲಿಪೊಯ್ಯೇರು ಉಪದೇಶಮುಲೋನಿ ಪ್ರದೇಶ ತೆಲಿಯಕ – ಸನ್ಯಾಸಮುಲೋನಿ ಸಾರಮು ತೆಲಿಯನಿ ಮೂಢುಲೆಲ್ಲರು**

**॥ಮೂಡು ಕಾಲ್ವಲು॥**

ಮನುಷ್ಯರಲ್ಲಿ ಕೆಲವರು ತಾವು ಗುರು ಆಗಬೇಕೆಂದು ಆಕಾಂಕ್ಷೆಯಿಂದಿರುತ್ತಾರೆ. ಆದ್ದರಿಂದ ಸ್ವಲ್ಪ ಜ್ಞಾನ ತಿಳಿದ ತಕ್ಷಣ, ಪೂರ್ತಿ ಜ್ಞಾನವನ್ನು ಸಂಪಾದಿಸದೇ ಗುರುಗಳಾಗಿ ಬದಲಾಗುತ್ತಿರುತ್ತಾರೆ. ಅಲ್ಲಿಗೆ ಸುಮ್ಮನಿರದೆ ಶಿಷ್ಯರನ್ನು ಸಂಪಾದಿಸಿಕೊಳ್ಳುವುದರಲ್ಲಿ ಮುಳುಗಿಹೋಗುತ್ತಾರೆ. ತಾಳಿ ಕಟ್ಟಿದರೇ ಹೆಂಡತಿ ಆದಂತೆ ಉಪದೇಶಕೊಟ್ಟರೆ ಶಿಷ್ಯರಾಗುವ ವಿಧಾನವಿದೆ ಆದ್ದರಿಂದ ಕೇಳಿದರೂ ಕೇಳದಿದ್ದರೂ ಉಪದೇಶಕೊಟ್ಟು ಶಿಷ್ಯರನ್ನು ಮಾಡಿಕೊಳ್ಳುವುದು ಕೆಲಸವಾಗಿಟ್ಟುಕೊಂಡಿದ್ದಾರೆ. ಉಪದೇಶಕೊಡುವ ಗುರುಗಳ ಪೈಪೋಟಿ ಕೂಡಾ ಹೆಚ್ಚಾಗಿರುವುದರಿಂದ ಗುರುಗಳೇ ಊರೂರು ತಿರುಗಿ ಅಲ್ಲಿನ ಪ್ರಜೆಗಳಿಗೆ ಉಪದೇಶ ಕೊಡುವುದು ನಡೆಯುತ್ತಿದೆ. ಒಂದು ಮನೆಯಲ್ಲಿ ಒಬ್ಬರು ಗುರು ಉಪದೇಶದ ಮೇಲೆ ಆಸಕ್ತಿ ತೋರಿಸಿದರೆ ಸಾಕು, ಆ ಮನೆಗೆ ಹೋಗಿ ಮನೆಯಲ್ಲಿರುವವರೆಲ್ಲರಿಗೂ ಬಲವಂತವಾಗಿ ಉಪದೇಶಕೊಡುವವರು ಕೂಡಾ ಇದ್ದಾರೆ. ಪೂರ್ವಕಾಲದಲ್ಲಿ ಗುರುಗಳನ್ನು ಹುಡುಕುತ್ತಾ ಶಿಷ್ಯರು ಹೋಗುತ್ತಿದ್ದರು. ಈ ಕಾಲದಲ್ಲಿ ಗುರುಗಳೇ ಶಿಷ್ಯರನ್ನು ಹುಡುಕುತ್ತಾ ಬರುತ್ತಿದ್ದಾರೆ. ಈ ವಿಧವಾಗಿ ಉಪದೇಶವೆಂದು ಊರೂರೂ ತಿರುಗುತ್ತಾ ಗುರುಗಳೆನ್ನುವ ಭ್ರಮೆಯಲ್ಲಿ ಕೆಲವರಿದ್ದಾರೆ.

ಹಾಗೇ ಸನ್ಯಾಸವೆಂದರೇ ಮತ್ತು ಸಂಸಾರವೆಂದರೇ ಅರ್ಥ ತಿಳಿಯದವರು, ಹೆಂಡತಿಮಕ್ಕಳೆ ಸಂಸಾರವೆಂದುಕೊಂಡು, ಅವರನ್ನು ಬಿಡುವುದೇ ಸನ್ಯಾಸವೆಂದುಕೊಂಡು, ಎಷ್ಟೋಜನ ಹೆಂಡತಿಮಕ್ಕಳನ್ನು ಬಿಟ್ಟುಹೋಗಿದ್ದಾರೆ. ಪೂರ್ವಕಾಲದಲ್ಲಿ ಗೌತಮ ಬುದ್ಧನು ಒಂದು ವರ್ಷದ ಮಗನನ್ನು, ಚಿಕ್ಕ ವಯಸ್ಸಿರುವ ಹೆಂಡತಿಯನ್ನು ಸನ್ಯಾಸವೆಂದು ಬಿಟ್ಟುಹೋಗಿದ್ದಾನೆ. ಆದಿಶಂಕರಾ

ಚಾರ್ಯರು, ವಿವೇಕಾನಂದನು ಸನ್ಯಾಸವೆಂದು ಮದುವೆಯೇ ಮಾಡಿಕೊಳ್ಳಲಿಲ್ಲ. ಆಗಿನ ಕಾಲದಲ್ಲಿಯೂ, ಈಗಿನ ಕಾಲದಲ್ಲಿಯೂ ಸನ್ಯಾಸ ಎಂದರೇ ಸಂಸಾರವನ್ನು ಬಿಡುವುದೆಂಬ ಅರ್ಥ ಗಾಢವಾಗಿದೆ. ಆದ್ದರಿಂದ ಈಗಿನ ಸ್ವಾಮಿಗಳೆಲ್ಲರೂ ಕಷಾಯ(ಕಾವಿ)ಬಟ್ಟೆಗಳು ಕಟ್ಟಿ, ಮದುವೆ ಮಾಡಿಕೊಳ್ಳದಂತೆ ಕೆಲವರು, ಮೊದಲೇ ಮಾಡಿಕೊಂಡು ಬಿಟ್ಟವರು ಕೆಲವರು ಇದ್ದಾರೆ. ಈ ವಿಧವಾಗಿ ಸನ್ಯಾಸ ತೆಗೆದುಕೊಳ್ಳುವುದಾಗಲಿ, ಗುರುಗಳಾಗಿ ಬದಲಾಗಿ ಉಪದೇಶಕೊಡುವುದಾಗಲಿ ಒಳ್ಳೆಯ ಪದ್ಧತಿ ಎನ್ನುತ್ತೇವಾ? ಎಂದು ಕೇಳಿದರೆ ಕೆಲವರು ಹಿರಿಯರು ಒಪ್ಪಿಕೊಳ್ಳದೆ ಉಪದೇಶದಲ್ಲಿ ಮರ್ಮ, ಸನ್ಯಾಸದಲ್ಲಿನ ಸಾರ ತಿಳಿಯದೆ ಹೋದರೆ ಮೂರು ಗುಣಗಳನ್ನು ದಾಟಲಾರೆ ಮಾಯೆಯನ್ನು ಜಯಿಸಲಾರೆ ಎನ್ನುತ್ತಿದ್ದಾರೆ. ಯಜ್ಞಗಳು ಮಂತ್ರಗಳಿದ್ದಂತೇ ಗುರುಗಳು, ಗುರೂಪದೇಶಗಳು ಎರಡು ವಿಧಗಳು ಇವೆ. ಮನುಷ್ಯರು ಗುರುಗಳಾಗಿ ಬದಲಾದವರು ಒಂದು ವಿಧವಾಗಿದ್ದು, ದೇವರೇ ಭಗವಂತನಾಗಿ ಬಂದು ಗುರುವಾಗಿ ಬದಲಾಗುವುದು ಎರಡನೆ ವಿಧ. ಮನುಷ್ಯ ಗುರುವಾಗಿ ಬದಲಾದರೆ **ಗುರು** ಎನ್ನಬಹುದು, ದೇವರು ಗುರುವಾಗಿ ಬಂದರೇ **'ಜಗದ್ಗುರು'** ಎನ್ನಬಹುದು. ಪ್ರಪಂಚಕ್ಕೆಲ್ಲ ದೇವರೊಬ್ಬನೇ ನಿಜಗುರುವು. ಆತನು ಮೋಕ್ಷದಿಂದ ಮನುಷ್ಯನಾಗಿ ಬಂದು ಪುನಃ ಮೋಕ್ಷಕ್ಕೇ ಹೋಗುತ್ತಾನೆ. ಆದರೆ ಮನುಷ್ಯ ಗುರುವಾಗಿ ತಯಾರಾದರೂ ಮೋಕ್ಷಕ್ಕೆ ಹೋಗುತ್ತಾನೆನ್ನುವ ನಂಬಿಕೆಯಿಲ್ಲ. ಮನುಷ್ಯಗುರುವು ತಾನು ಮೋಕ್ಷಕ್ಕೆ ಹೋಗಲಾರದ ಸ್ಥಿತಿಯಲ್ಲಿದ್ದು ಕೂಡಾ ಇತರರಿಗೆ ಮೋಕ್ಷವನ್ನು ಕೊಡುತ್ತೇನೆಂದು ಉಪದೇಶಕೊಟ್ಟು ಶಿಷ್ಯರನ್ನಾಗಿ ಮಾಡಿಕೊಳ್ಳುವುದು ಬಹಳ ವಿಚಿತ್ರವಾಗಿರುತ್ತದೆ. ದೇವರು ಭೂಮಿ ಮೇಲಕ್ಕೆ ಗುರುವಾಗಿ ಬಂದರೇ ಯಾರಿಗೂ ಮಂತ್ರೋಪದೇಶ ಮಾಡುವುದಾಗಲಿ, ಶಿಷ್ಯರನ್ನು ಸೇರಿಸಿಕೊಳ್ಳುವುದಾಗಲಿ ಮಾಡುವುದಿಲ್ಲ. ತಾನು ಹೇಳಬೇಕಾದ ಧರ್ಮಗಳನ್ನು ಮಾನವರಿಗೆ ಹೇಳಿಹೋಗುತ್ತಾನೆ ಹೊರತು ತಾನು ಗುರುವೆಂದು ಕೂಡಾ ಹೇಳಿಕೊಳ್ಳುವುದಿಲ್ಲ. ಹೀಗೆ ಮಾನವ ಗುರುವಿಗು, ದೈವಗುರುವಿಗು ಎಷ್ಟೋ ವ್ಯತ್ಯಾಸ ಇರುತ್ತದೆ. ಆದ್ದರಿಂದ ಈ ತತ್ತ್ವದಲ್ಲಿ 'ಉಪದೇಶವೆಂದು

ಊರೂರು ತಿರುಗಬೇಡವೆಂದು, ಉಪದೇಶದಲ್ಲಿನ ಮರ್ಮವನ್ನು ತಿಳಿದು ಕೊಳ್ಳಿರೆಂದು' ತಿಳಿಸಿದ್ದಾರೆ.

ಸಂಸಾರ ಕೂಡಾ ಎರಡು ವಿಧಗಳಾಗಿ ಇದೆ. ಒಂದು ಹೊರಗಿನ ಸಂಸಾರ, ಮತ್ತೊಂದು ಒಳಗಿನ ಸಂಸಾರ. ಹೊರಗಿನ ಸಂಸಾರದಲ್ಲಿ ಸದಸ್ಯರು ಇಬ್ಬರಿಂದ ಹತ್ತುಜನರವರೆಗಾಗಲಿ, ಹದಿನೈದು ಜನರವರೆಗಾಗಲಿ ಇರುತ್ತಾರೆ. ಸಾಮಾನ್ಯವಾಗಿ ನಾಲ್ಕೈದು ಜನರಿರುವ ಚಿಕ್ಕ ಸಂಸಾರಗಳೇ ಹೆಚ್ಚಾಗಿರುತ್ತವೆ. ಮನುಷ್ಯ ಅಜ್ಞಾನದಲ್ಲಿ ಇರುವಾಗ, ಶರೀರವೇ ತಾನೆಂದುಕೊಂಡಾಗ, ಹೆಂಡತಿಮಕ್ಕಳನ್ನೇ ಸಂಸಾರವೆಂದುಕೊಳ್ಳುವುದು ಸಹಜ. ಅಜ್ಞಾನಿಗಳ ದೃಷ್ಠಿಯಲ್ಲಿ ಹೆಂಡತಿಮಕ್ಕಳೆ ಸಂಸಾರವಾದ್ದರಿಂದ ಇದು ಒಂದು ವಿಧವಾದ ಹೊರಗಿನ ಸಂಸಾರ. ಈ ಸಂಸಾರವನ್ನು ಬಿಡುವುದರಿಂದ ಸನ್ಯಾಸವಾಗುತ್ತದೆಂದು ಅಂದುಕೊಳ್ಳುವುದು ತಪ್ಪು. ಏಕೆಂದರೇ ಮನುಷ್ಯ ಅಜ್ಞಾನದಲ್ಲಿದ್ದು, ಅಜ್ಞಾನದಿಂದ ದೇಹವೇ ನಾನೆನ್ನುವ ಅಹಂನಿಂದ, ಹೆಂಡತಿಮಕ್ಕಳೇ ಸಂಸಾರ ಎಂದು ಊಹಿಸಿಕೊಂಡಿರುವುದು ಆದ್ದರಿಂದ ಇದು ದೇವರ ಲೆಕ್ಕದಲ್ಲಿ ಸಂಸಾರವಲ್ಲ.

ದೇವರ ಲೆಕ್ಕದಲ್ಲಿನ ಸಂಸಾರ ಸನ್ಯಾಸ ಬೇರೆಯಾಗಿ ಇವೆ. ಸಜೀವ ಮನುಷ್ಯನಲ್ಲಿ ಜೀವಿಯು ಶರೀರಗಳಲ್ಲಿ ನಿವಾಸಿಸುತ್ತಿದ್ದಾನೆ. ಸಂಸಾರ ಜೀವಿಗೇ ಆದ್ದರಿಂದ ಜ್ಞಾನದ ಪ್ರಕಾರ ಶರೀರದೊಳಗೆ ಜೀವಿಯು 24 ಜನರೊಂದಿಗೆ ಸಂಸಾರ ಮಾಡುತ್ತಿದ್ದಾನೆ. ಅಂದರೆ ಎರಡು ಡಜನ್‌ಗಳ ಸಹಚರರೊಂದಿಗೆ ಜೀವಿಯು ಸಂಸಾರ ಮಾಡುತ್ತಿದ್ದಾನೆ. ಹೊರಗಿನ ಸಂಸಾರ ಎಷ್ಟುಜನರಿದ್ದರೂ, ಒಳಗಿನ ಸಂಸಾರ ಮಾತ್ರ 24 ಜನರೊಂದಿಗೇ ಎಂದು ಹೇಳಬಹುದು. ಶರೀರದಲ್ಲಿ ತನ್ನೊಂದಿಗೆ ಸಂಸಾರ ಇರುವವರೇ ಜೀವಿಗೆ ನಿಜವಾದ ಸಂಸಾರ. ಅಂತರಂಗ ದಲ್ಲಿನ ಸಂಸಾರವನ್ನು ಬಿಡುವುದೇ ನಿಜವಾದ ಸನ್ಯಾಸವೆಂದು ಭಗವದ್ಗೀತೆಯಲ್ಲಿ ಕೂಡಾ ತಿಳಿಯಪಡಿಸಲಾಗಿದೆ. **ಶರೀರದೊಳಗೆ ಮನಸ್ಸು, ಬುದ್ಧಿ, ಚಿತ್ತ, ಅಹಂ, ಹಾಗೇ ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಐದು ವಾಯುಗಳು, ಐದು ತನ್ಮಾತ್ರಗಳು ಎಂದು ಒಟ್ಟು 24 ಭಾಗಗಳೊಂದಿಗೆ ಜೀವಿಯು ಇರುತ್ತಾ**

**ಜೀವಯಾತ್ರೆ ಸಾಗಿಸುತ್ತಿದ್ದಾನೆ. ಶರೀರಾಂತರ್ಗತದಲ್ಲಿರುವ 24 ಭಾಗಗಳೊಂದಿಗೆ ಜೀವಿಯು ಸಂಬಂಧ ಇಟ್ಟುಕೊಳ್ಳದಿರುವುದೇ ನಿಜವಾದ ಸನ್ಯಾಸ.** ಇದರಿಂದ ಯೋಗಪ್ರಾಪ್ತಿ ಮೋಕ್ಷಪ್ರಾಪ್ತಿ ಉಂಟಾಗುತ್ತದೆ. ಹಾಗಲ್ಲದೆ ಹೊರಗಿನವರನ್ನು ಬಿಟ್ಟರೆ ಒಳಗಿನ ಕರ್ಮ ಹೋಗುವುದಿಲ್ಲ, ಮೋಕ್ಷ ಲಭಿಸುವುದಿಲ್ಲ. ಪೂರ್ವದಲ್ಲಿ ಸ್ವಾಮಿಗಳಾಗಲಿ, ಈಗಿನ ಸ್ವಾಮಿಗಳಾಗಲಿ ಬಾಹ್ಯ ಸಂಸಾರವನ್ನು ಬಿಡುವುದರಿಂದ ಮೂರು ಗುಣಗಳು ಬಿಡುವುದಿಲ್ಲ. ಆದ್ದರಿಂದ ಅವರು ಸನ್ಯಾಸಿಗಳು ಅಲ್ಲವೆಂದು ತಿಳಿಯುತ್ತಿದೆ. ಆದ್ದರಿಂದ ಈ ತತ್ತ್ವದಲ್ಲಿ "ಸನ್ಯಾಸವೆನ್ನುತ್ತಾ ಹೆಂಡತಿ ಮಕ್ಕಳನ್ನು ಬಿಟ್ಟು ಹೋಗುವರು, ಸನ್ಯಾಸದಲ್ಲಿನ ಸಾರ ತಿಳಿಯದ ಮೂಢರೆಲ್ಲರು ಮೂರು ಕಾಲ್ವೆಗಳು ದಾಟಲಾರರಯ್ಯ" ಎಂದು ಹೇಳಿದ್ದಾರೆ. ಈಗಲಾದರೂ ತತ್ತ್ವದಲ್ಲಿನ ಅರ್ಥ ತಿಳಿದು ನಿಜವಾದ ಸನ್ಯಾಸ ತೆಗೆದುಕೋಳ್ಳೋಣ.

**6. ರಾಗಮುಲ ಭಜನ ಚೇಯಪೂನೇರು – ಸನ್ಮಾರ್ಗುಲನು ಲೆಕ್ಕಚೇಯಕ ಮಾಟಲಾಡೇರು ಭಜನಲೋನಿ ಮರ್ಮಮೆರುಗಕ – ಸನ್ಮಾರ್ಗುಲಲೋನಿ ಜ್ಞಾನಮೆರುಗನಿ ಮೂಢುಲೆಲ್ಲರು**

**॥ಮೂಡು ಕಾಲ್ವಲು॥**

ಗ್ರಾಮೀಣಪ್ರಾಂತದಲ್ಲಿ ಭಜನೆ ಮಾಡುವುದೇ ಮುಖ್ಯವಾದ ಭಕ್ತಿಯಾಗಿದೆ. ಗುಡಿಯಲ್ಲಿ ಗುಂಪಾಗಿ ಕೂಡಿ ಅನೇಕ ದೇವತೆಗಳ ಕೀರ್ತನೆಗಳನ್ನು ಭಜನೆ ಮಾಡಿ ಅದೇ ಭಕ್ತಿ ಎಂದು ತೃಪ್ತಿ ಹೊಂದುತ್ತಿದ್ದಾರೆ. ಗ್ರಾಮೀಣ ಜನರಿಗೆ ಭಜನೆ ಹೊರತು ಯಾವ ಜ್ಞಾನ ತಿಳಿದಿಲ್ಲ. ಯಾರಾದರೂ ಗುರುಗಳು ಜೊತೆಯಾದಲ್ಲಿ ಅವರು ಜ್ಞಾನವನ್ನು ತಿಳಿಸದೆ ಭಜನೆಗೇ ಪ್ರಾಮುಖ್ಯತೆಯನ್ನು ಕೊಡುವುದರಿಂದ ಭಜನೆ ಹೊರತು ಜ್ಞಾನ ತಿಳಿಯದ ಸ್ಥಿತಿಯಲ್ಲಿ ಅವರಿದ್ದಾರೆ. ಭಜನೆ ಮಾಡುವ ವರಿಗೆ ಎಷ್ಟೋಜನ ದೇವರುಗಳು ಹೊರತು ಎಲ್ಲರಿಗೂ ಅಧಿಪತಿಯಾದ ದೇವರು ತಿಳಿಯುವುದಿಲ್ಲ. ಮತ್ತಿನ ಪಾನೀಯ ಕುಡಿಯುವವರಿಗೆ ಅದು ಅಭ್ಯಾಸವಾದಂತೆ ಭಜನೆ ಮಾಡುವವರಿಗೆ ಕೂಡಾ ಅದು ಒಂದು ಅಭ್ಯಾಸವಾಗಿಹೋಗುತ್ತದೆ. ಭಜನೆ ಮಾಡುವವನಿಗೆ ತಪ್ಪದೇ ಭಜನೆಗೆ

ಹೋಗಬೇಕೆನಿಸುತ್ತದೆ. ಒಂದು ದಿನ ಹೋಗದಿದ್ದರೂ ಅಸಂತೃಪ್ತಿಯಾಗಿರುತ್ತದೆ. ಮುಖ್ಯವಾಗಿ ಅವರಿಗೆ ನಾವ್ಯಾರು? ಯಾರನ್ನು ಭಜಿಸಬೇಕು? ಅಸಲಿಗೆ ಭಜನೆ ಎಂದರೇ ಏನು? ಎನ್ನುವ ವಿವರ ತಿಳಿದಿಲ್ಲ. ಇಂತಹವರು ತಮಗೇ ನಿಜವಾದ ಭಕ್ತಿ ಇದೆಯೆನ್ನುವ ಭಾವನೆಯಿಂದ ಸನ್ಮಾರ್ಗರನ್ನು, ಜ್ಞಾನಿಗಳನ್ನು ಲೆಕ್ಕಮಾಡದೆ ಹೇಳನವಾಗಿ ಮಾತನಾಡುತ್ತಿದ್ದಾರೆ. ಈ ವಿಷಯವನ್ನೇ ತತ್ತ್ವದಲ್ಲಿ "ರಾಗಗಳ ಭಜನೆ ಮಾಡಲು ಹೋಗುವರು, ಸನ್ಮಾರ್ಗರನ್ನು ಲೆಕ್ಕಮಾಡದೆ ಮಾತನಾಡುವರು" ಎಂದಿದ್ದಾರೆ.

ಭಜನೆ ರಾಗಗಳಿಂದ ಕೂಡಿಕೊಂಡಿರುವುದು ಅಲ್ಲವೆಂದು, ಹಾಡುಗಳ ಭಜನೆಗಿಂತ ಅಂತರಂಗದಲ್ಲಿ ಜ್ಞಾನದಿಂದ ಭಜಿಸುವುದು ಉತ್ತಮವೆಂದು ತಿಳಿದಿಲ್ಲ. ಪೂಜಿಸುವುದು, ಭಜಿಸುವುದು ಎನ್ನುವ ಪದಗಳಲ್ಲಿ ಮೊದಲ ಅಕ್ಷರ ಮಾತ್ರ ಬೇರೆ ಇದೆ. ಪೂಜಿಸುವುದೆಂದು ಹೇಳಬಾರದು, 'ಪೂಜೆ ಮಾಡುವುದು' ಎಂದು ಹೇಳುವುದು ಸರಿಯಾದುದು. ಹಾಗೇ ಭಜಿಸುವುದು ಎಂದು ಹೇಳಬಾರದು, 'ಭಜನೆ ಮಾಡುವುದು' ಎಂದು ಹೇಳಬೇಕು. ಪೂಜೆ, ಭಜನೆ ಎನ್ನುವವು ವಾಸ್ತವ ಪದಗಳು. ಪೂಜೆ ಎಂದರೇ ಬಾಹ್ಯವಾಗಿ ಮಾಡುವ ಆರಾಧನೆ ಕ್ರಮ. ಭಜನೆ ಎಂದರೇ ಅಂತರಂಗದಲ್ಲಿ ಮಾಡುವ ಆರಾಧನೆ ಎಂದು ಅರ್ಥ. ಇನ್ನೂ ವಿವರವಾಗಿ ಹೇಳಿಕೊಂಡರೆ ಪೂಜೆ, ಭಜನೆ ಎನ್ನುವ ಎರಡು ಪದಗಳಲ್ಲಿಯೂ "ಜ" ಇದೆ "ಜ" ಎಂದರೇ ಹುಟ್ಟುವುದೆಂದು ಅರ್ಥ. ಜ್ಞಾನ ತಿಳಿದು ಆ ಅರ್ಥದಿಂದಲೇ ದೇವರನ್ನು ಬಾಹ್ಯವಾಗಿ ಆರಾಧಿಸುವುದರಿಂದ ಅದರಲ್ಲಿ ಜ್ಞಾನಾಗ್ನಿ ಅಥವಾ ಜ್ಞಾನಶಕ್ತಿ ಹುಟ್ಟುತ್ತದೆ. ಹಾಗೇ ಜ್ಞಾನ ತಿಳಿದು ಅಂತರಂಗದಲ್ಲಿ ಆರಾಧಿಸುವುದರಿಂದ ಅದರಲ್ಲಿ ಕೂಡಾ ಜ್ಞಾನಶಕ್ತಿ ಹುಟ್ಟುತ್ತದೆ. ಕಣ್ಣಿಗೆ ಕಾಣಿಸದ ಜ್ಞಾನಶಕ್ತಿಯನ್ನು ಬಾಹ್ಯವಾಗಿ ಹೊಂದುವುದನ್ನು ಪೂಜ ಎಂದೂ, ಅದೇ ಶಕ್ತಿಯನ್ನು ಅಂತರಂಗದಲ್ಲಿ ಹೊಂದುವುದನ್ನು ಭಜನೆ ಎಂದೂ ಪೂರ್ವದಲ್ಲಿ ಹೇಳುತ್ತಿದ್ದರು. ಈ ಕಾಲದಲ್ಲಿ ಪೂಜೆಗು ಭಜನೆಗು ಅರ್ಥ

ತಿಳಿಯದಿರುವುದರಿಂದ ಪೂಜೆಗಳು, ಭಜನೆಗಳು ಅನೇಕ ದಾರಿಗಳು ಹಿಡಿದು ಹೋಗಿವೆ. ಸನ್ಮಾರ್ಗರಾದ ಜ್ಞಾನಿಗಳು ಜ್ಞಾನಶಕ್ತಿಯನ್ನು ಹೊಂದಿರುತ್ತಾರೆ, ಅಂತಹ ಜ್ಞಾನಿಗಳ ಜ್ಞಾನವಾಗಲಿ, ಅವರಲ್ಲಿನ ಶಕ್ತಿಯನ್ನಾಗಲಿ ತಿಳಿಯದೆ ಅವಹೇಳನವಾಗಿ ಮಾತನಾಡುವುದರಿಂದ ತಪ್ಪದೆ ಕರ್ಮ ಕೈಗೂಡುತ್ತದೆ. ಆದ್ದರಿಂದ ಜ್ಞಾನಿಗಳಲ್ಲಿ ತಿಳಿಯದೇ ಇರುವುದೇನೊ ತಿಳಿಯದವರು, ಭಜನೆಯಲ್ಲಿ ನಿಜ ಭಜನೆ ಏನೋ ತಿಳಿಯದವರು ಮೂರು ಗುಣಗಳನ್ನು ದಾಟಲಾರರು. ಈ ವಿಷಯವನ್ನೇ ತತ್ತ್ವದಲ್ಲಿ "ಭಜನೆಯಲ್ಲಿನ ಮರ್ಮ ಅರಿಯದೇ, ಸನ್ಮಾರ್ಗರಲ್ಲಿನ ಜ್ಞಾನ ಅರಿಯದ ಮೂಡರೆಲ್ಲರು ಮೂರು ಕಾಲುವೆಗಳು ದಾಟಲಾರರಯ್ಯಾ" ಎಂದಿದ್ದಾರೆ.

ಈ ತತ್ತ್ವವನ್ನು ನೋಡಿದ ನಂತರ ಗುರುಗಳಲ್ಲಿ ಬಾಧೆ ಗುರುಗಳ್ಯಾರೋ, ಬೋಧ ಗುರುಗಳ್ಯಾರೋ, ಚಿಲ್ಲರೆ ದೇವತೆಗಳ್ಯಾರೋ, ದೇವ ದೇವನ್ಯಾರೋ, ಮಂತ್ರಗಳ್ಯಾವೋ, ಯಜ್ಞಗಳ್ಯಾವೋ, ಉಪದೇಶವೇನೊ, ಸನ್ಯಾಸ ಯಾವುದೋ, ಪೂಜೆ ಯಾವುದೊ, ಭಜನೆ ಯಾವುದೊ, ಅಸಲು ಜ್ಞಾನವೆಂದರೆ ಏನೋ ತಿಳಿದುಕೊಳ್ಳುವುದಕ್ಕೆ ಪ್ರಯತ್ನಿಸಬೇಕು.

## 9. ತತ್ತ್ವ

**ಶ್ರೀ ಗುರು ಚರಣಾರವಿಂದಮುಲು ನಮ್ಮಿಕೊಲುತುಮು ಅನುದಿನಮೂ**
**ಇದೇ ರೀತಿಗ ಅದೇ ಬೋಧಗ ಅನುದಿನ ಕೋರಿತಿಮೀ**

1. **ಆಗರ್ಭಶತ್ರುವುಲು ಆರ್ಗುರಿನಿ ಚಂಪೇವಿಧಮೂ ತೆಲಿಯನಿ ಮಾಕೂ**
   **ತೇಜಮ್ಮೈನ ಕತ್ತುಲ ನಿಮ್ಮನಿ ಕೋರಿತಿಮೀ ॥ಶ್ರೀ ಗುರು॥**

2. **ಐದು ಪಡಗಲ ಪಾಮು ವಿಷಮುತೋ ಬಾಧಪಡೇ ಮಾಕೂ**
   **ಬೋಧಾಮೃತಮನೇ ಮಂದಿಮ್ಮನಿ ಕೋರಿತಿಮೀ ॥ಶ್ರೀ ಗುರು॥**

3. **ఏడు కొండలు ఎక్కే మార్గము తెలియని మాకూ**
**కంటకములు లేని మార్గము తెలుపమని కోరితిమీ**
**॥శ్రీ గురు॥**

4. **అండ పిండ బ్రహ్మండము తెలియని మాకూ అంతా నిండియుండే**
**వానిని తెలిసిరెందు కోరితిమీ ॥శ్రీ గురు॥**

5. **పుట్టలోని పామును బట్టే విధము తెలియద మాకూ**
**పామును పట్టే కట్టుమంత్రము తెలుపమని కోరితిమీ**
**॥శ్రీ గురు॥**

**ವಿವರ :–** ಪರಮಾತ್ಮನ ಸಾಕಾರ ಆಕಾರವಾದ ಭಗವಂತನೇ ನಿಜವಾದ ಗುರು. ಆತನೇ ಜಗದ್ಗುರು. ಜಗತ್ತಿಗೆಲ್ಲದಕ್ಕು ಅನ್ವಯಿಸುವ ಬೋಧ ತಿಳಿಸುವವನು ಆದ್ದರಿಂದ ಆತನನ್ನು 'ಜಗದ್ಗುರು' ಎನ್ನುತ್ತಿದ್ದೇವೆ. ಶರೀರದಲ್ಲಿ ನಿವಾಸಿಸುವ ಜೀವಿಗೆ ಶರೀರದಲ್ಲಿ ನಿವಾಸಿಸದೇ ಪರಮಾತ್ಮನಲ್ಲಿ ಬೆರೆತು ಹೋಗುವ ಜ್ಞಾನವನ್ನು ತಿಳಿಸುವ ಗುರುವೊಂದರ ಪಾದಗಳಿಗೆ ನಮಸ್ಕರಿಸುತ್ತಾ ಮೋಕ್ಷ ಹೊಂದುವ ಜ್ಞಾನವನ್ನು ತಿಳಿಸೆಂದು ಕೋರುತ್ತಾ ಒಬ್ಬರು "ಶ್ರೀ ಗುರು ಚರಣಾರವಿಂದಗಳು ನಂಬಿ ಆರಾಧಿಸುತ್ತೇವೆ ಅನುದಿನವೂ, ಇದೇರೀತಿಯಾಗಿ ಅದೇ ಬೋಧನೆಯಾಗಿ ಅನುದಿನ ಕೋರಿದೆವು ಎಂದಿದ್ದಾರೆ.

1 **ఆగర్భశత్రువులు ఆర్గురిని చంపేవిధమూ తెలియద మాకూ**
**తేజమ్మైన కత్తుల నిమ్మని కోరితిమి ॥శ్రీ గురు॥**

ಜನ್ಮದಿಂದಲೇ ಪ್ರಾರಂಭವಾದ ಶತ್ರುತ್ವವನ್ನು ಆಗರ್ಭಶತ್ರುತ್ವ ಎಂದು ಕರೆಯುತ್ತೇವೆ. ಮೊದಲಿನಿಂದಿರುವ ಶತ್ರುವನ್ನು ಆಗರ್ಭಶತ್ರು ಎನ್ನುತ್ತೇವೆ. ನಮ್ಮ ಜನ್ಮದಿಂದಲೇ ನಮ್ಮ ಶರೀರದಲ್ಲಿಯೇ ನಮ್ಮನ್ನು ಪಾಪಗಳಲ್ಲಿ ಮುಳುಗಿಸಿ ಕಷ್ಟಗಳ ಪಾಲುಮಾಡುವ ಆರು ಕೆಟ್ಟ ಗುಣಗಳು ಇವೆ. ಹಾಗೇ ಪುಣ್ಯಗಳನ್ನು ಅಂಟಿಸಿ ಸುಖಗಳಲ್ಲಿ ಮುಳುಗಿಸುವ ಆರು ಒಳ್ಳೆಯ ಗುಣಗಳು ಇವೆ. ಪುಣ್ಯವನ್ನು

ತಗಲಿಸುವ ಒಳ್ಳೆಯ ಗುಣಗಳನ್ನು ಮಿತ್ರರಾಗಿ ಲೆಕ್ಕಿಸಿದಾಗ ಪಾಪಗಳನ್ನು ತಗಲಿಸಿ ಕಷ್ಟಗಳ ಪಾಲುಮಾಡುವ ಕೆಟ್ಟ ಗುಣಗಳನ್ನು ಶತ್ರುಗಳಾಗಿ ಲೆಕ್ಕಿಸಬೇಕಾಗಿದೆ. 1) ಕಾಮ 2) ಕ್ರೋಧ 3) ಲೋಭ 4) ಮೋಹ 5) ಮದ 6) ಮತ್ಸರವೆನ್ನುವ ಆರು ಗುಣಗಳು ನಮ್ಮ ಶರೀರದಲ್ಲಿಯೇ ಶತ್ರುಪಾತ್ರ ವಹಿಸುತ್ತಿವೆ. ಇವು ಜೀವಿಯ ಪಾಲಿಗೆ ಭೀಕರವಾದ ಬಲವಾದ ಶತ್ರುಗಳು. ಈ ಆರು ಶತ್ರುಗಳನ್ನು ಜಯಿಸಬೇಕೆಂದರೆ ಜೀವಿಗೆ ಜ್ಞಾನ ಅಗತ್ಯ. ಲೋಕದಲ್ಲಿ ಜ್ಞಾನವೆನ್ನುವ ಕತ್ತಿಗಳಿಂದಲೇ ಗುಣಗಳೆನ್ನುವ ಶತ್ರುಗಳನ್ನು ಜಯಿಸಬಹುದು. ಆದ್ದರಿಂದ ಈ ತತ್ತ್ವದಲ್ಲಿ "ಆಗರ್ಭಶತ್ರುಗಳು ಆರು ಜನರನ್ನು ಸಾಯಿಸುವ ವಿಧಾನ ತಿಳಿಯದ ನಮಗೆ ತೇಜವಾದ ಕತ್ತಿಗಳನ್ನು ಕೊಡಲು ಕೋರಿದೆವು" ಎಂದು ಒಬ್ಬ ಜಿಜ್ಞಾಸಿ ಕೇಳಿದಂತೆ ಇದೆ.

**7. ఐదు పడగల పాము విషముతో బాధపడే మాకూ
బోధామృతమనే మందిమ్మని కోరితిమి ॥శ్రీ గురు॥**

ಭೂಮಿ ಮೇಲೆ ಎಲ್ಲಿಯಾದರೂ ಒಂದು ಹಾವಿಗೆ ಒಂದು ತಲೆಮಾತ್ರ ಇರುತ್ತದೆ. ಆದರೇ ನಮ್ಮ ಶರೀರದಲ್ಲಿ ಮನಸ್ಸು ಎನ್ನುವ ಹಾವಿಗೆ ಐದು ತಲೆಗಳು ಇವೆ. ಒಂದೊಂದು ತಲೆಯಲ್ಲಿ ಒಂದೊಂದು ವಿಧವಾದ ವಿಷಯವಿದೆ. ಮನಸ್ಸು ಒಂದೇ ಆದರೂ, ಅದು ಜೀವಿಗೆ ಒದಗಿಸುವ ವಿಷಯಗಳು ಐದು ವಿಧಗಳಾಗಿವೆ. ಮನಸ್ಸಿಗಿರುವ ಐದು ತಲೆಗಳು ಕ್ರಮವಾಗಿ 1) ಕಣ್ಣು 2) ಕಿವಿ 3) ಮೂಗು 4) ನಾಲಿಗೆ 5) ಚರ್ಮ. ಶರೀರದಲ್ಲಿನ ಈ ಐದು ಇಂದ್ರಿಯಗಳು ಐದು ವಿಧಗಳ ವಿಷಯಗಳನ್ನು ಜೀವಿಗೆ ಒದಗಿಸುತ್ತಿವೆ. ಈ ಐದು ವಿಷಯಗಳಿಂದ ಜೀವಿಯು ಅಹರ್ನಿಶೆಗಳು ವಿಲವಿಲನೆ ಹೊದ್ದಾಡುತ್ತಿದ್ದಾನೆ. ವಿಷಕ್ಕೆ ಯಾವ ಮನುಷ್ಯನಾದರೂ ದುಃಖಪಡದೆ ತಪ್ಪಲ್ಲ. ಹಾಗೇ ಮನುಷ್ಯನಲ್ಲಿನ ಐದು ಹೆಡೆಗಳ ವಿಷಕ್ಕೆ ತಪ್ಪದೆ ಬಾಧೆಪಡಬೇಕಾಗಿ ಬರುತ್ತಿದೆ. ವಿಷಕ್ಕಾದರೆ ಬಾಧೆಪಡಬಹುದು ಆದರೆ ವಿಷಯಕ್ಕೆ ಏಕೆ ಬಾಧೆಪಡಬೇಕುಯೆಂದು ಕೆಲವರು ಅಂದುಕೊಳ್ಳಬಹುದು. ಅದಕ್ಕೆ ನಮ್ಮ ವಿವರವೇನೆಂದರೇ ವಿಷ ಎನ್ನುವುದು ಎಲ್ಲರಿಗೂ ತಿಳಿದಿರುವುದೇ.

ಆಹಾರಕ್ಕೆ ವಿಷವನ್ನು ಸೇರಿಸಿದರೆ ವಿಷ ಆಹಾರವಾಗುತ್ತದೆ. ಹಾಗೇ ಪಾನೀಯಕ್ಕೆ ವಿಷವನ್ನು ಸೇರಿಸಿದರೆ ವಿಷ ಪಾನೀಯವಾಗುತ್ತದೆ. ಎರಡು ಪದಗಳಲ್ಲಿಯೂ **"ವಿಷ"** ಎಂದು ಹೇಳಿ ವಿಷವು ಎಂದು ಏಕೆ ಹೇಳಲಿಲ್ಲವೆಂದರೇ ವಿಷ ಎನ್ನುವ ಎರಡಕ್ಷರ ಗಳೇ ಪೂರ್ತಿ ಅರ್ಥಕೊಡುತ್ತಿವೆ. ಒಂದು ಅರ್ಥದಿಂದ ಕೂಡಿದ ಅಕ್ಷರಗಳಿಗೆ ಪದ ಸಂಪೂರ್ಣವಾಗುವುದಕ್ಕೆ **"ವು"** ಎನ್ನುವ ಅಕ್ಷರವನ್ನು ಸೇರಿಸಿಕೊಳ್ಳುತ್ತೇವೆ. ಆದ್ದರಿಂದ ವಿಷ ಎನ್ನುವ ಅರ್ಥಕೊಡುವ ಎರಡಕ್ಷರಗಳನ್ನು ಪದ ಮಾಡುವುದಕ್ಕೆ **"ವು"** ನನ್ನು ಸೇರಿಸಿ ವಿಷವು ಎನ್ನುತ್ತಿದ್ದೇವೆ.

ಹಾಗೇ ಯಮ ಬಾಧೆಗಳು ಎನ್ನುವ ಪದದಲ್ಲಿ **ಯಮ** ಎನ್ನುವ ಅರ್ಥಕೊಡುವ ಅಕ್ಷರಕ್ಕೆ **'ನು'** ಸೇರಿಸಿ ಯಮನು ಎನ್ನುತ್ತಿದ್ದೇವೆ. ವಿಷದಿಂದ ಯಮಲೋಕಕ್ಕೆ ಸೇರಬೇಕಾಗಿದ್ದೆ ಅಂದರೇ ಅಲ್ಲಿ ಬಾಧೆಗಳನ್ನು ಅನುಭವಿಸಬೇಕಾಗಿದ್ದೆ. ಆದ್ದರಿಂದ ಬಾಧೆಗಳು ಸೂಚಿಸುವ ಯಮ ಎನ್ನುವ ಪದವನ್ನು ಹಾನಿಯನ್ನುಂಟುಮಾಡುವ ವಿಷ ಎನ್ನುವಪದವನ್ನು ತೆಗೆದುಕೊಂಡು **ವಿಷ** + **ಯ** ಎನ್ನುವವುಗಳನ್ನು ಸೇರಿಸಿದರೆ **ವಿಷಯ ಆಗುತ್ತಿದೆ**. ವಿಷಯ ಎನ್ನುವ ಪದದಲ್ಲಿ ಹಾನಿಕರವಾದ ಬಾಧೆಗಳು ಉಂಟುಮಾಡುವುದೆಂದು ಅರ್ಥವಿದೆ. ಮನಸ್ಸೆನ್ನುವ ಹಾವು ಪ್ರಪಂಚ ವಿಷಯವನ್ನು ಐದು ವಿಧಗಳಾಗಿ ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ ಎನ್ನುವವುಗಳ ಮೂಲಕ ತಿಳಿಸುತ್ತಿದೆ. ವಿಷಯದಲ್ಲಿಯೇ ಹಾನಿಕರವಾದ ಬಾಧೆಗಳಿಂದ ಕೂಡಿಕೊಂಡ ಅರ್ಥ ಇರುವುದರಿಂದ ಐದು ಇಂದ್ರಿಯಗಳನ್ನು ಐದು ಹಾವಿನ ತಲೆಗಳಾಗಿ, ಮನಸ್ಸನ್ನು ಹಾವಾಗಿ ವರ್ಣಿಸಿ ಅವುಗಳಿಂದ ಹಾನಿ ಉಂಟಾಗುತ್ತಿದೆಯೆಂದು ತಿಳಿಸುವುದಕ್ಕೆ ಈ ತತ್ತ್ವದಲ್ಲಿ "ಐದು ತಲೆಗಳ ಹಾವಿನ ವಿಷದಿಂದ ಬಾಧೆಪಡುವ ನಮಗೆ" ಎಂದಿದ್ದಾನೆ.

ವಿಷಕ್ಕೆ ಇಳುವು ಔಷಧಿ. ಮನಸ್ಸೆನ್ನುವ ಹಾವಿನ ಹೆಡೆಗಳ ವಿಷಕ್ಕೆ ಸಾಮಾನ್ಯ ಔಷಧ ಸರಿಹೊಗುವುದಿಲ್ಲ ಅದಕ್ಕೆ ಜ್ಞಾನವೆನ್ನುವ ಔಷಧಿಯೇ ಇಳುವು ಆದ್ದರಿಂದ ಬೋಧಾಮೃತವೆನ್ನುವ ಔಷಧಿ ಕೊಡಲು **ಕೋರಿದೆವು"** ಎಂದು

ಹೇಳಿದ್ದಾರೆ. ಇದರಿಂದ ವಿಷಯಗಳಲ್ಲಿ ವಿಷವಿದೆಯೋಯಣ್ಣ ಎಂದು ಕೆಲವರಂದಿದ್ದಾರೆ. ಈಗಿನಿಂದ ವಿಷಯಗಳ ಬಗ್ಗೆ ಬಹು ಜಾಗ್ರತೆಯಾಗಿರಬೇಕು.

**4. ಏಡು ಕೊಂಡಲು ಎಕ್ಕೇ ಮಾರ್ಗಮು ತೆಲಿಯನಿ ಮಕೂ**
**ಕಂಟಕಮುಲು ಲೇನಿ ಮಾರ್ಗಮು ತೆಲುಪಮನಿ ಕೋರಿತಿಮಿ**

**॥ಶ್ರೀ ಗುರು॥**

ಪೂರ್ವಕಾಲದಲ್ಲಿ ಮೊಟ್ಟಮೊದಲು ತಯಾರಾದ ದೇವಾಲಯ ಶಿವಲಿಂಗ. ನಂತರ ಎರಡನೆಯದು ರೂಪಹೊಂದಿದ ನಾಮಗಳ ಪ್ರತಿಮೆ. ಒಂದು ನಿರಾಕಾರವಾದ ಪರಮಾತ್ಮಗೆ ಗುರುತು, ಎರಡನೆಯದು ಸಾಕಾರವಾದ ಭಗವಂತನಿಗೆ ಗುರುತೆಂದು **'ದೇವಾಲಯ ರಹಸ್ಯಗಳು'** ಎನ್ನುವ ಗ್ರಂಥದಲ್ಲಿ ತಿಳಿದುಕೊಂಡಿದ್ದೇವೆ. ಮನುಷ್ಯನಲ್ಲಿ ದೈವಜ್ಞಾನ ವೃದ್ಧಿ ಆಗುವುದಕ್ಕೆ ಈ ಎರಡು ದೇವಾಲಯಗಳು ಅಗತ್ಯವೆಂದು ಅಂದಿನ ಜ್ಞಾನಿಗಳು ಇವುಗಳನ್ನು ನಿರ್ಮಿಸಿದ್ದಾರೆ. ದೈವಜ್ಞಾನ ತಿಳಿಯುವುದಕ್ಕೆ ಆ ದಿನ ಎಷ್ಟೋ ಯೋಚಿಸಿ ಸೂತ್ರಬದ್ಧವಾಗಿ, ಶಾಸ್ತ್ರಬದ್ಧವಾಗಿ ತಯಾರಿ ಮಾಡಲ್ಪಟ್ಟಿರುವವೇ ಎರಡು ದೇವಾಲಯಗಳು, ಪೂರ್ವ ದಲ್ಲಿ ವಿಭೂತಿ ರೇಖೆಗಳಿರುವ ಲಿಂಗ, ಮೂರು ನಾಮಗಳಿರುವ ಪ್ರತಿಮೆ ದೇವಾಲಯಗಳು ಹೊರತು ಇತರೆ ದೇವಾಲಯಗಳಿರುವವು ಅಲ್ಲ. ನಂತರ ಸ್ವಲ್ಪ ಕಾಲಕ್ಕೆ ಈ ಎರಡು ದೇವಾಲಯಗಳ ಒಂದರ ಜ್ಞಾನ ವಿವರ ತಿಳಿಯದೇ ಹೋಗಿದೆ. ಅವುಗಳ ವಿಶೇಷತೆಯನ್ನು ಕುರಿತು ಹೇಳುವವರು ಇಲ್ಲದೇ ಹೋಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಮಾಯೆಗೆ ಒಳ್ಳೆಯ ಅವಕಾಶ ಏರ್ಪಟ್ಟಿದೆ. ಮಾಯೆ ಪ್ರೇರಣೆಯಿಂದ ಮನುಷ್ಯರಲ್ಲಿ ಅಜ್ಞಾನ ಬೆಳೆದುಹೋಗಿದೆ. ಹಾಗಿರುವಾಗ ರಾಮನ ದೇವಾಲಯದ ನಂತರ ಆಂಜನೇಯನ ದೇವಾಲಯ ತಯಾರಾಗಿವೆ. ಇವುಗಳ ನಂತರ ಅನೇಕವಾದ ದೇವಾಲಯಗಳು ತಯಾರಾಗಿವೆ.

ಆಧ್ಯಾತ್ಮಿಕ ವಿದ್ಯೆಯಲ್ಲಿ ಭಾರತದೇಶ ಮೊಟ್ಟಮೊದಲನೆಯದು. ಪ್ರಪಂಚದಲ್ಲಿ ಎಲ್ಲಾ ದೇಶಗಳಿಗಿಂತ ದೈವಜ್ಞಾನದಲ್ಲಿ ಭಾರತದೇಶವೇ ಪ್ರಥಮ ಸ್ಥಾನದಲ್ಲಿದೆ. ನಾವು ನಿವಾಸಿಸುವ ದೇಶಕ್ಕೆ ಮೊದಲು ಇಂದೂದೇಶವೆಂದು ಹೆಸರಿತ್ತು. ಆ ಹೆಸರು ಸ್ವಲ್ಪ ಬದಲಾವಣೆಯಿಂದ ಹಿಂದೂದೇಶವೆಂದು ಈ ದಿನಕ್ಕೆ ಕರೆಯಲ್ಪಡುತ್ತಿದೆ. ಆದರೂ ಹಿಂದೂದೇಶಕ್ಕೆ ಭಾರತದೇಶವೆನ್ನುವ ಎರಡನೆ ಹೆಸರು ಕೂಡಾ ಸ್ವಲ್ಪಕಾಲಕ್ಕೆ ಏರ್ಪಟ್ಟಿದೆ. ವ್ಯವಹಾರಗಳಲ್ಲಿ ಹಿಂದೂದೇಶ ಎನ್ನುವ ಹೆಸರಿಗಿಂತ ಭಾರತದೇಶವೆನ್ನುವ ಹೆಸರೇ ಹೆಚ್ಚಾಗಿದೆ. ನಮ್ಮ ದೇಶ ಎಲ್ಲಾ ದೇಶಗಳಿಗಿಂತ ಆಧ್ಯಾತ್ಮಿಕ ಜ್ಞಾನದಲ್ಲಿ ಮೊಟ್ಟಮೊದಲನೆಯದು. ಆದ್ದರಿಂದ ಈ ದೇಶಕ್ಕೆ **ಇಂದೂ** ಎನ್ನುವ ಅರ್ಥದಿಂದ ಕೂಡಿಕೊಂಡ ಹೆಸರನ್ನು ಹೊಂದಿರುವಂತೆ ಇಂದೂದೇಶ ಎಂದಿದ್ದಾರೆ. ಆ ದಿನ ಜ್ಞಾನಿಗಳಿಟ್ಟಿರುವ ಮೊದಲ ಹೆಸರಾದ ಇಂದೂ ಎನ್ನುವ ಅರ್ಥವಾಗಲಿ, ಪದವಾಗಲಿ ಈದಿನ ಇಲ್ಲ. ದೈವ ಜ್ಞಾನದಲ್ಲಿ ಅಂದಿಗೂ ಇಂದಿಗೂ ಪ್ರಥಮ ಸ್ಥಾನದಲ್ಲಿಯೇ ನಾವು ಇದ್ದೇವೆ. ಇನ್ನೂ ಸ್ವಲ್ಪ ವಿವರವನ್ನು ತಿಳಿದುಕೊಂಡರೆ ಈ ವಿಧವಾಗಿದೆ. ಭಾರತದೇಶ ಉತ್ತರಭಾರತ, ದಕ್ಷಿಣಭಾರತವೆನ್ನುವ ಎರಡು ಭಾಗಗಳಾಗಿ ಇರುತ್ತಿತ್ತು. ಉತ್ತರ ಭಾರತದಲ್ಲಿನವರಿಗೆ ಸಂಸ್ಕೃತ ವಿದ್ಯೆಯಲ್ಲಿ ಪಾಂಡಿತ್ಯ ಹೆಚ್ಚಾಗಿರುತ್ತಿತ್ತು. ದಕ್ಷಿಣಭಾರತದಲ್ಲಿ ಇರುವವರಿಗೆ ಓದುವುದಾಗಲಿ, ಸಂಸ್ಕೃತ ಪಾಂಡಿತ್ಯವಾಗಲಿ ಇಲ್ಲದಂತಿತ್ತು. ಆದರೇ ಆಧ್ಯಾತ್ಮಿಕ ವಿದ್ಯೆಯಲ್ಲಿ ದೊಡ್ಡದೊಡ್ಡ ಜ್ಞಾನಿಗಳು ದಕ್ಷಿಣದೇಶದಲ್ಲಿ ಇರುತ್ತಿದ್ದರು. ದಕ್ಷಿಣದೇಶದವರಿಂದಲೇ ಈ ದೇಶಕ್ಕೆ ಇಂದೂದೇಶವೆಂದು ಹೆಸರು ಬಂದಿದೆ. ಇಂದೂ ದೇಶವೆಂದರೇ ಜ್ಞಾನಿಗಳ ದೇಶವೆಂದು ಆ ದಿನದ ಅರ್ಥ. ಈ ದಿನ ಆ ಅರ್ಥ ಸ್ವಲ್ಪವೂ ಇಲ್ಲದೇ ಹೋಗಿದೆ. ದಕ್ಷಿಣ ಭಾರತದೇಶದಲ್ಲಿ ಅಂದಿನ ಜ್ಞಾನಿಗಳು ಆಧ್ಯಾತ್ಮಿಕಕ್ಕೆ ಸಂಬಂಧಿಸಿದಂತೆ, ಬ್ರಹ್ಮವಿದ್ಯೆಯನ್ನು ಅನುಸರಿಸಿ ದೇವಾಲಯಗಳು ನಿರ್ಮಿಸಿದ್ದಾರೆ. ಆದ್ದರಿಂದ ಶಾಸ್ತ್ರಪದ್ಧತಿಯಾಗಿರುವ ದೇವಾಲಯಗಳು ದಕ್ಷಿಣ ಭಾರತದೇಶದಲ್ಲಿಯೇ ಕಾಣಿಸುತ್ತವೆ. ಗಾಳಿ ಗೋಪುರ, ಧ್ವಜಸ್ತಂಭ, ಏಳು ದ್ವಾರಗಳು, ಗರ್ಭಗುಡಿ ಇವೆಲ್ಲವೂ ದಕ್ಷಿಣದೇಶದಲ್ಲಿನ ದೇವಾಲಯಗಳಲ್ಲಿ

ಕಾಣಿಸುತ್ತವೆ. ಉತ್ತರದೇಶದಲ್ಲಿ ಆತ್ಮಜ್ಞಾನಿಗಳು ಇಲ್ಲದಂತಿದ್ದರು. ಆದ್ದರಿಂದ ಅಲ್ಲಿ ದೇವಾಲಗಳಿದ್ದರೂ ಅವುಗಳಲ್ಲಿ ಗಾಳಿಗೋಪುರವಾಗಲಿ, ಧ್ವಜಸ್ತಂಭವಾಗಲಿ, ಏಳು ದ್ವಾರಗಳಾಗಲಿ, ಗರ್ಭಗುಡಿಯಾಗಲಿ ಇರುವುದಿಲ್ಲ. ದಕ್ಷಿಣ ದೇಶದಲ್ಲಿ ಆತ್ಮಜ್ಞಾನಿಗಳಿರುತ್ತಿದ್ದರು, ಉತ್ತರದೇಶದಲ್ಲಿ ವಿಧ್ವಾಂಸರಿರುತ್ತಿದ್ದರು. ಆದ್ದರಿಂದ ಉತ್ತರದೇಶದಲ್ಲಿ ಸಂಸ್ಕೃತ ಪಾಂಡಿತ್ಯ, ದಕ್ಷಿಣದಲ್ಲಿ ಆತ್ಮಜ್ಞಾನ ಈಗಲೂ ಇವೆ. ಇಂದಿಗೂ ಶಾಸ್ತ್ರಬದ್ಧವಾದ ಪುರಾತನ ದೇವಾಲಯಗಳು ದಕ್ಷಿಣದೇಶದಲ್ಲಿವೆ. ಕಾಲಕ್ರಮೇಣ ಅಜ್ಞಾನ ಬೆಳೆಯುತ್ತಾ ಹೋಗುತ್ತಿದೆ, ಆದ್ದರಿಂದ ಪುರಾತನ ದೇವಾಲಯಗಳ ಅರ್ಥ ದಕ್ಷಿಣದೇಶದಲ್ಲಿ ಕೂಡಾ ತಿಳಿಯದೇ ಹೋಗಿದೆ. ಆದ್ದರಿಂದ ಪ್ರಸ್ತುತ ಕಾಲದಲ್ಲಿ ದಕ್ಷಿಣ ದೇಶದಲ್ಲಿ ಕೂಡಾ ತಯಾರಾಗುವ ದೇವಾಲಯಗಳು ಶಾಸ್ತ್ರಬದ್ಧತೆ ಇಲ್ಲದೇ ತಯಾರಾಗುತ್ತಿವೆ.

ದಕ್ಷಿಣ ದೇಶದಲ್ಲಿನ ಇಂದೂಗಳು ಪೂರ್ವದಲ್ಲಿ ಪೂರ್ತಿ ಜ್ಞಾನಹೊಂದಿ ಇರುವುದರಿಂದ ಅವರು ತಯಾರುಮಾಡಿದ ಆಲಯಗಳು ಜ್ಞಾನ ಚಿಹ್ನೆಗಳಾಗಿ ರುತ್ತಿದ್ದವು. ಹಾಗೇ ಅವರು ಹೇಳುವ ಬೋಧನೆಗಳು ಪೂರ್ತಿ ಜ್ಞಾನದಿಂದ ತುಂಬಿಕೊಂಡಿರುತ್ತಿದ್ದವು. ಅದೇ ವಿಧವಾಗಿ ಅವರು ಬರೆದ ತತ್ತ್ವಗಳೆನ್ನುವ ಹಾಡುಗಳು ಆತ್ಮಜ್ಞಾನದಿಂದ ಮೂರ್ತೀಭವಿಸಿ ಇರುತ್ತಿದ್ದವು. ಈಗ ನಾವು ಹೇಳಿಕೊಳ್ಳುವ ಈ ತತ್ತ್ವ ಪೂರ್ವದ ಜ್ಞಾನಿಗಳಿಂದ ಬರೆಯಲ್ಪಟ್ಟಿದೆ ಆದ್ದರಿಂದ ಅದರಲ್ಲಿ ಆತ್ಮಜ್ಞಾನದಿಂದ ಕೂಡಿಕೊಂಡ ವಿವರಗಳು ಇವೆ. ಇಲ್ಲಿ "ಏಳು ಬೆಟ್ಟಗಳು ಹತ್ತುವ ಮಾರ್ಗ ತಿಳಿಯದ ನಮಗೆ ಕಂಟಕಗಳು ಇಲ್ಲದ ಮಾರ್ಗವನ್ನು ತಿಳಿಸೆಂದು ಕೋರಿದೆವು" ಎಂದು ಇದೆ. ಪೂರ್ವಕಾಲದ ಜ್ಞಾನಿಗಳ ಉದ್ದೇಶದ ಪ್ರಕಾರ ಏಳುಬೆಟ್ಟಗಳು ಎಂದಾಗ ನಮ್ಮ ಶರೀರದಲ್ಲಿನ ಏಳು ನಾಡಿಕೇಂದ್ರಗಳೆಂದು ಅರ್ಥ. ಶರೀರದಲ್ಲಿಯೇ ಆತ್ಮಗಳು ನಿವಾಸಿಸುತ್ತಿವೆ. ಆದ್ದರಿಂದ ಶರೀರದಲ್ಲಿಯೇ ಆತ್ಮ ಜ್ಞಾನವಿದೆ. ಆತ್ಮಜ್ಞಾನದ ಪ್ರಕಾರ ಏಳು ನಾಡಿಕೇಂದ್ರಗಳನ್ನು ಏಳು ದ್ವಾರಗಳಾಗಿ, ಏಳು ಬೆಟ್ಟಗಳಾಗಿ ಹೋಲಿಸಿ ಹೇಳಿದ್ದಾರೆ. ಶರೀರದಲ್ಲಿನ ಆರು ನಾಡಿಕೇಂದ್ರಗಳನ್ನು ಅತಿಕ್ರಮಿಸಿ ಏಳನೇ ನಾಡಿಕೇಂದ್ರವಾದ ಮೆದುಳು ಭಾಗ ದಲ್ಲಿರುವ ಆತ್ಮವನ್ನು ತಿಳಿಯಬಹುದು. ಶರೀರದಲ್ಲಿ ಮನಸ್ಸನ್ನು ನಿರೋಧಿಸಿ

ಬ್ರಹ್ಮಯೋಗ ಮಾಡುವ ಯೋಗಿಗಳಿಗೆ ಅದು ಸಾಧ್ಯವಾದ ಕೆಲಸ. ಶರೀರದಲ್ಲಿನ ಏಳು ಬೆಟ್ಟಗಳಾದ ಏಳು ನಾಡೀಕೇಂದ್ರಗಳನ್ನು ಹತ್ತುವ ವಿಧಾನ ವಿವರ ತಿಳಿಯದ ಅಜ್ಞಾನಿಗಳಾದ ನಮಗೆ ಪೂರ್ತಿ ಜ್ಞಾನ ತಿಳಿಸಿ ಸಂಶಯಗಳೆನ್ನುವ ಮುಳ್ಳುಗಳಿಲ್ಲದ ಮಾರ್ಗಗಳನ್ನು ತಿಳಿಸಲು ಗುರುವನ್ನು ಕೋರಿದಂತೆ ಈ ವಾಕ್ಯದಲ್ಲಿನ ವಿವರ.

**4. ಅಂಡ ಪಿಂಡ ಬ್ರಹ್ಮಾಂಡಮು ತೆಲಿಯನಿ ಮಾಕೂ ಅಂತಾ ನಿಂಡಿಯುಂಡೇ ವಾನಿನಿ ತೆಲುಪಮನಿ ಕೋರಿತಿಮೀ ॥ಶ್ರೀ ಗುರು॥**

ಅಂಡ ಎಂದರೇ ಮೊಟ್ಟೆ, ಪಿಂಡ ಎಂದರೇ ಗರ್ಭ. ಕಾಣಿಸುವ ಕದಲುತ್ತಿರುವ ಜೀವರಾಶಿಗಳಲ್ಲಿ ಕೆಲವು ಅಂಡದಿಂದ ಹುಟ್ಟುತ್ತಿವೆ, ಕೆಲವು ಗರ್ಭದಿಂದ ಹುಟ್ಟುತ್ತಿರುವವು ಇವೆ. ಭೂಮಿಮೇಲೆ ಚಲಿಸುವ ಜೀವರಾಶಿ ಗಳೆಲ್ಲವನ್ನು ಸೇರಿಸಿ ಅಂಡಜಗಳು, ಪಿಂಡಜಗಳು ಎಂದು ಕರೆಯುತ್ತಿದ್ದೇವೆ. ಅಷ್ಟೇ ಅಲ್ಲದೆ ಕಾಣಿಸದ ಜೀವರಾಶಿಗಳಾದ ಸೂಕ್ಷ್ಮಕ್ರಿಮಿಗಳು ಚಲಿಸದ ಜೀವರಾಶಿಗಳಾದ ಗಿಡಗಳು ಎಷ್ಟೋ ಇವೆ. ಒಟ್ಟಾರೆ ವಿಶ್ವವೆಲ್ಲವನ್ನು ಲೆಕ್ಕಿಸಿ ನೋಡಿದರೆ ಈ ಜೀವರಾಶಿಗಳೇ ಅಲ್ಲದೇ ಪ್ರಕೃತಿಯಾದ ಮಹಾ ಭೂತಗಳೆನ್ನುವ ಐದು ದೊಡ್ಡ ಜೀವಿಗಳು ಕೂಡಾ ಇದ್ದಾರೆ. ಚಿಕ್ಕ ಜೀವರಾಶಿಗಳಾದ ಚಲಿಸುವ ಜೀವರಾಶಿಗಳನ್ನು ಅಂಡ ಪಿಂಡವೆಂದು ಕರೆಯುತ್ತಾ, ಅತಿ ದೊಡ್ಡವಾದ ಬಲವಾದವುಗಳಾದ ಐದು ಜೀವಿಗಳನ್ನು ಬ್ರಹ್ಮಾಂಡವೆಂದು ಕರೆಯುತ್ತಿದ್ದೇವೆ. ಒಟ್ಟಾರೆ ವಿಶ್ವವೆಲ್ಲವನ್ನು ಒಂದುಮಾತಿನಲ್ಲಿ ಅಂಡ, ಪಿಂಡ, ಬ್ರಹ್ಮಾಂಡವೆಂದು ಕರೆಯುತ್ತಿದ್ದೇವೆ. ಬಹಳಜನರಿಗೆ ಕೆಲವು ಜೀವರಾಶಿಗಳು ತಿಳಿದಿವೆ, ಕೆಲವು ತಿಳಿದಿಲ್ಲ. ಕೆಲವರಿಗೆ ಅಂಡಪಿಂಡವಾದ ಜೀವಿಗಳು ತಿಳಿದರೂ ಬ್ರಹ್ಮಾಂಡವಾದ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿ ಕೂಡಾ ಜೀವಿಗಳೆಂದು ತಿಳಿದಿಲ್ಲ. ಆದ್ದರಿಂದ 'ಅಂಡ ಪಿಂಡ ಬ್ರಹ್ಮಾಂಡ ತಿಳಿಯದ ನಮಗೆ' ಎಂದು ಈ ವಾಕ್ಯದಲ್ಲಿ ಹೇಳಲ್ಪಟ್ಟಿದೆ.

ಅಂಡ ಪಿಂಡ ಬ್ರಹ್ಮಾಂಡವೆಂದು ವಿಶ್ವವೆಲ್ಲವನ್ನು ಸೇರಿಸಿ ಕರೆಯುತ್ತಿದ್ದೇವೆ. ವಿಶ್ವವೆಲ್ಲಾ ವ್ಯಾಪಿಸಿದ್ದು, ವಿಶ್ವವೆಲ್ಲದಕ್ಕು ಆಧಾರವಾಗಿ ಕಾಣಿಸದಿರುವುದು ಒಂದಿದೆ. ಅದನ್ನೇ ದೈವ ಎನ್ನುತ್ತಿದ್ದೇವೆ. ಹುಡುಕಿದರೂ ಕಾಣಿಸದು ಆದ್ದರಿಂದ ದೇವರು ಅನ್ನುತ್ತಿದ್ದೇವೆ. ಅದು ಸ್ತ್ರೀಲಿಂಗವಲ್ಲ, ಪುರುಷಲಿಂಗವು ಅಲ್ಲ ಆದ್ದರಿಂದ ಕಾಣಿಸದಿರುವುದೆಂದು, ಕಾಣಿಸದವನೆಂದು ಎರಡು ವಿಧಗಳಾಗಿ ಕರೆಯುತ್ತಿದ್ದೇವೆ. ಅಂಡ ಪಿಂಡ ಬ್ರಹ್ಮಾಂಡವನ್ನು ಸೃಷ್ಠಿಸಿ ಪೋಷಿಸುವವನು ದೇವರು. ದೇವರಿಂದ ಸೃಷ್ಠಿಸಲ್ಪಟ್ಟ ಅಂಡ ಪಿಂಡ ಬ್ರಹ್ಮಾಂಡವೇ ನಮಗೆ ಅರ್ಥವಾಗಲಿಲ್ಲ. ಇನ್ನು ಅದನ್ನು ಸೃಷ್ಠಿಸಿದ ದೇವರು ಎಂತಹವನೊ ಯಾರಿಗೂ ತಿಳಿದಿಲ್ಲ. ಅಂಡ ಪಿಂಡ ಬ್ರಹ್ಮಾಂಡ ಏನೋ, ಅದನ್ನು ಸೃಷ್ಠಿಸಿದ ಅವನೆಂತಹವನೊ, ಸ್ವಲ್ಪ ವಿವರವನ್ನು ತಿಳಿಸೆಂದು ಗುರುವನ್ನು ಕೋರಿದಂತೆ ಮೇಲಿನ ಚರಣದಲ್ಲಿದೆ.

**5. ಪುಟ್ಟಲೋನಿ ಪಾಮುನು ಬಟ್ಟೇ ವಿಧಮು ತೆಲಿಯನಿ ಮಾಕೂ**
**ಪಾಮುನು ಪಟ್ಟೇ ಕಟ್ಟುಮಂತ್ರಮು ತೆಲುಪಮನಿ ಕೋರಿತಿಮೀ**
**॥ಶ್ರೀ ಗುರು॥**

ಹಾವು ಬುಸಗುಟ್ಟುವ ಸ್ವಭಾವ ಇರುವುದು. ಹಾವುಗಳು ಹುತ್ತಗಳಲ್ಲಿ ನಿವಾಸ ಇರುತ್ತವೆಂದು ಎಲ್ಲರಿಗೂ ತಿಳಿದಿದೆ. ಹುತ್ತದಲ್ಲಿನ ಹಾವನ್ನು ಹಿಡಿಯಬೇಕೆಂದರೆ ಸ್ವಲ್ಪ ಶಿಕ್ಷಣೆ ಅನುಭವ ಬೇಕು. ಆ ಅನುಭವವನ್ನು ಅದಕ್ಕೂ ಮೊದಲು ಅನುಭವ ಇರುವವನ ಹತ್ತಿರವೇ ಕಲಿಯಬೇಕು. ಹಾವನ್ನು ಹಿಡಿಯಬೇಕೆಂದರೆ ಅದನ್ನು ಕಟ್ಟಲೆ ಮಾಡುವ ಮಂತ್ರವನ್ನು ತಿಳಿದುಕೊಳ್ಳಬೇಕಾಗಿದೆ. ಆ ಮಂತ್ರವನ್ನು ಕಲಿತುಕೊಳ್ಳುವುದಕ್ಕೆ ಒಬ್ಬ ಮಂತ್ರಗಾರನನ್ನು ಆಶ್ರಯಿಸಬೇಕಾಗಿದ್ದೇ ಇದೇ ವಿಧಾನ ಆತ್ಮಜ್ಞಾನದಲ್ಲಿ ಕೂಡಾ ಇದೆ. ಅದೇನೆಂದರೇ ಹುತ್ತ ಎಂದರೇ ಶರೀರವೆಂದು ತಿಳಿಯಬೇಕು. ಹುತ್ತದಲ್ಲಿನ ಹಾವು ಎಂದರೇ ಶರೀರದಲ್ಲಿನ ಆತ್ಮ ಎಂದು ತಿಳಿಯಬೇಕು. ಶರೀರವೆನ್ನುವ ಹುತ್ತದಲ್ಲಿ ಎರಡು ವಿಧಗಳ ಹಾವುಗಳು ಇವೆ. ಒಂದು ಚುರುಕುತನದಿಂದಿದ್ದು ಹುತ್ತವೆಲ್ಲವೂ

ತಿರುಗುತ್ತಾ ಬುಸಗುಟ್ಟುವಹಾವು, ಎಡನೆಯದು ಮಂದವಾಗಿ ಒಂದೇ ಕಡೆ ಇದ್ದು ಬುಸಗುಟ್ಟದ ಹಾವು. ಎರಡು ಹಾವುಗಳನ್ನು ಎರಡು ಆತ್ಮಗಳೆಂದು ಹೇಳಬಹುದು. ಒಂದು ಚುರುಕುತನ ಹೊಂದಿ ಕದಲುತ್ತಿರುವ ಬುಸಗುಟ್ಟುವ ನಾಗರಹಾವು. ಎರಡನೆಯದು ಚುರುಕುತನ ಇಲ್ಲದೇ, ಕದಲದಂತೆ, ಬುಸಗುಟ್ಟದಂತಿರುವ ಹಾವು. ಬುಸಗುಟ್ಟುವ ಹಾವು ಚೈತನ್ಯವಿರುವ ಆತ್ಮ ಎಂದೂ, ಬುಸಗುಟ್ಟದ ಹಾವೇ ಚೈತನ್ಯವಿಲ್ಲದ ಜೀವಾತ್ಮ ಎಂದೂ ಹೇಳಬಹುದು. ಹೊರಗಿರುವ ಮಣ್ಣಿನ ಹುತ್ತದಲ್ಲಿ ಒಂದುಹಾವು ಇರಬಹುದು, ಆದರೆ ಶರೀರವೆನ್ನುವ ಹುತ್ತದಲ್ಲಿ ಎಂದಿಗೂ ಎರಡು ಹಾವುಗಳೇ ಇರುತ್ತವೆ. ಮಣ್ಣಿನ ಹುತ್ತಕ್ಕೆ ರಂದ್ರಗಳೆಷ್ಟಾದರೂ ಇರಬಹುದು, ಆದರೆ ಶರೀರವೆನ್ನುವ ಹುತ್ತಕ್ಕೆ ಒಂಭತ್ತು ರಂಧ್ರಗಳು ಮಾತ್ರವೇ ಇರುತ್ತವೆ. ಈ ವಿಧವಾಗಿ ಹೊರಗಿನ ಮಣ್ಣಿನ ಹುತ್ತಕ್ಕು. ಶರೀರವೆನ್ನುವ ಹುತ್ತಕ್ಕು ವ್ಯತ್ಯಾಸಗಳು ಇವೆ.

ಆಧ್ಯಾತ್ಮಿಕ ವಿದ್ಯೆ ಪ್ರಕಾರ ಇಲ್ಲಿ ವಿಶೇಷವೇನೆಂದರೇ ಎರಡನೆಯದಾದ ಬುಸಗುಟ್ಟದ ಹಾವು ಮೊದಲನೆಯದಾದ ಬುಸಗುಟ್ಟುವ ನಾಗರಹಾವನ್ನು ಅಮುಕಿ ಹಿಡಿಯಬೇಕು. ಅಂದರೇ ಕದಲದ ಹಾವು ಕದಲುವ ಹಾವನ್ನು ಜಯಿಸಬೇಕು ಎಂದು ಅಂದುಕೊಳ್ಳೋಣ. ಹಾವುಗಳಾದ ನಾವು ಅಂದರೇ ಶರೀರದಲ್ಲಿಯೇ ನಿವಾಸಿಸುವ ಜೀವಾತ್ಮಗಳು, ಜೀವಾತ್ಮ ದೊಂದಿಗೆ ಶರೀರದಲ್ಲಿಯೇ ಇದ್ದು ಶ್ವಾಸ ಎನ್ನುವ ಶಬ್ದದಿಂದ ಬುಸಗುಟ್ಟುವ ಆತ್ಮವನ್ನು ತಿಳಿದುಕೊಳ್ಳಬೇಕು. ಕದಲಿಕೆಯಿಲ್ಲದ ಜೀವಾತ್ಮ ಕದಲಿಕೆ ಇರುವ ಆತ್ಮವನ್ನು ಜ್ಞಾನ ಎನ್ನುವ ಮಂತ್ರೋಪದೇಶದ ಮೂಲಕ ತಿಳಿಯಬಹುದು. ಜ್ಞಾನವನ್ನು ತಿಳಿಸುವ ಗುರು ಹತ್ತಿರ ಆತ್ಮವನ್ನು ತಿಳಿಯುವುದಕ್ಕೆ ಕೇಳಿದ ವಿಧಾನವೇ ಮೇಲಿನ ಚರಣದಲ್ಲಿನ ಹಾವನ್ನು ಹಿಡಿಯುವ ವಿಧಾನ ತಿಳಿಯದ ನಮಗೆ 'ಹಾವನ್ನು ಹಿಡಿಯುವ ಕಟ್ಟು ಮಂತ್ರವನ್ನು ತಿಳಿಸೆಂದು ಕೋರಿದೆವು' ಎಂದಿದ್ದಾರೆ.

# 10. ಪದ್ಯ ತತ್ತ್ವ

**ಆದಿದ್ವಯಂಬು ವೃಕ್ಷಂಬು**
**ಮೀದಟ ರೆಂಡಕ್ಷರಮುಲು ಮೇಧಿನಿಚರಿತಾ**
**ಆದಿಯು ಅಂತ್ಯಮು ಕೂಡಿನ**
**ವೇದಾಂತಂ ದೀನಿ ತೆಲಿಯು ವೇದ ವೇದ್ಯುಲ್**

**ವಿವರ :–** ನಮ್ಮ ಶರೀರದಲ್ಲಿ ಪ್ರತಿ ಒಬ್ಬರಿಗು ಶ್ವಾಸ ಆಡುತ್ತಿದೆ. ಶ್ವಾಸವನ್ನನುಸರಿಸಿ ಪ್ರಾಣವಿದೆಯೆಂದು, ಇಲ್ಲವೆಂದು ಹೇಳಬಹುದು. ಆದ್ದರಿಂದ ಶ್ವಾಸವನ್ನು ಪ್ರಾಣ ಎಂದಿದ್ದಾರೆ. ಅಂದರೇ ಗಾಳಿ ಎಂದು ಅರ್ಥ. ನಮ್ಮ ಶರೀರದಲ್ಲಿ ಐದು ವಿಧಗಳ ಗಾಳಿಗಳು ಇವೆ. ಅವು ಕ್ರಮವಾಗಿ ವ್ಯಾನ, ಉದಾನ, ಸಮಾನ, ಪ್ರಾಣ, ಅಪಾಣ ವಾಯುಗಳೆನ್ನುತ್ತೇವೆ. ಅವುಗಳನ್ನೇ ಪಂಚಪ್ರಾಣಗಳೆಂದು ಕೂಡಾ ಕರೆಯುತ್ತಿದ್ದೇವೆ. ಇವುಗಳಲ್ಲಿ ಪ್ರಾಣವಾಯುವು ಶರೀರದಲ್ಲಿ ಶ್ವಾಸಕೋಶಗಳಿಂದ ಮೂಗಿನ ರಂಧ್ರಗಳವರೆಗು ವ್ಯಾಪಿಸಿದೆ. ಪ್ರಾಣವಾಯುವು ಎರಡು ಶ್ವಾಸಕೋಶಗಳಿಂದ ಮೂಗಿನ ರಂಧ್ರಗಳ ಮೂಲಕ ಹೊರಕ್ಕೂ ಒಳಕ್ಕೂ ಚಲಿಸುತ್ತಿದೆ. ಮನುಷ್ಯ ಹುಟ್ಟಿದಾಗ ಹೊರಗಿನಿಂದ ಶ್ವಾಸ ಒಳಗೆ ಪ್ರವೇಶಿಸುತ್ತಿದೆ, ಸಾವಿನಲ್ಲಿ ಒಳಗಿನಿಂದ ಹೊರಗೆ ಹೊರಟುಹೋಗುತ್ತಿದೆ. ಶ್ವಾಸ ಹೊರಗಿನಿಂದ ಹೋದರೂ, ಒಳಗಿನಿಂದ ಹೋರಗೆ ಬಂದರೂ ಎರಡಾಗಿಯೇ ಹೊರಡುತ್ತಿದೆ. ಎರಡು ಶ್ವಾಸಕೋಶಗಳಿಂದ ಹೊರಟ ಶ್ವಾಸ ಎರಡು ಸೀಳಿಕೆಗಳಾಗಿ ಹೊರಗೆ ಬರುತ್ತಿದೆ. ಆದ್ದರಿಂದ ಶ್ವಾಸವನ್ನು ವೃಕ್ಷವಾಗಿ ಹೋಲಿಸಿ, ಮೆದುಳಿನಲ್ಲಿ ಎರಡು ಕೊಂಬೆಗಳು ಹುಟ್ಟಿದ ವೃಕ್ಷವೆಂದು ಹೇಳಿದ್ದಾರೆ. ಅದನ್ನೇ 'ಆದಿ ದ್ವಯಂಬು ವೃಕ್ಷ' ಎಂದಿದ್ದಾರೆ. ಶ್ವಾಸ ಒಳಕ್ಕೂ ಹೊರಕ್ಕೂ ಚಲಿಸುವುದರಲ್ಲಿ ಎರಡು ಶಬ್ದಗಳು ಹುಟ್ಟುತ್ತಿವೆ. ಅವು ಸೋ, ಹಂ ಎನ್ನುವ ಶಬ್ದಗಳು, ಶ್ವಾಸದಿಂದ ಉಂಟಾಗುವ ಶಬ್ದಗಳು ಆದ್ದರಿಂದ ಮೇಲೆ ಎರಡಕ್ಷರಗಳೆಂದು ಹೇಳಿದ್ದಾರೆ. ಒಳಗೆ ಹೋಗುವಾಗ ಒಂದು ಶಬ್ದ, ಹೊರಗೆ ಬರುವಾಗೊಂದು ಶಬ್ದ ಹುಟ್ಟುತ್ತಾ ಪ್ರತ್ಯೇಕತೆ ಹೊಂದಿವೆ. ಒಳಗೆ ಹೋಗುವ "ಸೋ" ಶಬ್ದವನ್ನು, ಹೊರಗೆ

ಬರುವ **"ಹಂ"** ಶಬ್ದಗಳನ್ನು ಎರಡನ್ನು ಜೋಡಿಸಿ ನೋಡಿದರೆ **"ಓಂ"** ಎನ್ನುವ ಶಬ್ದ ಹುಟ್ಟುತ್ತಿದೆ. ಮೊದಲನೆಯದಾದ ಸೋ ಶಬ್ದದಲ್ಲಿ 'ಓ' ಶಬ್ದ ಕೊನೆಯದಾಗಿ ಕೇಳಿಸುತ್ತಿದೆ. ಹಾಗೇ ಎರಡನೆಯದಾದ ಹಂ ಶಬ್ದದಲ್ಲಿ 'ಮ್' ಶಬ್ದ ಕೇಳಿಸುತ್ತಿದೆ. ಎರಡನ್ನು ಸೇರಿಸಿದರೆ 'ಓಂ' ಎನ್ನುವ ಶಬ್ದ ತಯಾರಾಗುತ್ತಿದೆ. ಆದ್ದರಿಂದ 'ಆದಿಯು ಅಂತ್ಯವು ಕೂಡಿದ' ಎಂದು ಮೂರನೆ ಚರಣದಲ್ಲಿ ಹೇಳಿದ್ದಾರೆ. ಪ್ರತಿ ಜೀವರಾಶಿ ಶರೀರದಲ್ಲಿಯೂ, ಶ್ವಾಸದಲ್ಲಿ 'ಓಮ್' ಎನ್ನುವ ಶಬ್ದ ಒಳಗೊಂಡಿದೆ. ಆಧ್ಯಾತ್ಮಿಕದಲ್ಲಿ ಅತ್ಯಂತ ಪ್ರಾಮುಖ್ಯವಾದುದು ಆದ್ದರಿಂದ ವೇದ ವೇದ್ಯಗಳಿಗೆ ವೇದಾಂತವೆಂದು ಹೇಳಿದ್ದಾರೆ.

## 11. ತತ್ತ್ವ

**ಶ್ರೀ ಗುರು ರಾಯುಡು ಮಾಯಮರ್ಮಮು ತೆಲಿಸಿನಾಡೇ**
**ಮಾಯೆಯಲ್ಲಿ ಇರುತ್ತಾ ಇಲ್ಲದವನು ಕಮ್ಮನ್ನಾಡೇ**

**1) ಆರುನು ಧ್ರುಂಜಿ ಅರುನು ನರಕಮನ್ನಾಡೇ ॥ಶ್ರೀ ಗುರು॥**
**ಆರುನು ಆರುನು ಚೇರಕ ಉಂಡಮನ್ನಾಡೇ**

**2) ತೊಮ್ಮಿದಿ ವಾಕಿಳ್ಳ ಕೊಂಪಕು ಎಂದುಂಡಿ ವಸ್ತಿವನ್ನಾಡೇ ॥ಶ್ರೀ ಗುರು॥**
**ಎಂದು ತಿರಿಗಿನಾ ಮುಂದುಚೋಟುಕೇ ಪೊಮ್ಮನ್ನಾಡೇ**

**3) ಆರು ಶಿಖರಗಳಮೇಲೆ ಸಾವಿರಕಣ್ಣುಗಳ ಮಂಟಪಮನ್ನಾಡೇ ॥ಶ್ರೀ ಗುರು॥**
**ಆರು ಶಿಖರಗಳ ಎಕ್ಕಿ ಎಗಚೂಡಮನ್ನಾಡೇ**

**4) ಮೂರು ನದುಲು ಕಲಿಯುಚೋಟು ತೆಲಿಯಮನ್ನಾಡೇ ॥ಶ್ರೀ ಗುರು॥**
**ಮೂಟಿಲೋಯುಂಡೇ ಮೂಲ ಪುರುಷನ ಚೂಡಮನ್ನಾಡೇ**

**ವಿವರ :–** ವಿಶ್ವವೆಲ್ಲ ವ್ಯಾಪಿಸಿರುವವು ಎರಡೇ ಎರಡು ಅವುಗಳೇ ಪ್ರಕೃತಿ,

ಪುರುಷನು ಎಂದು ಕರೆಯುತ್ತೇವೆ. ಪ್ರಕೃತಿಗೆ ಇನ್ನೊಂದು ಹೆಸರು 'ಮಾಯೆ' ಎಂದು ಕೂಡಾ ಇದೆ. ಹಾಗೇ ಪುರುಷನನ್ನು 'ದೇವರು' ಎಂದು ಕೂಡಾ ಅನ್ನುತ್ತಿದ್ದೇವೆ. ದೇವರು ಹುಟ್ಟಿಸಿರುವುದೇ ಮಾಯ. ದೇವರ ಆಜ್ಞೆ ಪ್ರಕಾರ ನಡೆದುಕೊಳ್ಳುವುದೇ ಮಾಯೆ. ತನಗೆ ವಿರುದ್ಧವಾಗಿ ವ್ಯವಹರಿಸೆಂದು ದೇವರು ಮಾಯೆಯನ್ನು ಆಜ್ಞಾಪಿಸಿದ್ದಾನೆ. ಆದ್ದರಿಂದ ಮಾಯೆ ಎಂದಿಗೂ ದೈವಮಾರ್ಗಕ್ಕೆ ವಿರುದ್ಧ. ಒಂದು ವಿಧಾನದಲ್ಲಿ ಮಾಯೆಯನ್ನು ಹೆಂಡತಿ ಎಂದು, ದೇವರನ್ನು ಗಂಡ ಎಂದು ಹೇಳಬಹುದು. ಗಂಡನಾದ ದೇವರಿಗೆ ತನ್ನ ಹೆಂಡತಿಯಾದ ಮಾಯೆ ಒಂದರ ವಿವರವೆಲ್ಲವೂ ತಿಳಿಯುತ್ತದೆ. ಆದ್ದರಿಂದ ಮಾಯೆ ವಿವರ ತಿಳಿಸಬೇಕೆಂದರೇ ಅದು ದೇವರಿಗೊಬ್ಬನಿಗೇ ಸಾಧ್ಯ. ದೇವರು ತನ್ನ ಶಕ್ತಿಯಲ್ಲಿ ಸ್ವಲ್ಪ ಭಾಗವನ್ನು ಭೂಮಿ ಮೇಲೆ ಮನುಷ್ಯನನ್ನಾಗಿ ತನ್ನ ಪ್ರತಿನಿಧಿಯನ್ನಾಗಿ ಹುಟ್ಟಿಸುತ್ತಾನೆ. ಆತನನ್ನೇ 'ಗುರು' ಅನ್ನುತ್ತಿದ್ದೇವೆ. ಭೂಮಿಮೇಲೆ ದೇವರ ಅವತಾರ ಹೊರತು ಯಾರೂ ಗುರುವಾಗುವುದಕ್ಕೆ ಅರ್ಹರಲ್ಲ. ದೇವರ ಅಂಶವಾದ ಗುರುವು ತನ್ನನ್ನು ವಿಶ್ವಾಸಿಸಿದವರಿಗೆ ಮಾಯೆಯೊಂದರ ಮರ್ಮವನ್ನು ತಿಳಿಸುವನು. ಹಾಗೆ ಮಾಯೆಯೊಂದರ ಮರ್ಮ ತಿಳಿದವರು 'ತಾವರೆ ಎಲೆ ನೀರಿನಲ್ಲಿ ಇದ್ದರೂ ತೇವ ಅಂಟದಂತೆ' ಮಾಯೆಯಲ್ಲಿ ಇದ್ದರೂ ಕರ್ಮ ಅಂಟದವ ರಾಗಿರುತ್ತಾರೆ. ಆದ್ದರಿಂದ ಈ ತತ್ತ್ವದಲ್ಲಿ ಮೊದಲೇ 'ಶ್ರೀಗುರು ರಾಯನು ಮಾಯಮರ್ಮ ತಿಳಿದಿದ್ದಾನೆ ಮಾಯೆಯಲ್ಲಿ ಇರುತ್ತಾ ಇಲ್ಲದವನು ಆಗಬೇಕು' ಎಂದಿದ್ದಾರೆ.

**1. ಆರುನು ಧ್ರುಂಜಿ ಅರುನು ನರಕಮನ್ನಾಡೇ ॥ಶ್ರೀ ಗುರು॥**
**ಆರುನು ಆರುನು ಚೇರಕ ಉಂಡಮನ್ನಾಡೇ**

ನಮ್ಮ ಶರೀರದಲ್ಲಿ ದೇವರು ನಿವಾಸಿಸುತ್ತಿದ್ದಾನೆ ಆದ್ದರಿಂದ ಶರೀರವನ್ನು ದೇವಾಲಯ ಎಂದಿದ್ದೇವೆ. ದೇವಾಲಯದಲ್ಲಿ ಗರ್ಭಗುಡಿಯಲ್ಲಿ ಭಗವಂತನ ಪ್ರತಿಮೆ ಇದ್ದರೂ, ಅದರ ಸುತ್ತಾ ವಿಕೃತಾಕಾರದಲ್ಲಿರುವ ಸಿಂಹತಲಾಟ ಅಥವಾ ಪ್ರಭಾವಳಿ ಎನ್ನುವುದು ತಪ್ಪದೆ ಇರುತ್ತದೆ. ಅದೇ ವಿಧವಾಗಿಯೇ ಶರೀರದಲ್ಲಿ

ದೇವರಿದ್ದರೂ ಮಾಯೆ ಕೂಡಾ ಇದೆ. ದೇವರು ಆತ್ಮ ರೂಪದಲ್ಲಿ ಇರುತ್ತಾ ಶರೀರವನ್ನು ನಡೆಸುವ ಶಕ್ತಿಯಾಗಿ, ಶರೀರವೆಲ್ಲಾ ವ್ಯಾಪಿಸಿರುವಾಗ, ಮಾಯೆ ಗುಣಗಳ ರೂಪದಿಂದ ತಲೆಯಲ್ಲಿದೆ. ಮನುಷ್ಯ ತಲೆಯಲ್ಲಿರುವ ಗುಣಗಳನ್ನು ಮಾಯಜನಿತಗಳೆಂದು ಅಥವಾ ಮಾಯಯುಕ್ತಗಳೆಂದು ಹೇಳಬಹುದು. ಆದ್ದರಿಂದ ಭಗವದ್ಗೀತೆಯಲ್ಲಿ ಭಗವಂತನಾದ ಶ್ರೀಕೃಷ್ಣನು **"ಗುಣಮಯಿ ಮಮ ಮಾಯಾ"** ಎಂದಿದ್ದಾನೆ. ಇದರ ಪ್ರಕಾರ ಮಾಯೆ ಪ್ರತಿ ಶರೀರದಲ್ಲಿಯೂ ಗುಣಗಳ ರೂಪದಲ್ಲಿ ಇದೆಯೆಂದು ತಿಳಿಯುತ್ತಿದೆ. ಗುಣಗಳು ಇಲ್ಲದವನು ಯಾರೂ ಇಲ್ಲ, ಆದ್ದರಿಂದ ಮಾಯೆಯಲ್ಲಿ ಇಲ್ಲದವನು ಯಾರೂ ಇಲ್ಲವೆಂದೇ ಹೇಳಬಹುದು. ಮನುಷ್ಯನ ತಲೆಯಲ್ಲಿನ ಮಾಯೆಯೊಂದರ ಸ್ಥಾನ ಎಲ್ಲಿದೆಯೆಂದು ಪರಿಶೀಲಿಸಿ ನೋಡಿದರೆ, ತಲೆಯಲ್ಲಿ ಸೂಕ್ಷ್ಮರೂಪವಾಗಿರುವ ನಾಲ್ಕು ಚಕ್ರಗಳಲ್ಲಿ ಕೆಳಗಿನ ಚಕ್ರವಾದ ಗುಣಚಕ್ರದಲ್ಲಿ ಸಾತ್ತ್ವಿಕ, ರಾಜಸ, ತಾಮಸವೆನ್ನುವ ಮೂರು ಭಾಗಗಳು ಇವೆ. ಆ ಭಾಗಗಳಲ್ಲಿ ಒಂದೊಂದು ಭಾಗದಲ್ಲಿ ಆರು ಒಂದು ವಿಧ, ಆರು ಮತ್ತೊಂದು ವಿಧ ಒಟ್ಟಾರೆ ಹನ್ನೆರಡು ಗುಣಗಳು ಇವೆ. ಈ ಎರಡು ವಿಧಗಳಾದ ಗುಣಗಳನ್ನು ಜಯಿಸಿದರೆ ಮಾಯೆಯನ್ನು ಜಯಿಸಿದಂತಾ ಗುತ್ತದೆ. ಆದ್ದರಿಂದ ಮೇಲಿನ ಚರಣದಲ್ಲಿ 'ಆರನ್ನು ಕಿತ್ತು ಆರನ್ನು ಕದಿ ಎಂದಿದ್ದಾನೆ' ಎಂದು ವರ್ಣಿಸಿ ಹೇಳಿದ್ದಾರೆ.

ಮಾಯೆ ಗುಣಮಯವಾಗಿ ಇದ್ದರೂ ಆರು ಒಂದು ವಿಧ, ಆರು ಮತ್ತೊಂದು ವಿಧವಾದ ಗುಣಗಳಾಗಿ ಇದೆಯೆಂದು ಹೇಳಿಕೊಂಡಿದ್ದೇವೆ. ಆರು ಮತ್ತು ಆರು ವಿವರವನ್ನು ಪರಿಶೀಲಿಸಿ ನೋಡಿದರೆ ಆರು ಕೆಟ್ಟ ಗುಣಗಳು, ಆರು ಒಳ್ಳೆಯ ಗುಣಗಳಾಗಿ ಇವೆ. ಆರು ಕೆಟ್ಟ ಗುಣಗಳು ಕ್ರಮವಾಗಿ 1) ಕಾಮ (ಆಸೆ) 2) ಕ್ರೋಧ (ಕೋಪ) 3) ಲೋಭ (ಜಿಪುಣತನ) 4) ಮೋಹ (ನನ್ನದು, ನನ್ನವರು) 5) ಮದ (ಗರ್ವ) 6) ಮತ್ಸರ (ಅಸೂಯೆ). ಈ ಆರು ಗುಣಗಳನ್ನೇ ಮನುಷ್ಯನಿಗೆ ಶತ್ರುಗಳಂತಹವೆಂದು 'ಅರಿಷಟ್ ವರ್ಗ' ಎಂದಿದ್ದಾರೆ. ಹಾಗೇ ಮನುಷ್ಯನಿಗೆ ಮಿತ್ರನಂತಹ ಒಳ್ಳೆಯ ಗುಣಗಳು ಕೂಡಾ

ಆರು ಇವೆ. ಅವು ಕ್ರಮವಾಗಿ 1) ದಾನ 2) ದಯ 3) ಔದಾರ್ಯ 4) ವೈರಾಗ್ಯ 5) ವಿನಯ 6) ಪ್ರೇಮ ಎನ್ನುವವು. ಈ ಗುಣಗಳನ್ನನುಸರಿಸಿ ಮನುಷ್ಯ ಸಮಾಜದಲ್ಲಿ ಒಳ್ಳೆಯವನೆಂದು ಇಲ್ಲವೇ ಕೆಟ್ಟವನೆಂದು ಲೆಕ್ಕಿಸಲ್ಪಡುತ್ತಿದ್ದಾನೆ. ಈ ಗುಣಗಳಿಂದಲೇ ಪಾಪ ಪುಣ್ಯಗಳೆನ್ನುವ ಕರ್ಮಗಳು ಉಂಟಾಗುತ್ತಿವೆ. ಮಾಯೆಯೊಂದರ ಎರಡು ವಿಧಗಳ ಗುಣಗಳು ಜೀವಿಗೆ ಕರ್ಮಗಳನ್ನು ಅಂಟಿಸಿ ಜನ್ಮವನ್ನು ಉಂಟುಮಾಡುವವು. ಆದ್ದರಿಂದ ಕರ್ಮಗಳನ್ನು ಬಂಧನಗಳು ಎಂದಿದ್ದಾರೆ. ಮಾಯೆಗೆ ವಿರೋಧಿ ದೈವ. ಮಾಯೆಯೊಂದರ ಗುಣಗಳಿಗೆ ವಿರೋಧಿ ದೈವವೊಂದರ ಜ್ಞಾನ. ಗುಣಗಳಿಂದ ತಯಾರಾಗುವ ಕರ್ಮಗಳಿಗೆ ವಿರೋಧ ಜ್ಞಾನದಿಂದ ತಯಾರಾದ ಜ್ಞಾನಾಗ್ನಿ. ಆದ್ದರಿಂದ ಮನುಷ್ಯ ದೈವಜ್ಞಾನವನ್ನು ತಿಳಿದು ಜ್ಞಾನಾಗ್ನಿಯನ್ನು ಸಂಪಾದಿಸಿಕೊಂಡರೆ ಮಾಯೆ ಗುಣಗಳ ಪ್ರಭಾವವಾದ ಕರ್ಮ ಸುಟ್ಟುಹೋಗುತ್ತದೆಂದು ತಿಳಿಸುತ್ತಾ ಆರನ್ನು, ಆರನ್ನು ಸೇರದೆ ಇರೆಂದಿದ್ದಾನೆಂದು ಬರೆದಿದ್ದಾರೆ.

### 2. ತೊಮ್ಮಿದಿ ವಾಕಿಳ್ಳ ಕೊಂಪಕು ಎಂದುಂಡಿ ವಸ್ತಿವನ್ನಾಡೇ ॥ಶ್ರೀ ಗುರು॥ ಎಂದು ತಿರಿಗಿನಾ ಮುಂದುಚೋಟುಕೇ ಪೊಮ್ಮನ್ನಾಡೇ

ನಾವು ನಿವಾಸಿಸುವುದನ್ನು ಮನೆ ಅಥವಾ ಗೃಹ ಎನ್ನುತ್ತೇವೆ. ಮನುಷ್ಯ ತನ್ನ ಆರ್ಥಿಕ ಸಾಮರ್ಥ್ಯವನ್ನು ಅನುಸರಿಸಿ ಪೂರಿಗುಡಿಸಲಿಂದ ದೊಡ್ಡ ಮಹಡಿಗಳವರೆಗು ನಿವಾಸಿಸುತ್ತಿದ್ದಾನೆ. ಮನುಷ್ಯ ಎಂತಹ ಮನೆಯಲ್ಲಿ ನಿವಾಸಿಸಿದರೂ ಆ ಮನೆಗೆ ಒಂದು ದ್ವಾರ (ಬಾಗಿಲು) ದಿಂದ ಅನೇಕ ದ್ವಾರಗಳವರೆಗು ಇರಬಹುದು. ಚಿಕ್ಕ ಗುಡಿಸಲಿಗಾದರೆ ಒಂದು ಬಾಗಿಲು ಇರುತ್ತದೆ. ದೊಡ್ಡ ಮಹಡಿಗಾದರೆ ಇಪ್ಪತ್ತು ಇಲ್ಲವೇ ಮೂವತ್ತರವರೆಗು ಎಷ್ಟಾದರೂ ಇರಬಹುದು. ಗೃಹಗಳೆಲ್ಲವೂ ಅವನವನ ಕರ್ಮಾನುಸಾರ ಇರುತ್ತವೆಂದು ಹೇಳಬಹುದು. ಆಧ್ಯಾತ್ಮಿಕ ವಿದ್ಯೆಯಲ್ಲಿ ಆತ್ಮಗಳ ವಿವರವೇ ಹೇಳಲ್ಪಡುತ್ತಿದೆ, ಆದ್ದರಿಂದ ಇಲ್ಲಿ ಜೀವಾತ್ಮ ವಿವರವನ್ನೇ ನಾವು ಪ್ರಸ್ತಾಪಿಸಿಕೊಳ್ಳಬೇಕು.

ಮನುಷ್ಯನಿಗೆ ಗೃಹ ಹೇಗೆ ಇದೆಯೋ ಜೀವಾತ್ಮಗು ಕೂಡಾ ಗೃಹವಿದೆ. ಅದೇ ಶರೀರ ಗೃಹ. ಮನುಷ್ಯರು ನಿರ್ಮಿಸಿಕೊಂಡಿರುವವು ಹೊರಗೆ ಮಾಳಿಗೆಗಳು ಮಹಡಿಗಳಾದರೆ, ದೇವರು ನಿರ್ಮಿಸಿಕೊಟ್ಟಿರುವ ಗೃಹ ಶರೀರ. ಹೊರಗಿನ ಮನೆಗೆ ಬಾಗಿಲುಗಳು ಎಷ್ಟಾದರೂ ನಾವು ಇಟ್ಟುಕೊಳ್ಳಬಹುದು ಆದರೆ, ದೇವರು ಕೊಟ್ಟಿರುವ ಶರೀರ ಗೃಹಕ್ಕೆ ಕೇವಲ ಒಂಭತ್ತು ಬಾಗಿಲುಗಳು ಮಾತ್ರ ತಪ್ಪದೆ ಇರುತ್ತವೆ. ಜೀವಾತ್ಮ ಶರೀರವೆನ್ನುವ ಗೃಹದಲ್ಲಿ ಸ್ವಲ್ಪಕಾಲ ನಿವಾಸಮಾಡಿ ಆ ಶರೀರ ಗೃಹವನ್ನು ಬಿಟ್ಟುಹೋಗುವುದು ಕೂಡಾ ನಡೆಯುತ್ತಿದೆ. ನಾವು ನಿರ್ಮಿಸಿಕೊಂಡ ಹೊರಗಿನ ಗೃಹ ಸ್ವಲ್ಪಕಾಲಕ್ಕೆ ಶಿಥಿಲವಾಗಿ ನಿವಾಸ ಯೋಗ್ಯ ವಾಗದಂತೆ ಶರೀರಗೃಹ ಕೂಡಾ ಶಿಥಿಲವಾಗಿ ಹೋಗುತ್ತಿದೆ. ಜೀವಾತ್ಮ ಶಿಥಿಲವಾದ ಶರೀರವನ್ನು ಬಿಟ್ಟು ಮತ್ತೊಂದು ಹೊಸ ಶರೀರ ಗೃಹದಲ್ಲಿ ಸೇರುತ್ತಿದ್ದಾನೆ. ಮೊಟ್ಟಮೊದಲು ಜೀವಾತ್ಮ ಪರಮಾತ್ಮದಿಂದ ಬಂದಿರುವುದೇ. ಹಾಗೆ ಬಂದಿರುವ ಜೀವಾತ್ಮ ನಿವಾಸಿಸುವುದಕ್ಕೆ ಶರೀರ ತಪ್ಪದೆ ಆಗಿದೆ. ಮೊದಲು ಪರಮಾತ್ಮನಿಂದ ಬಂದಿರುವ ಜೀವಾತ್ಮ ನಂತರ ಶರೀರ ಗೃಹಗಳನ್ನು ಬದಲಾಯಿಸುತ್ತಾ ಭೂಮಿ ಮೇಲೆಯೇ ಇದ್ದು ಹೋಗಿದೆ. ಈ ತತ್ತ್ವದಲ್ಲಿ ಜೀವಾತ್ಮಗೆ ಬೇಕಾದ ಜ್ಞಾನವನ್ನು ಹೇಳುತ್ತಾ 'ಒಂಭತ್ತು ಬಾಗಿಲ ಕೊಂಪೆಗೆ ಎಲ್ಲಿಂದ ಬಂದೆಯೆಂದು' ಪ್ರಶ್ನಿಸಿದ್ದಾರೆ. ನಂತರ ಎಷ್ಟು ಶರೀರಗಳು ಬದಲಾದರೂ ಮೊದಲ ಪರಮಾತ್ಮನೊಳಗೇ ಹೋಗೆಂದು ಹೇಳುತ್ತಾ 'ಎಷ್ಟು ತಿರುಗಿದರೂ ಮೊದಲನೆ ಜಾಗಕ್ಕೆ ಹೋಗೆಂದಿದ್ದಾನೆ.' ಗುರು ಶಿಷ್ಯನಿಗೆ ಬೋಧಿಸಬೇಕಾಗಿರುವುದು ಆತ್ಮಜ್ಞಾನ ವಾದ್ದರಿಂದ ಜೀವಾತ್ಮಕ್ಕೆ ತನ್ನ ಮೊದಲ ಸ್ಥಾನವನ್ನು ಜ್ಞಾಪಕ ಮಾಡಿ ಪುನಃ ಅಲ್ಲಿಗೇ ಹೋಗೆನ್ನುವ ಹಿತವನ್ನು ಈ ಚರಣದಲ್ಲಿ ಹೇಳಿದ್ದಾರೆ.

**3. ಆರು ಶಿಖರಗಳಮೇಲೆ ಸಾವಿರಕಣ್ಣುಗಳ ಮಂಟಪಮನ್ನಾಡೇ**
**ಆರು ಶಿಖರಗಳ ಎಕ್ಕಿ ಎಗಚೂಡಮನ್ನಾಡೇ ॥ಶ್ರೀ ಗುರು॥**

ಶಿಖರ ಎಂದರೇ ಬೆಟ್ಟದ ಅಗ್ರ ಭಾಗವೆಂದು ಅರ್ಥ. ಆರು ಬೆಟ್ಟಗಳನ್ನು ಪೂರ್ತಿ ಹತ್ತಿದ ನಂತರ ಮೇಲೆ ಏಳನೆ ಬೆಟ್ಟದ ಮೇಲೆ ಸಾವಿರಕಾಲುಗಳ

ಮಂಟಪವಿದೆಯಂತೆ. ಸಾವಿರ ಸ್ಥಂಭಗಳ ಮಂಟಪದಲ್ಲಿ ದೇವರು ಹೊರತು ಯಾರಿರುತ್ತಾರೆ. ಆದ್ದರಿಂದ ದೇವರನ್ನು ನೋಡಬೇಕೆಂದರೆ ಆರು ಶಿಖರಗಳನ್ನು ಹತ್ತಿ ಮೇಲಿರುವ ದೇವರನ್ನು ನೋಡಿರೆಂದಿದ್ದಾರೆ. ಇದೇ ವಿಷಯವನ್ನು ತಿಳಿಸುವುದಕ್ಕೆ 'ಏಳುಬೆಟ್ಟಗಳ ಮೇಲೆ ವೆಂಕಟೇಶ್ವರನಿದ್ದಾನೆಂದು' ಹೇಳುತ್ತಿರುತ್ತಾರೆ. ಬೆಟ್ಟಗಳ ಮೇಲೆ ದೇವರಿದ್ದರೆ ಏಳುಬೆಟ್ಟಗಳೇನು ನೇರವಾಗಿ ಎಂಭತ್ತು ಬೆಟ್ಟಗಳಾದರೂ ಹತ್ತಿ ನೋಡಬಹುದು. ಏಳು ಬೆಟ್ಟಗಳು ಹತ್ತಿದರೂ, ಎಂಭತ್ತು ಬೆಟ್ಟಗಳು ಹತ್ತಿದರೂ ಅಲ್ಲಿ ಕಾಣಿಸುವುದು ಶಿಲಾ ಪ್ರತಿಮೆ ಹೊರತು ಏನು ಇರುವುದಿಲ್ಲ. ಅದು ಪ್ರತಿರೂಪವಾದ ಪ್ರತಿಮೆ ಹೊರತು ದೇವರಲ್ಲ.

ದೇವರು ಆತ್ಮರೂಪದಲ್ಲಿ ಇರುತ್ತಾನೆ ಆದರೆ ಪ್ರಕೃತಿ ರೂಪವಾದ ಕಲ್ಲುಗಳು, ನೀರಿನ ರೂಪದಲ್ಲಿ ಇರುವುದಿಲ್ಲವೆಂದು ಹಿರಿಯರೆನ್ನುತ್ತಿರುತ್ತಾರೆ. ಆದ್ದರಿಂದ 'ಚಿಲ್ಲರೆ ಕಲ್ಲುಗಳಿಗೆ ಮುಗಿಯುತ್ತಿದ್ದರೆ ಚಿತ್ತವು ಕೆಡುತ್ತದಯ್ಯ' ಎಂದಿದ್ದಾರೆ. ಹಾಗಾದರೆ ಈ ತತ್ತ್ವದಲ್ಲಿ ಏಳು ಶಿಖರಗಳು ಹತ್ತಿ ನೋಡಿರೆಂದು ಏಕೆ ಹೇಳಿದ್ದಾರೆಂದು ಕೆಲವರಿಗೆ ಪ್ರಶ್ನೆ ಬರಬಹುದು. ಅದಕ್ಕೆ ಸಮಾಧಾನ ಏನೆಂದರೇ! ನಮ್ಮ ಶರೀರವೇ ದೇವಾಲಯ ಅದರಲ್ಲಿನ ಆತ್ಮವೇ ದೇವರೆಂದು ಕೆಲವರು ಹಿರಿಯರು ಹೇಳಿದ್ದಾರೆ ಅಲ್ಲವೇ! ಅದರ ಪ್ರಕಾರ ಶರೀರದಲ್ಲಿನ ಆಲಯ ಜೋಡಣೆಯನ್ನು ಕುರಿತು ಹೇಳಿರುವುದೇ ಈ ತತ್ತ್ವ ಚರಣ. ನಮ್ಮ ಶರೀರದಲ್ಲಿ ಮೂರು ಲಕ್ಷಗಳ ಐವತ್ತುಸಾವಿರ ನಾಡಿಗಳು ಇವೆಯೆಂದು ಪ್ರತೀತಿ. ಅದರಲ್ಲಿ ಎಲ್ಲದಕ್ಕಿಂತ ದೊಡ್ಡವು ಮೂರೆಂದು, ಅವುಗಳೇ ಇಡ, ಪಿಂಗಳ, ಸುಷುಮ್ನನಾಡಿಗಳೆಂದು ಅವುಗಳನ್ನೇ ಸೂರ್ಯ, ಚಂದ್ರ, ಬ್ರಹ್ಮನಾಡಿಗಳೆಂದು ಕರೆಯುತ್ತಿದ್ದೇವೆ. ಅವುಗಳಲ್ಲಿ ಮುಖ್ಯವಾದುದು ಸುಷುಮ್ನ ಎನ್ನುವ ಬ್ರಹ್ಮನಾಡಿ. ಈ ಬ್ರಹ್ಮನಾಡಿ ಶರೀರದಲ್ಲಿನ ಬೆನ್ನುಮೂಳೆಯ ಮಧ್ಯಭಾಗದಲ್ಲಿ ಗುದಸ್ಥಾನದಿಂದ ಕಪಾಳ ಸ್ಥಾನದವರೆಗು ವ್ಯಾಪಿಸಿದೆ. ಹಾಗೆ ವ್ಯಾಪಿಸಿರುವ ಬ್ರಹ್ಮನಾಡಿ ಏಳು ನಾಡಿಕೇಂದ್ರಗಳಾಗಿ ವಿಭಜಿಸಲ್ಪಟ್ಟಿದೆ. ಆರು ಕೇಂದ್ರಗಳ ಮೇಲಿರುವ ಏಳನೆ ನಾಡಿಕೇಂದ್ರ ಆತ್ಮಗೆ ಸ್ಥಾನವಾಗಿದೆ. ಬ್ರಹ್ಮನಾಡಿಯಲ್ಲಿ ಏಳನೆ ನಾಡಿಕೇಂದ್ರವಾದ

ಮೆದುಳಿನಲ್ಲಿ ಆತ್ಮ ನಿವಾಸ ಇರುವುದರಿಂದ ಆತ್ಮವನ್ನು ದೈವವಾಗಿ ಲೆಕ್ಕಿಸುವುದರಿಂದ ಆರು ನಾಡಿ ಕೇಂದ್ರಗಳನ್ನು ಆರು ಶಿಖರಗಳಾಗಿ ಹೋಲಿಸಿ ಏಳನೆಯದರ ಮೇಲಕ್ಕೆ ನೋಡಿರೆಂದಿದ್ದಾನೆ ಶರೀರದಲ್ಲಿನ ಆತ್ಮವನ್ನು ತಿಳಿಯುವುದಕ್ಕೆ ಮಾಡಿದ ಪ್ರಯತ್ನವೇ ಈ ತತ್ತ್ವವೊಂದರ ಉದ್ದೇಶ. ಆದ್ದರಿಂದ ಶರೀರದಲ್ಲಿನ ನಾಡಿಕೇಂದ್ರಗಳನ್ನು ಬೆಟ್ಟಗಳಿಗೆ ಹೋಲಿಸಿ ಏಳನೆಬೆಟ್ಟದ ಮೇಲೆ ದೇವರಿದ್ದಾನೆಂದು 'ಏಳನೆ ನಾಡಿ ಕೇಂದ್ರಕ್ಕೆ ದೃಷ್ಠಿ ಹರಿಯುವಂತೆ' ಮಾಡಿದ್ದಾರೆ.

**4. మూరు నదులు కలియుచోటు తెలియమన్నాడే ॥శ్రీ గురు॥**
**మూటిలోయుండే మూల పురుషుని చూడమన్నాడే**

ಇದಕ್ಕು ಮುನ್ನ ಶರೀರದಲ್ಲಿನ ಮೂರುನಾಡಿಗಳನ್ನು ಕುರಿತು ಹೇಳಿ ಕೊಂಡಿದ್ದೇವೆ. ಈ ಮೂರುನಾಡಿಗಳು ಬಿಡಿಬಿಡಿಯಾಗಿ ಇದ್ದು ಕೆಳಗಿನವರೆಗು ವ್ಯಾಪಿಸಿ ಇದ್ದರೂ ಆ ಮೂರು ಸೇರುವ ಸ್ಥಳ ಒಂದಿದೆ. ಅದೇ ಮೆದುಳು ಸ್ಥಾನ. ಅದನ್ನು ಏಳನೆ ದೊಡ್ಡನಾಡಿ ಕೇಂದ್ರವೆಂದು ಕೂಡಾ ಹೇಳಿಕೊಂಡಿದ್ದೇವೆ. ಈ ಕೇಂದ್ರದಲ್ಲಿ ಮೂರುನಾಡಿಗಳು ಸೇರುತ್ತಿವೆ. ಈ ಏಳನೆ ಕೇಂದ್ರದಲ್ಲಿಯೇ ಆತ್ಮ ನಿವಾಸವೆಂದು ಹೇಳಿಕೊಂಡಿದ್ದೇವೆ. ಆತ್ಮವೇ ಶರೀರವೆಲ್ಲದಕ್ಕು, ಎಲ್ಲಾ ನಾಡಿ ಕೇಂದ್ರಗಳಿಗು ಮೂಲಾಧಾರವಾಗಿದೆ. ಈ ವಿಷಯವನ್ನು ವಿವರಿಸುವುದಕ್ಕೆ ಮೂರುನಾಡಿಗಳನ್ನು ಮೂರುನದಿಗಳಾಗಿ ಹೋಲಿಸಿ ಮೂರು ನದಿಗಳು ಸೇರುವ ಸ್ಥಳವನ್ನು ತಿಳಿಯಿರೆಂದಿದ್ದಾರೆ. ನಮ್ಮಲ್ಲಿನ ಮನಸ್ಸನ್ನು ಬಾಹ್ಯಚಿಂತೆಗಳಲ್ಲಿ ಲಗ್ನಮಾಡದೆ ನಮ್ಮ ತಲೆಯಲ್ಲಿ ತ್ರಿಕೂಟ ಸ್ಥಾನದಲ್ಲಿ ಲಕ್ಷ್ಯವಿಟ್ಟರೆ ಅಲ್ಲಿರುವ ಆತ್ಮ ತಿಳಿಯುತ್ತದೆಂದು ಹಿರಿಯರ ಉದ್ದೇಶ. ಆದ್ದರಿಂದ 'ಮೂರರಲ್ಲಿರುವ ಮೂಲ ಪುರುಷನನ್ನು ತಿಳಿಯಿರೆಂದಿದ್ದಾರೆ.' ಶರೀರದಲ್ಲಿ ಮೂರುನಾಡಿಗಳು ಸೇರುವ ತ್ರಿಕೂಟ ಸ್ಥಾನದಲ್ಲಿ ಮನಸ್ಸು ನಿಲ್ಲಿಸದವನು, ಬಾಹ್ಯವಾಗಿ ಆತ್ಮವನ್ನು ಹುಡುಕುವವನು ಎಂದಿಗೂ ಬ್ರಹ್ಮಜ್ಞಾನಿ ಆಗಲಾರನೆಂದು ನಾಲ್ಕನೆ ಚರಣದಲ್ಲಿನ ಭಾವನೆ.

# 12. ತತ್ತ್ವ

**ಗುಟ್ಟು ತೆಲಿಸಿ ಮಸುಲುಕೊನರೇ ಸುಜ್ಞಾನುಲಾರ ಬಟ್ಟಬಯಲು ದೀನಿ ಭಾವಮೆಲ್ಲನು ಗುಟ್ಟು ತೆಲಿಸಿ ನಡುಚುಕೊನರೇ**

**1)** ಗಂಡುಪಿಲ್ಲಿ ಲೋಕಮೆಲ್ಲ ಪಾರಜೂಚಿ ಏಲಗಾನು.
ಕೊಂಡ ಎಲುಕ ಲೊಕ್ಕ ರೆಂಡು ಕೊಲುವು ಜೇಸೇರಾ ||ಗುಟ್ಟು||

**2)** ಅಂಡಬಾಯಕ ಚಿಲುಕಲ್ಯೆದು ಅಡವಿ ಗಾಚುಚುಂಡಗಾನು.
ಪಂಡು ಕೋತುಲೊಕ್ಕ ರೆಂಡು ಪ್ರಹರಿ ತಿರಿಗೇರಾ ||ಗುಟ್ಟು||

**3)** ಮುಟ್ಟು ತಪ್ಪಿ ಗೊಡ್ಡುರಾಲು ಮಹಿಳಕೊಕ್ಕ ಕೊಡುಕು ಪುಟ್ಟಿ
ಗೊಪ್ಪಕೊಂಡಲೇಡು ಋಂಗಿ ಗುರಕಪೆಟ್ಟೆರಾ ||ಗುಟ್ಟು||

**4)** ಗುಟ್ಟು ಚಪ್ಪಡನಕ ನೊಕ್ಕಡು ಉರಿಕಿ ಮಿಂಟಿ ಕೆಗಯಗಾನು.
ಕುಪ್ಪಿಗಂತುಲೇಸಿ ಪಾಮು ಕರಚಿ ಋಂಗೇರಾ ||ಗುಟ್ಟು||

**5)** ಭುವಿನಿ ನೋರುಲೇನಿ ಮಿಡತ ಪುಲಿನಿ ಋಂಗೇನು,
ಆ ವಾರ್ತ ತೆಲಿಸಿ ಮೇಕ ಯೊಕಟಿ ಪಕಪಕ ನವ್ವೇರಾ ||ಗುಟ್ಟು||

**6)** ಈ ವಿವರಮು ಅರಸಿ ಚೂಡ ಅಲವಿಗಾಡು ಎವರಿಕ್ಯೆನನು.
ತೆಲಿವಿಗಲ ಯಾಗಂಟಿ ಗುರುಡು ತಾನೆ ತೆಲಿಯರಾ ||ಗುಟ್ಟು||

ಇಲ್ಲಿ ಆರನೇ ಚರಣದಲ್ಲಿ ಈ ತತ್ತ್ವ ವಿವರ ತಿಳಿದುಕೊಳ್ಳುವುದಕ್ಕೆ ಯಾರಿಗೂ ಸಾಧ್ಯವಾಗುವುದಿಲ್ಲ. ತಿಳುವಳಿಕೆಯುಳ್ಳ ಯಾಗಂಟಿ ಗುರು ತಾನೇ ತಿಳಿಯಿರಯ್ಯಾ ಎಂದಿದ್ದಾರೆ. ಈಗ ಈ ತತ್ತ್ವ ವಿವರವನ್ನು ತಿಳಿದು ನಾವು ಬರೆಯಬೇಕೆಂದರೆ ಯಾಗಂಟಿ ಗುರುವಾಗಿ ಬದಲಾಗದೆ ತಪ್ಪಲ್ಲ. ಹಾಗೆ ಬದಲಾಗಿ ಆತನಿಗೆ ಯಾವ ವಿವರ ತಿಳಿದಿದೆಯೋ ನಾವು ತಿಳಿದುಕೊಳ್ಳೋಣ.

**1) ಗಂಡುಪಿಲ್ಲಿ ಲೋಕಮೆಲ್ಲ ಪಾರಜೂಚಿ ಏಲಗಾನು,**
**ಕೊಂಡ ಎಲುಕ ಲೋಕ್ಕ ಎರಡು ಕೋಲುವು ಜೇಸೇರಾ ॥ಗುಟ್ಟು॥**

ನಮ್ಮ ಶರೀರದಲ್ಲಿ ಕದಲಿಕೆಶಕ್ತಿ ಇದೆ. ಆ ಶಕ್ತಿಯನ್ನು ಚೈತನ್ಯಶಕ್ತಿ ಎನ್ನುತ್ತಿದ್ದೇವೆ. ಆ ಶಕ್ತಿ ಶರೀರದಲ್ಲಿ ಎಲ್ಲಿದೆಯೋ ಹೇಗಿದೆಯೋ ಯಾರಿಗೂ ತಿಳಿದಿಲ್ಲ. ಅದನ್ನು ಯಾರೂ ನೋಡಲಿಲ್ಲ. ಮನುಷ್ಯನ ಶರೀರ ಬಾರಕ್ಕಿಂತ ಹೆಚ್ಚಾಗಿರುವ ಭಾರವನ್ನು ಕೂಡಾ ಶರೀರದಲ್ಲಿನ ಶಕ್ತಿ ಕದಲಿಸುತ್ತಿದೆ. ಹೊರಗಿನ ವಸ್ತುಗಳನ್ನು ಕದಲಿಸುವ ಶಕ್ತಿ ನಮ್ಮ ಶರೀರದಲ್ಲಿನ ಶ್ವಾಸವನ್ನು ಕೂಡಾ ಆಡಿಸುತ್ತಿದೆ. ಚೈತನ್ಯವನ್ನು ನಂಬಲಾರದವರು ಕೂಡಾ ಶ್ವಾಸದ ಕದಲಿಕೆ ನೋಡಿ ನಂಬಬೇಕಾಗಿ ಬರುತ್ತಿದೆ. ಕಾಣಿಸದ ಚೈತನ್ಯವನ್ನು ಒಂದು ಹೆಸರಿಟ್ಟು ಕರೆಯುವುದು ನಡೆದಿದೆ. ಆ ಹೆಸರೇ **"ಆತ್ಮ"**. ಆತ್ಮ ಒಂದುಕಡೆ ಕೇಂದ್ರವಾಗಿದ್ದು ಶರೀರವೆಲ್ಲವನ್ನು ತನ್ನ ಚೈತನ್ಯದಿಂದ ನಡೆಸುತ್ತಿದೆ. ಕಾಣಿಸದ ಆತ್ಮ ಶರೀರದಲ್ಲಿ ಇದೆಯಾ ಇಲ್ಲವಾ ಎಂದು ನೋಡುವುದಕ್ಕೆ ಶ್ವಾಸವನ್ನನುಸರಿಸಿ ನೋಡಬೇಕಾಗಿದೆ. ಶ್ವಾಸ ಮೂಗಿನ ರಂಧ್ರಗಳಲ್ಲಿ ಆಡುತ್ತಿದ್ದರೆ ಒಳಗೆ ಆತ್ಮ ಇದೆಯೆಂದು, ಶ್ವಾಸ ಆಡದಿದ್ದರೆ ಒಳಗೆ ಆತ್ಮ ಇಲ್ಲವೆಂದು ತಿಳಿಯುತ್ತಿದ್ದೇವೆ. ಆಕಾಶದಲ್ಲಿನ ಸೂರ್ಯನು ತನ್ನ ಕಿರಣಗಳಿಂದ ಲೋಕವೆಲ್ಲವನ್ನು ಪ್ರಕಾಶಿಸುವಂತೆ, ಶರೀರದಲ್ಲಿನ ಬ್ರಹ್ಮನಾಡಿ ಏಳನೆ ಕೇಂದ್ರದಲ್ಲಿರುವ ಆತ್ಮ ತನ್ನ ಚೈತನ್ಯದಿಂದ ಶರೀರವೆಲ್ಲವನ್ನು ಪ್ರಕಾಶಿಸುವಂತೆ ಮಾಡುತ್ತಿದೆ. ಶರೀರದಲ್ಲಿ ಆತ್ಮ ಪ್ರಕಾಶವಿದೆಯಾ ಇಲ್ಲವಾ ಎನ್ನುವುದಕ್ಕೆ ಹೊರಗೆ ಕಾಣಿಸುವ ಶ್ವಾಸವೇ ಆಧಾರ. ಇದನ್ನನುಸರಿಸಿ ರಾಜನಂತೆ ಆತ್ಮ ಶರೀರ ಸಾಮ್ರಾಜ್ಯವನ್ನು ಆಳುತ್ತಿದ್ದರೂ ಆತ್ಮ ಎನ್ನುವ ರಾಜನು ಕಾಣಿಸಲಿಲ್ಲ. ಆದರೆ ಆತ್ಮಗೆ ಎಷ್ಟೋ ಪಟ್ಟು ಕಡಿಮೆ ಇರುವ, ಆತ್ಮದಿಂದ ಕದಲುತ್ತಿರುವ ಎರಡು ಶ್ವಾಸಗಳೇ ಶರೀರಕ್ಕೆ ಪ್ರಕಾಶವೆಂದುಕೊಂಡಂತೆ ಭ್ರಮಿಸುವಂತೆಮಾಡುತ್ತಿವೆ. ಈ ವಿಧವಾಗಿ ಸ್ಪರ್ಶಕ್ಕೆ ಕಾಣಿಸುವ ಶ್ವಾಸವೇ ಶರೀರಕ್ಕೆ ಜೀವನಾಧಾರವೆಂದು ಕೆಲವರಂದುಕೊಂಡು, ಅದನ್ನು ಮೀರಿರುವುದು ಇಲ್ಲವೆಂದುಕೊಳ್ಳುವುದೇ ಜ್ಞಾನವೆಂದುಕೊಂಡು, ಒಳಗಿರುವ ಆತ್ಮವನ್ನು ಮರೆತು ಶ್ವಾಸದಮೇಲೆ ಧ್ಯಾಸ

ಇಟ್ಟುಕೊಳ್ಳಿರೆನ್ನುತ್ತಿದ್ದಾರೆ. ಆತ್ಮಮೇಲೆ ಧ್ಯಾಸ ಇಡದೆ ಶ್ವಾಸದ ಮೇಲೆ ಧ್ಯಾಸ ಇಟ್ಟರೆ 'ಬೆಕ್ಕನ್ನು ಬಿಟ್ಟು ಇಲಿಗಳನ್ನು ನಂಬಿಕೊಂಡಂತಿದೆ,'

ನಮ್ಮ ಶರೀರದಲ್ಲಿನ ಆತ್ಮ ಗಂಡು ಬೆಕ್ಕಿನಂಥಾದ್ದು. ಆತ್ಮ ಬಲವನ್ನು ಅಂದಾಜು ಹಾಕಲಾರೆವು, ಆದ್ದರಿಂದ ಆತ್ಮವನ್ನು ಈ ತತ್ತ್ವದಲ್ಲಿ ಗಂಡು ಬೆಕ್ಕಿಗೆ ಸಮಾನವಾಗಿ ಹೋಲಿಸುತ್ತಿದ್ದೇವೆ. ಆತ್ಮ ತನ್ನ ಚೈತನ್ಯದಿಂದ ಶರೀರವೆಲ್ಲಾ ವ್ಯಾಪಿಸಿದೆ. ಆದ್ದರಿಂದ ಇಲ್ಲಿ 'ಗಂಡು ಬೆಕ್ಕು ಲೋಕವೆಲ್ಲ ಪಾರಚೂಚಿ ಏಲೆರಾ' ಎಂದು ಹೇಳಿದ್ದಾರೆ. ಲೋಕವೆಂದರೇ ಶರೀರವೆಂದು ಅರ್ಥ ಮಾಡಿಕೊಳ್ಳಬೇಕು. ಒಳಗಿರುವ ರಾಜು ತಿಳಿಯುವುದಿಲ್ಲ ಆದರೇ ಹೊರಗಿರುವ ಭಟರು ಮಾತ್ರ ತಿಳಿದಿದ್ದಾರೆನ್ನುವಂತೆ ಒಳಗಿರುವ ಆತ್ಮ ತಿಳಿದಿಲ್ಲ ಆದರೆ, ಹೊರಗಿರುವ ಶ್ವಾಸಗಳು ಮಾತ್ರ ತಿಳಿಯುತ್ತಿವೆ.  ಅದೇ ವಿಧವಾಗಿ ಒಳಗಿರುವ ಬಲವಾದ ಬೆಕ್ಕಿನಂತಹ ಆತ್ಮ ತಿಳಿಯುವುದಿಲ್ಲ ಆದರೆ ಬಲವಿಲ್ಲದ ಇಲಿಗಳಂತಹ ಎರಡು ಶ್ವಾಸಗಳು ತಿಳಿಯುತ್ತಿವೆ. ಆದ್ದರಿಂದ ಎಲ್ಲರಿಗೂ ತಿಳಿಯುವಂತೆ 'ಎರಡು ಬೆಟ್ಟದ ಇಲಿಗಳು ಕಾರ್ಯ ಮಾಡಿದವು' ಎಂದಿದ್ದಾರೆ. ನಿಜವಾದ ಸ್ಥಾನ ಒಳಗಿನ ಬೆಕ್ಕಿನದಾದರೂ, ಕಾಣಿಸುವ ಸ್ಥಾನ ಇಲಿಗಳದ್ದೇ ಎನ್ನುವಂತಿದೆ ಅಲ್ಲವೇ! ಆದ್ದರಿಂದ ಬೆಕ್ಕು ವಿಷಯ ತಿಳಿಯದ ಕೆಲವರು ನಮ್ಮ ಧ್ಯಾಸ ಶ್ವಾಸದ ಮೇಲೆ ಎಂದು ಎರಡು ಇಲಿಗಳನ್ನು ಹಿಡಿದುಕೊಂಡು ತೂಗಾಡುತ್ತಿದ್ದಾರೆ. ಬೆಕ್ಕಿನ ಸಿಂಹಾಸನದ ತಲೆ ಮಧ್ಯಭಾಗದಲ್ಲಿರುವ ಏಳನೆ ನಾಡೀಕೇಂದ್ರವಾದರೆ, ಚಿಕ್ಕಇಲಿಗಳು ಎರಡು ಶ್ವಾಸಕೋಶಗಳವರೆಗು ಒಳಗೆ ಹೋಗಿ ಬರುತ್ತಿವೆ. ಯಾವುದು ಏನಾದರೂ ಗಂಡುಬೆಕ್ಕಿನ ದಯಾದಾಕ್ಷಿಣ್ಯದಿಂದಲೇ ಎರಡು ಇಲಿಗಳು ಬದುಕುತ್ತಿವೆ. ಬೆಕ್ಕು ತನ್ನ ಸ್ಥಾನವನ್ನು ಬಿಟ್ಟು ಬಂದಿದೆಯೆಂದರೇ ಎರಡು ಇಲಿಗಳನ್ನು ಬಾಯಲ್ಲಿ ಕಚ್ಚಿಕೊಂಡು ಹೋಗುತ್ತದೆ. ಆತ್ಮ ಹೊರಗೆ ಬಂದರೆ ಶ್ವಾಸಗಳಿರುವುದಿಲ್ಲವೆಂದು ಅರ್ಥ.

ನೀವು ಚೆನ್ನಾಗಿ ಅರ್ಥಮಾಡಿಕೊಳ್ಳುವುದಕ್ಕೆ ಮತ್ತೊಂದು ಸಲ ಹೇಳುವುದೇನೆಂದರೇ ಬೆಕ್ಕು ಎಂದರೇ ಆತ್ಮ ಎಂದು, ಲೋಕವೆಲ್ಲ ಎಂದರೇ

ಶರೀರವೆಲ್ಲ ಎಂದು ಅರ್ಥ, ಆಲೋಚಿಸಿ ಪರಿಪಾಲಿಸುವುದು ಎಂದರೇ ಉಗುರು ಕೂದಲವರೆಗು ತನ್ನ ಶಕ್ತಿಯನ್ನು ವ್ಯಾಪಿಸುವಂತೆ ಮಾಡುವುದೆಂದು ಅರ್ಥ. ಬೆಟ್ಟದ ಇಲಿಗಳು ಎಂದರೇ ಶ್ವಾಸಗಳು, ಒಂದೆರಡು ಎಂದರೇ ಎರಡು ಒಂದಾಗಿ ಹೊರಗೆ ಬೆರೆತು ಬರುತ್ತಿವೆ, ಬೆರೆತು ಒಳಗೆ ಹೋಗುತ್ತಿವೆಯೆಂದು ಅರ್ಥ. ಕಾರ್ಯ ಮಾಡುತ್ತದೆಂದರೇ ಶ್ವಾಸಗಳೇ ಶರೀರವೆಲ್ಲದಕ್ಕು ಆಧಾರವೆನ್ನು ವಂತೆ ಕಾಣಿಸುತ್ತಿವೆಯೆಂದು ಅರ್ಥ. ಈ ವಿಧವಾಗಿ ಅರ್ಥ ಮಾಡಿಕೊಂಡರೆ ಈ ಮೊದಲ ಚರಣದಲ್ಲಿನ ಭಾವವೆಲ್ಲ ಬಟ್ಟೆಬಯಲೇ ಎಂದು ಹೇಳಿದ್ದಾರೆ.

**2. ಅಂಡಬಾಯಕ ಚಿಲುಕಲೈದು ಅಡವಿ ಗಾಚುಚುಂಡಗಾನು.**
**ಪಂಡು ಕೋತುಲೊಕ್ಕ ಎರಡು ಪ್ರಹರಿ ತಿರಿಗೇರಾ ॥ಗುಟ್ಟು॥**

ಶರೀರ ನಿರ್ಮಾಣ ಪ್ರಕೃತಿಯಾದ ಪಂಚಭೂತಗಳಿಂದ ನಿರ್ಮಾಣವಾಗಿದೆ. ಶರೀರ ಪಂಚಭೂತಗಳಾದ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿ ಎನ್ನುವ ಐದು ಪದಾರ್ಥಗಳಿಂದ ತಯಾರಾಗಿದೆ. ಶರೀರವೆಲ್ಲಾ ಐದು ಪದಾರ್ಥಗಳೇ ತುಂಬಿವೆ. ಆತ್ಮ ತಲೆಮಧ್ಯ ಭಾಗದಲ್ಲಿದ್ದು ಈ ಐದು ಭಾಗಗಳಿಗೆಲ್ಲ ತನ್ನ ಶಕ್ತಿಯನ್ನು ಪ್ರಸಾರ ಮಾಡುತ್ತಿದೆ. ಇದನ್ನನುಸರಿಸಿ ಪಂಚಭೂತಗಳ ರಾಜ್ಯದಲ್ಲಿ ಆತ್ಮ ರಾಜನಾಗಿ ಇದ್ದಾನೆಂದು ತಿಳಿಯುತ್ತಿದೆ. ಮನೆಗೆ ಕಾವಲು ಕಾಯಿರೆಂದು ಮನೆ ಯಜಮಾನ ಹೇಳಿದರೇ ಮನೆಯಲ್ಲಿನ ಗುಮಾಸ್ತರು ಯಜಮಾನ ಹೇಳಿದ ಕೆಲಸ ಮಾಡಿದಂತೆ ಆತ್ಮ ಹೇಳಿದ ಕೆಲಸ ಪಂಚಭೂತಗಳು ಮಾಡುತ್ತಿವೆ. ಪಂಚಭೂತಗಳು ಒಂದೊಂದು ಐದು ಭಾಗಗಳಾಗಿ ವಿಭಜಿಸಲ್ಪಟ್ಟು ಒಟ್ಟು ಇಪ್ಪತ್ತೈದು ಭಾಗಗಳಾಗಿ ವಿಸ್ತರಿಸಿವೆ. ಆತ್ಮ ಎನ್ನುವ ಯಜಮಾನನನ್ನು ಅನುಸರಿಸಿ ಪಂಚಭೂತಗಳಿಂದ ನಿರ್ಮಿತವಾದ ಅವಯವಗಳು ಕೆಲಸ ಮಾಡುತ್ತಿವೆ. ಈ ವಿಧಾನವನ್ನು ಎರಡನೆ ಚರಣದಲ್ಲಿ ಹೇಳುತ್ತಾ 'ಪಂಚಭೂತಗಳನ್ನು ಐದು ಗಿಳಿಗಳಾಗಿ' ವರ್ಣಿಸಿದ್ದಾರೆ. ಪಂಚ ಭೂತಗಳೆಲ್ಲ ಒಂದುಕಡೆ ಸೇರಿವೆಯಾದ್ದರಿಂದ ಅಂಡಬಾಯಕ ಎಂದಿದ್ದಾರೆ. ಪಂಚಭೂತಗಳು ಕಾಣಿಸುವ ಹತ್ತು ಅವಯವಗಳಾಗಿ, ಕಾಣಿಸದ ಹದಿನೈದು ಅವಯವಗಳಾಗಿ

ಶರೀರವೆಲ್ಲ ವ್ಯಾಪಿಸಿವೆ. ಆದ್ದರಿಂದ 'ಗಿಳಿಗಳೈದು ಶರೀರವೆನ್ನುವ ಅರಣ್ಯವನ್ನು ಕಾಯುತ್ತಿವೆಯೆಂದು' ಹೇಳಿದ್ದಾರೆ.

ಶರೀರವನ್ನು ಅರಣ್ಯಕ್ಕೆ ಹೋಲಿಸಿಕೊಂಡರೆ ಅದಕ್ಕೆ ಪ್ರಹರಿ ಗೋಡೆಯಂಥದ್ದು ಚರ್ಮ. ಚರ್ಮವನ್ನು ದಾಟಿ ಶರೀರ ಇರುವುದಿಲ್ಲ. ಚರ್ಮದ ಒಳಗೇ ಶರೀರವೆಲ್ಲಾ ಇರುತ್ತದೆ. ಉಗುರು ಕೂದಲು ಕೂಡ ಚರ್ಮದಲ್ಲಿನ ಭಾಗಗಳೇ ಎಂದು ಗುರುತಿಟ್ಟುಕೊಳ್ಳಬೇಕು. ಶರೀರವೆನ್ನುವ ಅರಣ್ಯದಲ್ಲಿ ಇಪ್ಪತ್ತೈದು ಅವಯವಗಳೆನ್ನುವ ಪ್ರಾಣಿಗಳು ಇವೆಯೆಂದು ಹೇಳಿಕೊಳ್ಳಬಹುದು. ಅವುಗಳಲ್ಲಿ ಯಾವಾಗಲೂ ಚಲನೆ ಹೊಂದಿರುವವು ಕೋತಿಗಳು. ಅದರಲ್ಲಿಯು ತಿರುಗುವುದರಲ್ಲಿ ಚೆನ್ನಾಗಿ ಅಭ್ಯಾಸವಾಗಿವೆಯೆಂದು ಅರ್ಥವಾಗುವುದಕ್ಕೆ ಹಣ್ಣುಕೋತಿಗಳೆಂದು ಕೂಡಾ ಹೇಳಿದ್ದಾರೆ. ಉಚ್ಛ್ವಾಸ ನಿಚ್ಛ್ವಾಸ ಎನ್ನುವ ಎರಡು ಕೋತಿಗಳು ಶರೀರದ ಹೊರಗು ಕೂಡಾ ಬರುತ್ತಿವೆ. ಆದ್ದರಿಂದ ಪ್ರಹರಿ ದಾಟಿಹೋಗಿ ಪುನಃ ಬರುತ್ತಿವೆಯೆಂದು ಹೇಳಬಹುದು. ಎರಡು ಮೂಗಿನರಂಧ್ರಗಳ ಶ್ವಾಸಗಳನ್ನು ಎರಡು ಕೋತಿಗಳಾಗಿ ಲೆಕ್ಕಿಸಿ ನೋಡಿದರೆ ಶರೀರವೆನ್ನುವ ಅರಣ್ಯದಿಂದ ಚರ್ಮವೆನ್ನುವ ಪ್ರಹರಿಯನ್ನು ದಾಟಿಹೋಗಿ ಪುನಃ ಬರುತ್ತಿವೆ. ಆದ್ದರಿಂದ 'ಹಣ್ಣು ಕೋತಿಗಳೊಂದರ ಎರಡು ಪ್ರಹರಿ ತಿರುಗಿದವಯ್ಯಾ' ಎಂದಿದ್ದಾರೆ.

ಅಂಡಬಾಯನಿ ಐದು ಗಿಳಿಗಳೆಂದರೇ ಒಂದುಕಡೆ ಕೂಡಿರುವ ಪಂಚಭೂತಗಳೆಂದು, ಶರೀರವನ್ನು ಅರಣ್ಯವೆಂದು, ಒಂದೆರಡು ಎಂದರೇ ಒಂದು ಶ್ವಾಸವೇ ಎರಡು ಭಾಗಗಳಾಗಿ ಇದೆಯೆಂದು, ಹಣ್ಣು ಕೋತಿಗಳೆಂದರೇ ತಿರುಗುವುದರಲ್ಲಿ ಅಭ್ಯಾಸವಾದ ಎರಡು ವಿಧಗಳ ಶ್ವಾಸಗಳೆಂದು, ಪ್ರಹರಿ ಎಂದರೇ ಶರೀರವನ್ನು ಸುತ್ತಿರುವ ಚರ್ಮವೆಂದು ಅರ್ಥ ಮಾಡಿಕೊಂಡಾಗ ಎರಡನೆ ಚರಣದಲ್ಲಿನ ರಹಸ್ಯ ಸುಲಭವಾಗಿ ಅರ್ಥವಾಗಬಲ್ಲದು. ನೋಡುವುದಕ್ಕೆ ವಿಚಿತ್ರವಾಗಿ ಗಿಳಿಗಳು, ಕೋತಿಗಳು, ಅರಣ್ಯ ಎಂದು ಬರೆದ ಈ ವಾಕ್ಯದಲ್ಲಿ ಎಷ್ಟೋ ಜ್ಞಾನ ಒಳಗೊಂಡಿದೆ.

**3. ಮುಟ್ಟು ತಪ್ಪಿ ಗೊಡ್ಡುರಾಲು ಮಹಿಳಕೊಕ್ಕ ಕೊಡುಕು ಪುಟ್ಟಿ**
**ಗೊಪ್ಪಕೊಂಡಲೇಡು ಋಂಗಿ ಗುರಕಪೆಟ್ಟಿರಾ ॥ಗುಟ್ಟು॥**

ಮಾನವರಲ್ಲಿ ಪೂರ್ವದಲ್ಲಿ ಸಾವಿರಕ್ಕೊಬ್ಬನು ಅದೂ ಅಪರೂಪವಾಗಿ ಜ್ಞಾನದ ಮೇಲೆ ಆಸಕ್ತಿ ಹೊಂದಿದ್ದರಂತೆ, ಈಗಿನ ಕಾಲದಲ್ಲಿ ಲಕ್ಷಜನರಲ್ಲಿ ಒಬ್ಬನಿಗೆ ಜ್ಞಾನದ ಮೇಲೆ ಆಸಕ್ತಿ ಇರುವುದು ಅಪರೂಪವೇ ಎಂದು ಹೇಳಬಹುದು. ಎರಡು ಮೂರು ಲಕ್ಷಗಳಿಗೆ ಒಬ್ಬನು ಜ್ಞಾನದ ಮೇಲೆ ಆಸಕ್ತಿ ಇರುವವನು ದೊರೆತರೂ ಅವನು ಕೊನೆಯವರೆಗು ಜ್ಞಾನ ತಿಳಿದು ಕೊಳ್ಳುತ್ತಾನೆನ್ನುವ ನಂಬಿಕೆಯಿಲ್ಲ. ಇದನ್ನನುಸರಿಸಿ ನೋಡಿದರೆ ಕೊನೆಯವರೆಗು ಜ್ಞಾನಾಶಕ್ತಿ ಹೊಂದಿರುವವನು ಕೆಲವು ಲಕ್ಷಗಳಿಗೊಬ್ಬನು ದೊರೆಯುತ್ತಾನೆಂದು ತಿಳಿಯುತ್ತಿದೆ. ಬಹುಶ ಹತ್ತುಲಕ್ಷಗಳಿಗೆ ಒಬ್ಬನು ದೊರೆತರೆ ಹತ್ತುಲಕ್ಷಗಳ ಮಂದಿ ಅಜ್ಞಾನಿಗಳಿರುತ್ತಾರೆಂಬವಾತು. ಅಷ್ಟು ಜನರಲ್ಲಿ ಜ್ಞಾನಿಯಾದವನು ಕರ್ಮಯೋಗ, ಬ್ರಹ್ಮಯೋಗ ಎನ್ನುವ ಎರಡು ಯೋಗಗಳಲ್ಲಿ ಯಾವ ಯೋಗವನ್ನಾದರೂ ಅನುಸರಿಸಬಹುದು. ಒಂದುವೇಳೆ ಬ್ರಹ್ಮಯೋಗ ವನ್ನು ಅನುಸರಿಸಿದ್ದಾನೆಂದು ಅಂದುಕೊಳ್ಳೋಣ. ಆತನು ಬ್ರಹ್ಮಯೋಗಿ ಆಗುತ್ತಾನೆ. ಇಲ್ಲಿಯವರೆಗಿರುವ ವಿವರವನ್ನು ಮೇಲಿನ ಚರಣದಲ್ಲಿ ಯಾವ ವಿಧವಾಗಿ ವಿವರಿಸಿದ್ದಾರೊ. ನೋಡೋಣ. ಬಂಜೆ ಎಂದರೇ ಮಕ್ಕಳು ಹುಟ್ಟದವಳು ಎಂದು ಎಲ್ಲರಿಗು ತಿಳಿಯುತ್ತದೆ. ಬಂಜೆಗೆ ಮಕ್ಕಳು ಹುಟ್ಟದಿದ್ದರೂ ಮುಟ್ಟು (ಋತುಸ್ರಾವ) ಎನ್ನುವುದು ಪ್ರತಿ ತಿಂಗಳು ಇದ್ದೇ ಇರುತ್ತದೆ. ಅಜ್ಞಾನಿಗೆ ಜ್ಞಾನ ಉಂಟಾಗುವುದು ದುರ್ಲಭ, ಹತ್ತು ಲಕ್ಷ ಜನರಿಗೆ ಕೂಡಾ ಒಬ್ಬನು ಸಿಗುವುದು ಅಪರೂಪ ಎಂದುಕೊಂಡಿದ್ದೇವೆ ಅಲ್ಲವೇ! ಅಜ್ಞಾನಿಯನ್ನು ಬಂಜೆಯಾಗಿ ಹೋಲಿಸಿ ಅವರಿಗೆ ಜ್ಞಾನ ಎನ್ನುವ ಸಂತತಿ ಉಂಟಾಗುವುದಿಲ್ಲ ಎಂದಿದ್ದಾರೆ. ಸಂತತಿ ಉಂಟಾಗಬೇಕೆಂದರೆ ಅವರಲ್ಲಿ ಜ್ಞಾನವೆನ್ನುವ ಬೀಜ ಬೀಳಬೇಕು. ಜ್ಞಾನವೆನ್ನುವುದು ಟಿವಿಗಳಲ್ಲಿಯೂ, ರೇಡಿಯೋಗಳಲ್ಲಿಯೂ ಎಲ್ಲಿಯಾದರೂ ಗುರುಗಳಹತ್ತಿರ ಕೇಳಿದರೂ ಆಸಕ್ತಿ ಇಲ್ಲದವರಿಗೆ ಅದು ಫಲಿಸುವುದಿಲ್ಲ, ಅಂದರೇ

ತಲೆಗೇರುವುದಿಲ್ಲ. ಎಷ್ಟೋ ಜನ ಅಜ್ಞಾನಿಗಳಲ್ಲಿ ಒಬ್ಬನಾದರೂ ಜ್ಞಾನಿಗಳ ಸಾಂಗತ್ಯದಲ್ಲಿ ಜ್ಞಾನವನ್ನು ಕೇಳಿ, ಅದರಮೇಲೆ ಆಸಕ್ತಿ ಬೆಳೆಸಿಕೊಂಡರೆ ಅವನಿಗೆ ಜ್ಞಾನಬೀಜ ಬಿದ್ದಂತೆ. ಅಂತಹವನು ಸ್ವಲ್ಪ ಕಾಲಕ್ಕೆ ಯೋಗಿಯಾಗಬಲ್ಲನು. ಅಜ್ಞಾನವೆನ್ನುವ ಬಂಜೆತನ ಹೊಂದಿ ಯೋಗವೆನ್ನುವ ಸಂತತಿ ಇಲ್ಲದವನಿಗೆ ಜ್ಞಾನಬೀಜ ಬಿದ್ದಾಗ ಅಜ್ಞಾನವೆನ್ನುವ ಮುಟ್ಟು ನಿಂತುಹೋಗುತ್ತದೆ. ಜ್ಞಾನ ಬೀಜ ಬಿದ್ದವನಿಗೆ ಸ್ವಲ್ಪಕಾಲದವರೆಗು ಗರ್ಭಬೆಳೆದಂತೆ ಜ್ಞಾನ ಬೆಳೆದು ಯೋಗವೆನ್ನುವ ಪುತ್ರನನ್ನು ಪಡೆಯುತ್ತಾನೆ. ಹುಟ್ಟುವವರಲ್ಲಿ ಮಗ ಹುಟ್ಟಬಹುದು ಅಥವಾ ಮಗಳು ಹುಟ್ಟಬಹುದು. ಜ್ಞಾನ ಹೊಂದಿದವನು ಸ್ವಲ್ಪಕಾಲಕ್ಕೆ ಕರ್ಮಯೋಗಿ ಯಾದರೇ ಮಗಳು ಹುಟ್ಟಿದಂತೆ, ಹಾಗಲ್ಲದೆ ಮಗ ಹುಟ್ಟಿದಂತಾದರೆ ಬ್ರಹ್ಮಯೋಗಿ ಯಾಗಿ ಲೆಕ್ಕಿಸಿಕೊಳ್ಳಬೇಕು.

ಭೂಮಿಮೇಲೆ ಬ್ರಹ್ಮಯೋಗಿ ಆದವನು ಮನಸ್ಸನ್ನು ಜಯಿಸುವ ಸಾಧನೆ ಮಾಡಿ ಮನಸ್ಸನ್ನು ಜಯಿಸುತ್ತಾನೆ. ಎಷ್ಟೋ ಸಂಕಲ್ಪಗಳಿಂದ ಕೂಡಿಕೊಂಡ ಮನಸ್ಸನ್ನು ಯಾವೊಂದು ಆಲೋಚನೆ ಮಾಡಿಸದೆ ಶೂನ್ಯವಾಗಿ ಇರಿಸುವುದನ್ನು ಬ್ರಹ್ಮಯೋಗ ಎನ್ನುತ್ತೇವೆ. ಶರೀರಕ್ಕಿರುವ ಐದು ಜ್ಞಾನೇಂದ್ರಿಗಳಾದ ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ ಒಂದರ ಪ್ರಸ್ತುತ ವಿಷಯಗಳನ್ನಾಗಲಿ, ನಡೆದುಹೋದ, ಮುಂಬರುವ ವಿಷಯಗಳನ್ನಾಗಲಿ ಯೋಚಿಸದೆ ಇರುವುದನ್ನು ಬ್ರಹ್ಮಯೋಗ ಎನ್ನುತ್ತೇವೆ. ಇಲ್ಲಿ ಕೆಲವರಿಗೆ ಒಂದು ಪ್ರಶ್ನೆ ಬರಬಹುದು. ಅದೇನೆಂದರೇ ಒಬ್ಬ ಗುರು ಹತ್ತಿರ ಉಪದೇಶ ಮಂತ್ರವನ್ನು ತೆಗೆದುಕೊಂಡು ಅದನ್ನು ಧ್ಯಾನಿಸುತ್ತಿರುವಾಗ, ಅದು ಇದಕ್ಕು ಮೊದಲು ಕೇಳಿರುವುದಾಗುತ್ತದೆ ಅಲ್ಲವೇ! ನಡೆದುಹೋದ ಕಿವಿಗೆ ಸಂಬಂಧಿಸಿದ ವಿಷಯವಲ್ಲವೆ! ಇದು ಇಂದ್ರಿಯ ವಿಷಯವಾಗುವುದರಿಂದ ಮಾಡುವುದು ಧ್ಯಾನ ಅಲ್ಲವೆನ್ನುತ್ತೇವಾ? ಎಂದು ಕೇಳಬಹುದು. ಅದಕ್ಕೆ ನಮ್ಮ ಉತ್ತರ ಏನೆಂದರೇ! ಇಂದ್ರಿಯಗಳಿಗೆ ಸಂಬಂಧಿಸಿದ ಒಂದು ವಿಷಯದ ಮೇಲೆ ಗಮನವಿಟ್ಟು ಜಪಿಸುವುದರಿಂದ ಆತನು ಅನೇಕದಿಂದ ಏಕದೊಳಗೆ ಬಂದು ಮನಸ್ಸನ್ನು ಒಂದರಮೇಲೆ ಇಟ್ಟಿದ್ದಾನೆ ಆದ್ದರಿಂದ ಅದು

ಯೋಗ ಆಗುವುದಿಲ್ಲ. ಮನಸ್ಸಿಗೆ ಏಕ ವಿಷಯ ಕೂಡ ಇಲ್ಲದಂತೆ ಮಾಡಿ ಏಕದಮೇಲಿರುವ ಸೊನ್ನೆ ಮೇಲಕ್ಕೆ ಹೋದಾಗ ಏಕಾಗ್ರತೆ ಹೊಂದಿದವನಾಗುತ್ತಾನೆ. ಆಗ ಆತನ ಮನಸ್ಸಿನಲ್ಲಿ ಒಂದು ಕೂಡಾ ಇಲ್ಲದೇ ಸೊನ್ನೆ ಸ್ಥಿತಿಯಲ್ಲಿ ಇದ್ದಾನೆಂದು ತಿಳಿಯುತ್ತಿದೆ. ಏಕಾಗ್ರತೆ ಹೊಂದಿದವನೇ ಬ್ರಹ್ಮಯೋಗಿ ಆಗುತ್ತಾನೆ. ಹಾಗಲ್ಲದೆ ಮನಸ್ಸಿನಲ್ಲಿ ಯಾವುದೊ ಒಂದನ್ನು ಧ್ಯಾನಿಸುವವನು ಧ್ಯಾನಿ ಅಥವಾ ತಪಸ್ವಿ ಆಗುತ್ತಾನೆ, ಆದರೆ ಯೋಗಿ ಆಗಲಾರನು. ಒಂದನ್ನು ತಪಿಸುತ್ತಾ ಜಪಿಸುವವನನ್ನು ತಪಸ್ವಿ ಎನ್ನುತ್ತಾರೆ. ತಪಸ್ವಿಗಿಂತ ಯಾವ ಒಂದೂ ಇಲ್ಲದ ಯೋಗಿ ದೊಡ್ಡವನು ಎಂದು ಗೀತೆಯಲ್ಲಿ ಕೂಡಾ **"ತಪಸ್ವಿ ಭ್ಯೋಧಿಕೋ ಯೋಗಿ"** ಎಂದಿದ್ದಾರೆ.

ಬಂಜೆಯಂತೆ ಇರುವ ಅಜ್ಞಾನಿ ಜ್ಞಾನವೆನ್ನುವ ಗರ್ಭವನ್ನು ಧರಿಸಿ ಬ್ರಹ್ಮಯೋಗವೆನ್ನುವ ಪುತ್ರನನ್ನು ಹೆತ್ತ ನಂತರ ಹೇಗಿರುತ್ತದೆಂದರೇ! ತಾನು ಯೋಗವನ್ನಾಶ್ರಯಿಸಿ ಬದುಕುವುದಕ್ಕೆ ಪ್ರಾರಂಭಿಸುತ್ತಾನೆ. ಬ್ರಹ್ಮಯೋಗ ಮಾಡುವಾಗ ಶರೀರದಲ್ಲಿನ ಮನಸ್ಸು ಎಲ್ಲಾ ಕೆಲಸಗಳನ್ನು ಬಿಟ್ಟು ಯಾವೊಂದು ಆಲೋಚನೆಯಾಗಲಿ, ಗಮನವಾಗಲಿ ಇಲ್ಲದಂತಿರುತ್ತಾನೆ. ಆಗ ಶರೀರದಲ್ಲಿ ಏಳು ನಾಡಿಕೇಂದ್ರಗಳಲ್ಲಿರುವ ಶಕ್ತಿ ಕೆಳಗಿನ ಕೇಂದ್ರದಿಂದ ಸ್ಥಂಭಿಸಿಹೋಗುವುದಕ್ಕೆ ಆರಂಭಿಸುತ್ತದೆ. ಒಂದರ ನಂತರ ಒಂದು ಸ್ಥಂಭಿಸಿ ಕೊನೆಗೆ ಆರು ಕೇಂದ್ರಗಳು ನಿಂತುಹೋಗುತ್ತವೆ. ಕೊನೆಯ ಏಳನೆ ಕೇಂದ್ರದಲ್ಲಿ ಆತ್ಮಶಕ್ತಿಯೆಲ್ಲವೂ ಕೇಂದ್ರೀಕೃತವಾಗಿಹೋಗುತ್ತದೆ. ಏಳನೆ ಕೇಂದ್ರ ಕೆಳಗೆ ಆರು ಕೇಂದ್ರಗಳಂತೆ ನಿಂತುಹೋಗುವುದಿಲ್ಲವೆಂದು ಜ್ಞಾಪಕವಿಟ್ಟುಕೊಳ್ಳಬೇಕು. ಮೇಲೆ ಶಿರಸ್ಸಿನಲ್ಲಿರುವ ಏಳನೆ ಕೇಂದ್ರದಲ್ಲಿ ಆತ್ಮ ನಿಂತುಹೋದಾಗಲೇ ಪೂರ್ತಿ ಯೋಗವಾಗುತ್ತದೆ. ಕೆಳಗೆ ಆರು ನಾಡಿ ಕೇಂದ್ರಗಳಲ್ಲಿ ಆತ್ಮ ಚೈತನ್ಯ ಇಲ್ಲದಂತೆ ಹೋಗಿದೆ ಆದ್ದರಿಂದ ಶರೀರದಲ್ಲಿನ ಕೆಲಸಗಳೆಲ್ಲವೂ ನಿಂತುಹೋಗಿರುತ್ತವೆ. ಜೀರ್ಣಾಶಯದ ಕೆಲಸಗಳಾಗಲಿ, ಶ್ವಾಸಕೋಶಗಳ ಕಾರ್ಯಗಳಾಗಲಿ, ಗುಂಡಿಗೆಯೊಂದರ ಕದಲಿಕೆಯಾಗಲಿ, ರಕ್ತಪ್ರಸರಣೆಯಾಗಲಿ ಏನು ಇಲ್ಲದಂತೆ ಸ್ಥಂಭಿಸಿ ಹೋಗಿರುತ್ತದೆ. ಆಗ ಯೋಗಿ ಶರೀರದಲ್ಲಿ ನಿದ್ರೆಯಲ್ಲಿ ಕದಲದಂತಿರುತ್ತಾನೆ. ಉಸಿರು ಕೂಡಾ

ಇಲ್ಲವಾದ್ದರಿಂದ ಒಂದು ವಿಧವಾಗಿ ಮೃತದೇಹದಂತೆ ಕಾಣಿಸುತ್ತದೆ. ಆದರೆ ಒಳಗೆ ಆತ್ಮ ಜೀವಾತ್ಮ ಎರಡೂ ಇವೆ ಆದ್ದರಿಂದ ಆ ಸ್ಥಿತಿಯನ್ನು 'ಯೋಗನಿದ್ರೆ' ಎಂದು ಕೂಡಾ ಕರೆಯುತ್ತಿದ್ದೇವೆ. ಈ ಯೋಗ ವಿಷಯವನ್ನು ಈ ತತ್ತ್ವದಲ್ಲಿ ಪ್ರಸ್ತಾಪಿಸುತ್ತಾ 'ದೊಡ್ಡ ಬೆಟ್ಟಗಳೇಳು ನುಂಗಿ ಗೊರಕೆ ಹೊಡೆಯುತ್ತದೆ' ಎಂದಿದ್ದಾರೆ. ಇದನ್ನು ವಿವರಿಸಿಕೊಂಡರೆ ಯೋಗವನ್ನು ಮಗನೆಂದುಕೊಂಡಿದ್ದೇವೆ ಅಲ್ಲವೇ! ಯೋಗದ ಕೆಳಗಿನಿಂದ ಆರು ಕೇಂದ್ರಗಳನ್ನೇರಿ ಏಳನೆಕೇಂದ್ರವನ್ನು ಸೇರುತ್ತಿದೆ. ಆದ್ದರಿಂದ ಏಳು ನಾಡಿಕೇಂದ್ರಗಳನ್ನು ದೊಡ್ಡ ಬೆಟ್ಟಗಳಾಗಿ ಹೋಲಿಸಿ ಹೇಳಿ 'ದೊಡ್ಡ ಬೆಟ್ಟಗಳೇಳು ನುಂಗಿತು' ಎಂದಿದ್ದಾರೆ. ಅಲ್ಲಿ ಸೇರಿದ ಯೋಗ ಆತ್ಮನಲ್ಲಿ ಸೇರಿ ನಿಂತುಹೋಗುತ್ತಿದೆ. ಶರೀರ ಧ್ಯಾಸ ಮತ್ತು ಕೆಲಸಗಳು ಎಲ್ಲಾ ನಿಂತು ನಿದ್ರೆ ಹೊಂದಿದವನಂತೆ ಕಾಣಿಸುತ್ತಿದ್ದಾನೆ, ಆದ್ದರಿಂದ ಅದು ಯೋಗನಿದ್ರೆಯಾಗಿ ಲೆಕ್ಕಿಸಿ ಬೆಟ್ಟಗಳೇಳು ನುಂಗಿ ಗೊರಕೆ ಹೊಡೆಯಿತು ಎಂದಿದ್ದಾರೆ. ನಿಮಗೆ ಚೆನ್ನಾಗಿ ಅರ್ಥವಾಗುವುದಕ್ಕೆ ಮತ್ತೊಂದುಸಲ ಈ ಚರಣದಲ್ಲಿನ ಪದಗಳ ಹೋಲಿಕೆಗಳನ್ನು ಕುರಿತು ಹೇಳುತ್ತಿದ್ದೇವೆ. ಬಂಜೆ ಮಹಿಳೆ ಎಂದರೇ ಅಜ್ಞಾನ ಮಾನವನು ಎಂದು ಅರ್ಥ. ಮುಟ್ಟು ತಪ್ಪುವುದು ಎಂದರೇ ಜ್ಞಾನದ ಮೇಲೆ ಆಸಕ್ತಿಹೊಂದಿ ತನ್ನ ತಲೆಯಲ್ಲಿ ಜ್ಞಾನವನ್ನು ಏರಿಸಿಕೊಳ್ಳುವುದು ಎಂದು ಅರ್ಥ. ಮಗ ಹುಟ್ಟುವುದೆಂದರೇ ಜ್ಞಾನ ಹೊಂದಿದವನು ಸ್ವಲ್ಪ ಕಾಲಕ್ಕೆ ಯೋಗಿ ಆಗುತ್ತಾನೆ ಎಂದು ಅರ್ಥ. ದೊಡ್ಡ ಬೆಟ್ಟಗಳೇಳು ನುಂಗಿ ಎಂದರೇ ಶರೀರದಲ್ಲಿನ ಏಳು ನಾಡಿಕೇಂದ್ರಗಳನ್ನೇರಿ ಏಳನೆಯದರಲ್ಲಿ ಆತ್ಮನಲ್ಲಿ ಸೇರುವುದೆಂದು ಅರ್ಥ. ಗೊರಕೆ ಹೊಡೆಯಿತು ಎಂದರೆ ಆತ್ಮನಲ್ಲಿ ಸೇರಿದ ಜೀವಾತ್ಮ ಯೋಗ ಎನ್ನುವ ಸ್ಥಿತಿಯಲ್ಲಿ ಇದ್ದಾನೆ. ಆದ್ದರಿಂದ ಅದು ಕದಲದ ಚೆಲಿಸದ ಸ್ಥಿತಿ ಆದ್ದರಿಂದ ಅದನ್ನು ಯೋಗನಿದ್ರೆ ಎಂದು ಗಾಢನಿದ್ರೆಯಲ್ಲಿ ಗೊರಕೆ ಬಂದಂತೆ ಗಾಢವಾದ ಯೋಗದಲ್ಲಿ ಜೀವಾತ್ಮ ಲಗ್ನವಾಗಿದ್ದಾನೆಂದು ಅರ್ಥ.

**4) ಗುಟ್ಟು ಚಪ್ಪಡನಕ ನೊಕ್ಕಡು ಉರಿಕಿ ಮಿಂಟಿ ಕೆಗಯಗಾನು.**
**ಕುಪ್ಪಿಗಂತುಲೇಸಿ ಪಾಮು ಕರಚಿ ಮ್ರಿಂಗೇರಾ ॥ಗುಟ್ಟು॥**

ಮನುಷ್ಯ ಪ್ರತಿನಿತ್ಯ ತನ್ನ ಮನಸ್ಸಿನಲ್ಲಿ ಅನೇಕ ವಿಷಯಗಳನ್ನು ಚಿಂತೆ ಮಾಡುತ್ತಿರುತ್ತಾನೆ. ಅನೇಕ ವಿಷಯಗಳಲ್ಲಿರುವ ಮನುಷ್ಯ ಯಾವ ವಿಷಯ ತನ್ನ ಆಲೋಚನೆಯಲ್ಲಿ ಇಲ್ಲದಂತೆ ಮಾಡಿಕೊಳ್ಳುವ ಪ್ರಯತ್ನವೇ ಯೋಗಸಾಧನೆ. ವಿಷಯ ಚಿಂತನೆಯಲ್ಲಿರುವಾಗ ಮನುಷ್ಯ ಸಂತೆ ಗಲಬೆಯಲ್ಲಿದ್ದಂತೆ ಗೊಂದಲ ದಲ್ಲಿರುತ್ತಾನೆ. ಅದರಲ್ಲಿ ಮನಸ್ಸಿಗೆ ವಿಶ್ರಾಂತಿಯಾಗಲಿ, ಜೀವಿಗೆ ಶಾಂತಿಯಾಗಲಿ ಇರುವುದಿಲ್ಲ. ಮನಸ್ಸಿಗೆ ಒಂದು ಕೆಲಸ ಕೂಡಾ ಇಲ್ಲದಂತೆ ಹೋದಾಗಲೇ ಅದಕ್ಕೆ ವಿಶ್ರಾಂತಿ ಲಭಿಸುತ್ತದೆ, ಆಗಲೇ ಜೀವಿಗೆ ಶಾಂತಿ ಲಭಿಸುತ್ತದೆ. ಅದೇ ಯೋಗ. ಯೋಗ ಮಾಡುವಾಗ ಮನಸ್ಸಿಗೆ ಆಲೋಚನೆ ಎನ್ನುವ ಸದ್ದು ಇಲ್ಲದಂತೆ ಹೋಗುತ್ತಿದೆ. ಅದನ್ನೇ ಈ ವಾಕ್ಯದಲ್ಲಿ ಗುಟ್ಟು ಸದ್ದೆನ್ನದೆ ಎಂದಿದ್ದಾರೆ. ಯಾವ ಯೋಚನೆ ಇಲ್ಲದೇ ಮನಸ್ಸು ಗುಟ್ಟಾಗಿ ನಿಂತುಹೋಗುವುದೆಂದು ಅದರ ಅರ್ಥ. ಅಂತಹ ಸಮಯ ಯೋಗ ಹೇಗಾಗುತ್ತಿದೆಂದರೇ! ಆಗ ಕೆಳಗಿರುವ ಆಧಾರವೆನ್ನುವ ಒಂದನೇ ನಾಡೀಕೇಂದ್ರದಿಂದ ಹೊರಟು ಮೇಲಿರುವ ಸಹಸ್ರಾರ ಎನ್ನುವ ಏಳನೆ ನಾಡಿಕೇಂದ್ರಕ್ಕೆ ಮನಸ್ಸು ಸೇರಿಹೋಗುತ್ತಿದೆ. ಈ ವಿಷಯವನ್ನೇ ಹೇಳಿದ್ದಾರೆ. ಮನಸ್ಸು ವೊಂದರ ಧ್ಯಾಸ ಏಳನೆ ನಾಡಿಕೇಂದ್ರದಲ್ಲಿ ಸೇರಿಹೋದಾಗ ಕೆಳಗೆ ಒಂದನೆ ಕೇಂದ್ರದಲ್ಲಿರುವ ಚೈತನ್ಯ ಎಗರಿ ಎರಡನೆ ಕೇಂದ್ರ ಸೇರುತ್ತಿದೆ. ಅಲ್ಲಿಂದ ಮೂರನೆ ಕೇಂದ್ರ ಸೇರುತ್ತಿದೆ. ಹೀಗೆ ಒಂದೊಂದು ಕೇಂದ್ರವನ್ನು ಬಿಟ್ಟು ಕೊನೆಗೆ ಏಳನೆ ಕೇಂದ್ರವನ್ನು ಸೇರಿ ಅಲ್ಲಿರುವ ಮನಸ್ಸನ್ನು ಅಸಲು ಇಲ್ಲದಂತೆ ಮಾಡುತ್ತಿದೆ. ಕೆಳಗೆ ಆರು ಕೇಂದ್ರಗಳಲ್ಲಿರುವ ಆತ್ಮಶಕ್ತಿ ಏಳನೆ ಕೇಂದ್ರಕ್ಕೆ ಬಂದು ಮನಸ್ಸನ್ನು ಮಾಯ ಮಾಡಿದಾಗ ಜೀವಿಯು ಆತ್ಮನಲ್ಲಿ ಸೇರಿಹೋಗುತ್ತಿದ್ದಾನೆ. ಅದೇ ನಿಜವಾದ ಬ್ರಹ್ಮಯೋಗ. ಮನಸ್ಸು ಏಳನೆ ಕೇಂದ್ರದಲ್ಲಿ ಏಕ ಅಗ್ರತೆಯಾಗಿ ನಿಂತುಹೋದಾಗ ಶರೀರವೆಲ್ಲಾ ವ್ಯಾಪಿಸಿರುವ ಆತ್ಮಚೈತನ್ಯ ಶರೀರ ಭಾಗಗಳಿಂದ ಮುಕಳಿಸಿಕೊಂಡು ಬ್ರಹ್ಮನಾಡಿಯಲ್ಲಿನ ಕೇಂದ್ರಗಳಿಗೆ ಸೇರಿಹೋಗುತ್ತಿದೆ. ಹಾಗೆಸೇರಿದ ಆತ್ಮಚೈತನ್ಯ ಕೆಳಗಿನಿಂದ ಗಬಗಬ ಮೇಲಿನ ಕೇಂದ್ರಗಳಿಗೆ ಹರಡುತ್ತಾ ಬರುತ್ತಿದೆ. ಹಾಗೆ ಹರಡುತ್ತಾ ಕೊನೆಗೆ ಏಳನೆ ಕೇಂದ್ರವನ್ನು ಸೇರಿ ಅಲ್ಲಿರುವ ಮನಸ್ಸನ್ನು ಇಲ್ಲದಂತೆ ಮಾಡುತ್ತಿದೆ. ಹಾಗೆ ಮನಸ್ಸು

ಯಾವಾಗಾದರೆ ಇಲ್ಲದಂತೆ ಹೋಗುತ್ತಿದೆಯೋ ಆಗ ಜೀವಿಯು ಆತ್ಮದೊಂದಿಗೆ ಬೆರೆಯುತ್ತಿದ್ದಾನೆ. ಬೇರೆಯಾಗಿರುವವು ಒಂದಾಗಿ ಬೆರೆತು ಹೋಗುವುದನ್ನು ಯೋಗ ಎನ್ನುತ್ತೇವೆ. ಒಂದಾಗಿರುವವು ಬೇರೆಯಾಗಿ ಬೇರ್ಪಡುವುದನ್ನು ವಿಯೋಗ ಎನ್ನುತ್ತೇವೆ. ಬಿಡಿಬಿಡಿಯಾಗಿರುವ ಜೀವಾತ್ಮ, ಆತ್ಮ ಎರಡು ಒಂದಾಗಿ ಬೆರೆತುಹೋಗುತ್ತಿವೆ. ಆದ್ದರಿಂದ ಅದನ್ನೇ ಪ್ರತ್ಯೇಕಿಸಿ ಬ್ರಹ್ಮಯೋಗ ಎನ್ನುತ್ತಿದ್ದೇವೆ.

ಬ್ರಹ್ಮನಾಡಿಯಿಂದ ಕೇಂದ್ರಗಳ ಮೂಲಕ ಶರೀರಕ್ಕೆ ಹರಡುವ ಆತ್ಮಚೈತನ್ಯವನ್ನು ಕುಂಡಲಿಶಕ್ತಿ ಎಂದುಕೂಡಾ ಅನ್ನುತ್ತಿದ್ದಾರೆ. ಕುಂಡಲಿಯನ್ನು ಹಾವಿಗೆ ಹೋಲಿಸಿ ಬಹಳಜನ ಹೇಳುತ್ತಿರುತ್ತಾರೆ. ಏಕೆಂದರೇ ಹಾವಿಗೆ ಬುಸಗುಟ್ಟುವ ಸ್ವಭಾವವಿರುತ್ತದೆ ಅಲ್ಲವೇ! ಕೇಂದ್ರದಲ್ಲಿನ ಕುಂಡಲಿಶಕ್ತಿ ಶ್ವಾಸಕೋಶಗಳನ್ನು ಕದಲಿಸಿ ಬುಸುಬುಸುಯೆನ್ನುವ ಶಬ್ದದಿಂದ ಕೂಡಿದ ಶ್ವಾಸವನ್ನು ನಡೆಸುತ್ತಿದೆ ಆದ್ದರಿಂದ ಬುಸಗುಟ್ಟುವ ಹಾವಾಗಿ ಹೇಳಿದ್ದಾರೆ. ಮನಸ್ಸು ಮೇಲಕ್ಕೆ ಸೇರಿದ ಕೂಡಲೇ ಕೇಂದ್ರಗಳಿಗೆ ಸೇರಿದ ಶಕ್ತಿ ಒಂದೊಂದು ಸ್ಥಾನದಿಂದ ಮೇಲಕ್ಕೆ ಹರಡುತ್ತಾ ಹೋಗುತ್ತಿದೆ. ಅದನ್ನೇ ಈ ಚರಣದಲ್ಲಿ ಎಗರಿ ಎಂದಿದ್ದಾರೆ. ಮೇಲಕ್ಕತ್ತಿ ಹೋದ ಹಾವು ಎನ್ನಲ್ಪಡುವ ಶಕ್ತಿ ಮೇಲೆ ಸೇರಿದ ಮನಸ್ಸನ್ನು ಇಲ್ಲದಂತೆ ಮಾಡುತ್ತಿದೆ. ಅದನ್ನೇ ಹಾವುಕಚ್ಚಿ ನುಂಗಿತೆಂದಿದ್ದಾರೆ. ಅಲ್ಲಿಯವರೆಗು ಜೀವಾತ್ಮಗು ಆತ್ಮಗು ಮಧ್ಯದಲ್ಲಿ ಅಡ್ಡವಾಗಿರುವ ಮನಸ್ಸು ಇಲ್ಲದಂತೆ ಹೋಗುವು ದರಿಂದ ಜೀವಾತ್ಮ ಆತ್ಮನಲ್ಲಿ ಸೇರಿಹೋಗುತ್ತಿದ್ದಾನೆ. ಆತ್ಮ ಜೀವಾತ್ಮಗಳ ಸಂಧಾನವೆನ್ನುವ ಯೋಗ ಈ ಚರಣದಲ್ಲಿ ಹೇಳಲ್ಪಟ್ಟಿದೆ. ನಿಮಗೆ ಚೆನ್ನಾಗಿ ಅರ್ಥವಾಗುವುದಕ್ಕೆ ಮತ್ತೊಂದುಸಲ ವಿವರಿಸುವುದೇನೆಂದರೇ! ಒಬ್ಬನು ಎಂದರೇ ಮನಸ್ಸೆಂದು ಅರ್ಥ. ಗುಟ್ಟು ಸದ್ದಾಗದೆ ಎಂದರೇ ಯಾವ ಯೋಚನೆಗಳು ಇಲ್ಲದಂತೆ ಏಕಾಗ್ರತೆ ಎಂದು ಅರ್ಥ. ಉರಿಕಿ ಮಿಂಟಿಕೆಗಯ ಎಂದರೇ ಬೇಗನೆ ಕೆಳಗಿನಿಂದ ಮೇಲಕ್ಕೆ ಹತ್ತಿಹೋಗಿ ಎಂದು ಅರ್ಥ. ಹಾವು ಎಂದರೇ ಚೈತನ್ಯಶಕ್ತಿ ಅಥವಾ ಆತ್ಮಶಕ್ತಿ ಎಂದು ಅರ್ಥ. ಕುಪ್ಪಳಿಸಿ ಎಂದರೇ ಒಂದೊಂದು ಕೇಂದ್ರವನ್ನು ಕುಪ್ಪಳಿಸಿ ದಾಟಿ ಹೋಗಿದೆಯೆಂದು ಅರ್ಥ. ಕಚ್ಚಿ

ನುಂಗಿತು ಎಂದರೇ ಅಡ್ಡವಿರುವ ಮನಸ್ಸನ್ನು ಇಲ್ಲದಂತೆ ಮಾಡಿದೆಯೆಂದು ಅರ್ಥ.

**5) ಭುವಿನಿ ನೋರುಲೇನಿ ಮಿಡತ ಪುಲಿನಿ ಮ್ರಿಂಗೇನು,**
**ಈ ವಾರ್ತ ತೆಲಿಸಿ ಮೇಕ ಯೊಕಟಿ ಪಕಪಕ ನವ್ವೇರಾ ॥ಗುಟ್ಟು॥**

ಪ್ರಪಂಚದಲ್ಲಿ ಮಿಡತೆ ಬಹಳ ಚಿಕ್ಕದು. ಹುಲಿ ಮಿಡತೆಗಿಂತ ಬಹಳ ದೊಡ್ಡದು. ಹುಲಿ ಎಷ್ಟು ದೊಡ್ಡದಾದರೂ ಕೆಳಗೇ ಸಂಚರಿಸುತ್ತಿರುತ್ತದೆ. ಮಿಡತೆ ಎಷ್ಟು ಚಿಕ್ಕದಾದರೂ ಮೇಲ್ಮೇಲೆ ಎಗರಿ ಹೋಗುತ್ತದೆ. ಹುಲಿಯಂತೆ ನಡೆಯುವುದು ಮಿಡತೆಗೆ ಬರುವುದಿಲ್ಲ. ದೊಡ್ಡಹುಲಿಯನ್ನು ಚಿಕ್ಕ ಮಿಡತೆ ನುಂಗುವುದೆಂದರೇ ಬಹಳ ವಿಚಿತ್ರ ಅಲ್ಲವೇ! ಅದೂ ಬಾಯಿಲ್ಲದ ಮಿಡತೆಯಂತೆ. ಹುಲಿಗು ಮೇಕೆಗು ಶತ್ರುತ್ವವಿದ್ದಂತೆ ಬಲವಾದ ಹುಲಿ ಬಲಹೀನವಾದ ಮೇಕೆಯನ್ನು ಸುಲಭವಾಗಿ ಸಾಯಿಸಿಹಾಕಬಲ್ಲದು. ಅಂತಹ ಹುಲಿ ಸತ್ತುಹೋಗಿದೆಯೆಂದರೇ ಮೇಕೆಗೆ ಸಂತೋಷವಾಗದೆ ಏನಾಗುತ್ತದೆ. ಅದಕ್ಕೇ ಹುಲಿಯನ್ನು ಮಿಡತೆ ನುಂಗಿದೆಯೆನ್ನುವ ವಾರ್ತೆ ತಿಳಿಯುತ್ತಲೇ ಮೇಕೆ ಸಂತೋಷ ತಡೆಯಲಾರದೆ ಪಕ ಪಕ ನಕ್ಕಿದೆಯಂತೆ. ಇದೆಲ್ಲ ಕೇಳುತ್ತಿದ್ದರೆ ಒಂದು ಕಟ್ಟುಕತೆಯಂತೆ ಇದೆ ಅಲ್ಲವೇ! ನಮ್ಮನ್ನು ಕೇಳಿದರೇ ಇದು ಕಟ್ಟುಕಥೆಯಲ್ಲ ಸತ್ಯವಾದ ಕಥೆ ಎನ್ನುತ್ತಿದ್ದೇವೆ. ಇದರಲ್ಲಿ ಒಳಗೊಂಡಿರುವ ಸತ್ಯವೇನೊ ವಿವರಿಸಿಕೊಳ್ಳೋಣ.

ಭೂಮಿ ಮೇಲೆ ಅಜ್ಞಾನ ಎಷ್ಟೋ ವಿಸ್ತರಿಸಿದೆ. ಕೆಲವು ಲಕ್ಷಗಳ ಜನರಲ್ಲಿ ಒಬ್ಬ ಜ್ಞಾನಿ ಕೂಡಾ ಇರುವುದು ಅಪರೂಪ ಎಂದುಕೊಂಡಿದ್ದೇವೆ. ಹತ್ತು ಲಕ್ಷಗಳ ಜನರಿಗೆ ಒಬ್ಬ ಜ್ಞಾನಿ ಇದ್ದರೂ ಅದರ ಪ್ರಕಾರ ಜ್ಞಾನಕ್ಕಿಂತ ಅಜ್ಞಾನ ಹತ್ತು ಲಕ್ಷಗಳಷ್ಟು ದೊಡ್ಡದೆಂದು ಅಳತೆ ಇಟ್ಟುಕೊಳ್ಳಬಹುದು. ಜ್ಞಾನವನ್ನು ಚಿಕ್ಕ ಮಿಡತೆಯಾಗಿ ಲೆಕ್ಕಿಸಿಕೊಂಡರೆ ಅಜ್ಞಾನವೆನ್ನುವ ಹುಲಿ ಕೆಲವು ಲಕ್ಷಗಳಷ್ಟು ದೊಡ್ಡದೆಂದೇ ಹೇಳಬಹುದು. ಈಗಿನ ಸಮಾಜದಲ್ಲಿ ಅಜ್ಞಾನದ ಮುಂದೆ

ಜ್ಞಾನ ಬಹಳ ಕೇವಲವಾಗಿ, ಬಹಳ ಚಿಕ್ಕದಾಗಿ ಕಾಣಿಸುತ್ತಲೇ ಇದೆ. ಚಿಕ್ಕ ಮಿಡತೆಯಂತೆ ಜ್ಞಾನವಿದ್ದರೆ, ದೊಡ್ಡ ಹುಲಿಯಂತೆ ಅಜ್ಞಾನ ಇದ್ದೇ ಇದೆ. ಸಮಾಜ ದೃಷ್ಠಿಯಲ್ಲಿ ಜ್ಞಾನ ಎಷ್ಟು ಚಿಕ್ಕದಾದರೂ, ಅಜ್ಞಾನ ಎಷ್ಟು ದೊಡ್ಡದಾದರೂ, ದೊಡ್ಡದಾದ ಅಜ್ಞಾನವನ್ನು ಚಿಕ್ಕದಾದ ಜ್ಞಾನ ಜಯಿಸಿಹಾಕುತ್ತಿದೆ. ಅದು ಹೇಗೆಂದರೇ ತತ್ತ್ವದಲ್ಲಿ ಹೇಳಿದಂತೇಯೆಂದು ಹೇಳಬಹುದು. ಬಾಯಿಲ್ಲದ ಮಿಡತೆ ಎಂದಿದ್ದಾರೆ ಅಲ್ಲವೇ. ಮಿಡತೆಗೆ ತಿನ್ನುವುದಕ್ಕೆ ಬಾಯಿಲ್ಲ ಆದರೆ ಅರಚುವುದಕ್ಕೆ ಕಂಠವಿದೆ. ಮಿಡತೆಗಳಿಗೆ ತಿನ್ನುವ ಬಾಯಿಗಿಂತ ಅರಚುವ ಕಂಠವೇ ದೊಡ್ಡದಾಗಿರುತ್ತದೆ. ಮಿಡತೆ ಬಾಯಿ ಕಾಣಿಸುವುದಿಲ್ಲ ಆದರೇ ಕಂಠ ಚೆನ್ನಾಗಿ ಕೇಳಿಸುತ್ತದೆ. ಹೆಚ್ಚಿನ ಶಬ್ದ ಮಾಡುವ ಚಿಕ್ಕ ಮಿಡತೆ ದೊಡ್ಡದಾದ ಹುಲಿ ಕಿವಿಯಲ್ಲಿ ತೂರಿದೆಯೆಂದರೆ ಹುಲಿ ಅದನ್ನು ಏನು ಮಾಡಲಾರದು. ಕಿವಿಯಲ್ಲಿ ತೂರಿದ ಮಿಡತೆ ಹುಲಿಯನ್ನು ಏನಾದರೂ ಮಾಡಬಲ್ಲದು. ಕಿವಿಯೊಳಗೆ ಸೇರಿ ಮೆದುಳಿನ ಹತ್ತಿರಕ್ಕೆ ಹೋಗಿ ಕಂಠಕ್ಕೆ ಕೆಲಸ ಇಟ್ಟರೆ ದೊಡ್ಡಹುಲಿ ಕೂಡಾ ಗಿರಗಿರ ತಿರುಗಿ ಮರಣಿಸಬೇಕಾಗಿದ್ದೆ. ಆನೆಯನ್ನಾದರೂ ಕದಲುವಂತೆ ಮಾಡಬಲ್ಲ ಸಾಮರ್ಥ್ಯ ಚಿಕ್ಕ ಸೊಳ್ಳೆಗಿರುವಂತೆ, ಕಚ್ಚುವಕಡೆ ಕಚ್ಚಿ ಮನುಷ್ಯನನ್ನು ನಿಂತಲ್ಲೇ ಎಗರಿಬೀಳುವಂತೆ ಮಾಡುವ ಸಾಮರ್ಥ್ಯ ಚಿಕ್ಕ ಇರುವೆಗಿರುವಂತೆ ಹುಲಿಯನ್ನು ಕೂಡಾ ಸಾಯಿಸುವ ಸಾಮರ್ಥ್ಯ ಮಿಡತೆಗಿದೆ ಯೆಂದು ಹೇಳಬಹುದು. ಆದ್ದರಿಂದ ಈ ತತ್ತ್ವದಲ್ಲಿ 'ಬಾಯಿಲ್ಲದ ಮಿಡತೆ ಹುಲಿಯನ್ನು ನುಂಗಿತು' ಎಂದಿದ್ದಾರೆ. ಚಿಕ್ಕದಾದ ಜ್ಞಾನ ಮನುಷ್ಯನ ಕಿವಿಯಲ್ಲಿ ತೂರಿ ಮೆದುಳಿಗೆ ಸೇರಿದರೆ ಎಷ್ಟೋ ವರ್ಷಗಳಿಂದ ಮನುಷ್ಯನಲ್ಲಿ ಬೇರೂರಿದ ದೊಡ್ಡ ಅಜ್ಞಾನ ನುಚ್ಚುನೂರಾಗುತ್ತದೆಂದು ಹೋಲಿಸಿ ಹೇಳುವುದೇ 'ಮಿಡತೆ ಹುಲಿಯನ್ನು ನುಂಗಿತು' ಎಂದು ಹೇಳಿದ್ದಾರೆ.

ಅಜ್ಞಾನದಿಂದ ಕೂಡಿದ ಅಜ್ಞಾನಿಗಳು, ಜ್ಞಾನವಿರುವ ಜ್ಞಾನಿಗಳು ಸಮಾಜದಲ್ಲಿದ್ದಾರೆ. ಸಮಾಜದಲ್ಲಿ ಅಜ್ಞಾನಿಗಳದ್ದೇ ಸಂಖ್ಯೆ ಹೆಚ್ಚು. ಜ್ಞಾನಿಗಳ ಸಂಖ್ಯೆ ಕಡಿಮೆ. ಅಜ್ಞಾನಿಗಳಿಗೆ ಜ್ಞಾನಿಗಳು ಯಾವಾಗಲೂ ಭಯಪಡುತ್ತಲೇ

ಇರುತ್ತಾರೆ. ಜ್ಞಾನಿಗಳನ್ನು ಇಲ್ಲದಂತೆ ಮಾಡಬೇಕೆಂದು ಅಜ್ಞಾನಿಗಳು ನೋಡುತ್ತಲೇ ಇರುತ್ತಾರೆ. ತಮಗೆ ಆತಂಕ ಮಾಡುವ ಅಜ್ಞಾನಿಗಳು ಜ್ಞಾನಿಗಳಾಗಿ ಬದಲಾಗಿಹೋದರೆ ಒಳ್ಳೆಯದೆಂದು ಜ್ಞಾನಿಗಳು ಅಂದುಕೊಳ್ಳುತ್ತಿರುತ್ತಾರೆ. ಯಾವಾಗಾದರೂ ಒಬ್ಬ ದೊಡ್ಡ ಅಜ್ಞಾನಿ ಜ್ಞಾನದಿಂದ ಮಾರ್ಪಟ್ಟು, ಅಜ್ಞಾನಿಯಾಗಿ ಇಲ್ಲದಂತೆ ಬದಲಾಗಿಹೋಗಿದ್ದಾನೆಂದರೇ ಆ ವಾರ್ತೆ ಸುಜ್ಞಾನಿಗಳಿಗೆ ಸಂತೋಷವನ್ನುಂಟುಮಾಡುವುದೇ ಆಗುತ್ತದೆ. ಆದ್ದರಿಂದ ಸಾಧು ಪ್ರಾಣಿಗಳಾದ ಮೇಕಯಂತಿರುವ ಜ್ಞಾನಿ ಹುಲಿಯಂತಹ ಅಜ್ಞಾನಿ ನಾಶವಾಗಿದ್ದಾನೆಂದರೇ, ಜ್ಞಾನಿಯಾಗಿ ಬದಲಾಗಿದ್ದಾನೆಂದರೇ ಸಂತೋಷಪಡುತ್ತಾನೆಂದು ಹೇಳುವುದೇ ಈ ಚರಣದಲ್ಲಿ ಆ ವಾರ್ತೆ ತಿಳಿದು 'ಮೇಕೆಯೊಂದು ಪಕಪಕ ನಕ್ಕಿತಯ್ಯಾ' ಎಂದಿದ್ದಾರೆ.

# ನನ್ನ ಕೊನೆಯ ಮಾತು

ಈಗಿನ ಸಮಾಜದಲ್ಲಿ ತತ್ತ್ವಗಳು ಎನ್ನುವವುಗಳಿಗೆ ಸ್ವಲ್ಪವೂ ಬೆಲೆ ಇಲ್ಲದಂತೆ ಹೋಗಿದೆ. ಭಿಕ್ಷುಕರು ತಾವು ಭಿಕ್ಷಾಟನೆಯಲ್ಲಿ ಹಾಡಿಕೊಳ್ಳುವುದು ನಾವು ಚಿಕ್ಕಂದಿನಲ್ಲಿ ನೋಡಿದ್ದೇವೆ. ಈಗಿನ ಕಾಲದಲ್ಲಿ ಭಿಕ್ಷುಕರು ಕೂಡಾ ಭಕ್ತಿ ರೂಪದಲ್ಲಿರುವ ಸಿನಿಮಾ ಹಾಡುಗಳನ್ನು ಹಾಡುತ್ತಿದ್ದಾರೆ. ತತ್ತ್ವಗಳು ಹಾಡುವ ಭಿಕ್ಷುಕರು ಕೂಡಾ ಬಹಳ ಅಪರೂಪವಾಗಿದ್ದಾರೆ. ಇರುವವರು ಮರಣಿಸಿದರೆ ಅವುಗಳನ್ನು ಹಾಡುವವರೇ ಕಾಣಿಸುವುದಿಲ್ಲ ಎಂದುಕೊಳ್ಳುತ್ತೇವೆ. ಆತ್ಮ ಜ್ಞಾನದಲ್ಲಿ ಅತ್ಯಂತ ಉನ್ನತವಾದ ತತ್ತ್ವಗಳು ಕೊನೆಗೆ ಭಿಕ್ಷುಕರ ಪಾಲಾಗಿ ಕೊನೆಗೆ ಅಲ್ಲಿಯೂ ಕೂಡಾ ಇಲ್ಲದಂತೆ ಹೋಗುವ ಸ್ಥಿತಿಗೆ ಸೇರಿಕೊಂಡಿವೆಯೆಂದು ಹೇಳಬಹುದು. ಇನ್ನು ಹೇಳಬೇಕೆಂದರೆ ಬ್ರಹ್ಮಯ್ಯನವರ ಮಠದವರು ಕೆಲವು ತತ್ತ್ವಗಳನ್ನು ಅವು ಕೂಡಾ ಬ್ರಹ್ಮಯ್ಯನವರ ಹೆಸರಿರುವವುಗಳನ್ನು ಸ್ವಲ್ಪ ಪ್ರಚಾರದಲ್ಲಿ

ಇಟ್ಟುಕೊಂಡಿದ್ದಾರೆ. ಆದರೂ ಅವು ಎಲ್ಲರಿಗೂ ರುಚಿಸುತ್ತಿಲ್ಲ. ಮನೆಮನೆ ಟೀವೀಗಳಲ್ಲಿ ಬಹಳ ಮಂದಿ ಸ್ವಾಮಿಗಳಿಂದ ಜ್ಞಾನ ಹೇಳಲ್ಪಡುತ್ತಿದೆ. ಅವರು ಕೂಡಾ ತತ್ತ್ವಗಳನ್ನು ಎಲ್ಲಿಯೂ ಪ್ರಸ್ತಾಪಿಸುತ್ತಿಲ್ಲ. ದಕ್ಷಿಣ ಭಾರತದೇಶದಲ್ಲಿ ತೆಲುಗು ಭಾಷೆಯಲ್ಲಿ ಪೂರ್ವದಲ್ಲಿ ಪ್ರಸಿದ್ಧಿಯಾಗಿರುವವು ತತ್ತ್ವಗಳು. ಅಂತಹ ತತ್ತ್ವಗಳು ಈ ದಿನ ಸ್ವಲ್ಪವಾದರೂ ಕಾಣಿಸದಂತೆ ಹೋಗಿವೆ. ತೆಲುಗು ನಾಟ ಅಚ್ಚು ಪರಿಶ್ರಮಗಳು ಇಲ್ಲದ ದಿನ ತಮಿಳುನಾಡಾದ ಮದ್ರಾಸ್‌ನಲ್ಲಿ ಅಚ್ಚು ಪರಿಶ್ರಮಗಳು ಹೆಚ್ಚಾಗಿದ್ದವು. ಸಿ.ವಿ ಕೃಷ್ಣ ಬುಕ್‌ಡಿಪೋದವರು, ಎನ್, ವಿ ಗೋಪಾಲ್ ಬುಕ್‌ಡಿಪೋದವರು ನೂರು ವರ್ಷಗಳ ಪೂರ್ವದಿಂದ ಹಳೆ ಬರಹ ಪ್ರತಿಗಳನ್ನು ಶೇಕರಿಸಿ ಅಚ್ಚುಹಾಕಿ ವ್ಯಾಪಾರರೀತಿಯಲ್ಲಿ ಮಾರಿ ಕೊಳ್ಳುತ್ತಿದ್ದರು. ಸುಮಾರು 40 ವರ್ಷಗಳ ಕೆಳಗಿನವರೆಗು ಆಂಧ್ರಪ್ರದೇಶದಲ್ಲಿ ಕ್ಯಾಲೆಂಡರ್ ಕೂಡಾ ಅವರವೇ ಇರುತ್ತಿದ್ದವು. ಅವರು ಶೇಕರಿಸಿ ಅಚ್ಚುಹಾಕಿದ ತತ್ತ್ವಗಳ, ಪದ್ಯಗಳ, ಪುಸ್ತಕಗಳು ಎಲ್ಲಿಯಾದರೂ ಕಾಣಿಸಿದರೂ ಅವು ಶೀತಿಲಾವಸ್ಥೆಯಲ್ಲಿವೆ. ನಾವು ಸ್ವತಃವಾಗಿ ಸಿ,ವಿ ಕೃಷ್ಣಬುಕ್ ಡಿಪೊ ಅವರೊಂದಿಗೆ ಮದ್ರಸ್‌ನಲ್ಲಿ ಬೇಟಿಯಾಗಿ ಒಂದು ಪುಸ್ತಕವನ್ನು ಕುರಿತು ಕೇಳಿದರೆ ಅದು ಸ್ಟಾಕ್ ಇಲ್ಲವೆಂದು ಹೇಳುತ್ತಾ ಅವರ ತಂದೆ ಕಾಲದಲ್ಲಿ ಮಾಡಿರುವವು ಆ ಪುಸ್ತಕಗಳೆಂದು ಹೇಳಿದ್ದಾರೆ. ಅವುಗಳನ್ನು ಯಾರೂ ಕೊಂಡುಕೊಳ್ಳುತ್ತಿಲ್ಲವೆಂದು ಆದ್ದರಿಂದ ಅವುಗಳನ್ನು ಅಚ್ಚು ಹಾಕಲಿಲ್ಲವೆಂದು ಕೂಡಾ ಹೇಳಿದ್ದಾರೆ. ನಮ್ಮ ತಂದೆ ಆಧ್ಯಾತ್ಮಿಕತಜ್ಞ ಮತ್ತು ಗಡಿಕೋಟ ಸಚ್ಚಿದಾನಂದರ ಶಿಷ್ಯನಾಗಿರುವುದರಿಂದ ಆತ್ಮಲಿಂಗ ಶತಕ, ವೇಮನ ಪದ್ಯಗಳು, ಕಾಲಜ್ಞಾನ ತತ್ತ್ವಗಳು, ಆತ್ಮಬೋಧಾಮೃತ ತತ್ತ್ವಗಳು, ತಾರಕಾಮೃತ ತತ್ತ್ವಗಳು ಎನ್ನುವ ಪುಸ್ತಕಗಳನ್ನು ಅಂದಿನ ಕಾಲದಲ್ಲಿ ಮುದ್ರಿಸಿದ್ದೇವೆ. ಇಂದಿಗೂ ಸ್ವಲ್ಪ ಇವೆ. ಆದ್ದರಿಂದ ಅಂತಹ ಪುಸ್ತಕಗಳನ್ನು ನಾವು ಮಾಡುವುದಿಲ್ಲ ಎಂದನು.

ಈ ವಿಧವಾಗಿ ತತ್ತ್ವಗಳ ಪುಸ್ತಕಗಳು ಬರವಾಗಿವೆ. ಇಂದಿಗೂ ಎಲ್ಲಿಯಾದರೂ ತತ್ತ್ವಗಳು ಹಾಡಿಕೊಳ್ಳುವ ಹಳುಬರಿದ್ದರೇ ಅವರಿಗೆ ಹಾಡುವವರಿಗೇ ಬರುತ್ತದೆ ಆದರೆ ಅದರ ಅರ್ಥ ಸ್ವಲ್ಪವೂ ತಿಳಿದಿಲ್ಲ. ಇಂದಿಗೂ

ಕಾಲಜ್ಞಾನ ತತ್ತ್ವಗಳೆನ್ನುವ ಪುಸ್ತಕಗಳು ಎಲ್ಲಿಯಾದರೂ ಕಾಣಿಸಿದರೂ ಅದರಲ್ಲಿ ತತ್ತ್ವಗಳಿವೆ ಆದರೆ ಅವುಗಳಿಗೆ ಅರ್ಥವನ್ನು ಯಾರೂ ಬರೆಯಲಿಲ್ಲ. ಚೆನ್ನಾಗಿ ಅರ್ಥವಾಗುವ ಪುಸ್ತಕಗಳನ್ನು ಕೂಡಾ ಓದುವ ಸಹನೆ ಇಲ್ಲವೆನ್ನುವ ಮನುಷ್ಯರು ಅರ್ಥವಾಗದ, ಅರ್ಥ ಇಲ್ಲದವುಗಳನ್ನು ಓದುವುದಿಲ್ಲ. ಕೆಲವರು ಸಂಸ್ಕೃತವನ್ನು ಕಲಿತಿರುವ ಸ್ವಾಮೀಜಿಗಳು ಯಾವ ಪಾಂಡಿತ್ಯವಿಲ್ಲದ ತತ್ತ್ವಗಳನ್ನು ನೋಡಿ ಅವುಗಳನ್ನು ಮತಿಸ್ಥಿಮಿತವಿಲ್ಲದವರು ಬರೆದ ಹುಚ್ಚು ಬರಹಗಳು ಎನ್ನುತ್ತಿದ್ದಾರೆ. ಹೀಗೆ ಎಷ್ಟೋ ವಿಧಗಳು ಆಧ್ಯಾತ್ಮಿಕ ವಿದ್ಯೆಯಲ್ಲಿ ಆಣಿಮುತ್ತುಗಳಾದ ತತ್ತ್ವಗಳಿಗೆ ಯಾವ ಗುರುತಿಲ್ಲದೇ ಹೋಗಿದೆ. ಕೊನೆ ಉಸಿರಿನಿಂದ ಮರಣಶ್ಯಾಯ್ಯ ದಮೇಲಿರುವವನಂತೆ ತತ್ತ್ವಗಳು ಅಂತ್ಯಸ್ಥಿತಿ ಸೇರಿಕೊಳ್ಳುವುದು ನಮಗೆ ಸ್ವಲ್ಪ ಭಾದೆ ಎನಿಸಿದೆ. ಅವು ಹುಚ್ಚು ಬರಹಗಳಲ್ಲ, ನಮ್ಮ ಹಿರಿಯರು ಸಂಪಾದಿಸಿ ಮುಡಿಹಾಕಿಟ್ಟಿರುವ ಜ್ಞಾನಧನವೊಂದರ ಮೂಟೆಗಳೆಂದು ಹೇಳಬೇಕೆಂದಿದ್ದೇವೆ. ಅವು ಜ್ಞಾನಧನ ನಿಲಯಗಳೆಂದು ಎಲ್ಲರೂ ಗುರುತಿಸಬೇಕೆಂದರೆ ಆ ಮೂಟೆಗಳಲ್ಲಿ ಏನಿದೆಯೋ ಬಿಚ್ಚಿ ತೋರಿಸಿದರಾಗಲಿ ಅರ್ಥವಾಗುವುದಿಲ್ಲವೆಂದುಕೊಂಡಿದ್ದೇವೆ. ಆದ್ದರಿಂದ ಎಲ್ಲರಿಗೂ ಅವುಗಳಲ್ಲಿನ ಅರ್ಥವನ್ನು ವಿವರಿಸಬೇಕೆಂದುಕೊಂಡು ಆ ಕಾರ್ಯವನ್ನು ಗ್ರಂಥರೂಪದೊಳಗೆ ತಂದಿದ್ದೇವೆ ಆ ಚಿಕ್ಕ ಪುಸ್ತಕವೇ ಈ **"ತತ್ತ್ವಗಳ ವಿವರ"**.

ತತ್ತ್ವಗಳೆಲ್ಲವನ್ನು ಬರೆಯಬೇಕೆಂದರೆ ಬಹಳ ಕಷ್ಟವಾದ ಕೆಲಸ ಆದ್ದರಿಂದ ವಿವಿಧ ರೂಪಗಳಲ್ಲಿ ಪದ್ಧತಿಗಳಲ್ಲಿರುವವುಗಳನ್ನು ಆರಿಸಿಕೊಂಡು, ವಿವರಿಸಿ ನಿಮ್ಮ ಮುಂದಿಡುತ್ತಿದ್ದೇವೆ. ಇವುಗಳಲ್ಲಿ ಸುಲಭವಾದವು ಕಷ್ಟವಾದವು ಎರಡು ವಿಧಗಳ ತತ್ತ್ವಗಳು ಇವೆ. ಅಷ್ಟೇ ಅಲ್ಲದೆ ಇವುಗಳಿಗೆ ಯಾರಾದರೂ ಅರ್ಥ ಹೇಳುತ್ತಾರಾ ಎಂದು ಸವಾಲು ಹಾಕಿವೆ. ಹೇಳಬಲ್ಲೆನೆಂದರೇ ವರ್ಷವಾದರೂ ಗಡುವುಕೊಡುತ್ತೇವೆಂದು ಸವಾಲು ಹಾಕಿದವುಗಳನ್ನು ಆಯ್ಕೆ ಮಾಡಿಕೊಂಡು ಬರೆದಿದ್ದೇವೆ. ಅವರ ಸವಾಲುಗಳು ನಮಗೆ ಪೌರುಷವನ್ನು ತುಂಬಿ ಬರೆಯಿಸಿವೆ. ತತ್ತ್ವಗಳೆಲ್ಲ 'ಶರೀರದೊಳಗಿನ ಜ್ಞಾನವನ್ನು ಸೂಚಿಸುವವು' ಎನ್ನುವ ಸೂತ್ರ

ನಮಗೆ ಚೆನ್ನಾಗಿ ತಿಳಿದಿದೆ. ಆದ್ದರಿಂದ ಆ ಸೂತ್ರವನ್ನು ಅನುಸರಿಸಿ ಎಷ್ಟು ಕಷ್ಟವಾಗಿ ಕಾಣಿಸಿದ ತತ್ತ್ವಕ್ಕಾದರೂ ಸುಲಭವಾಗಿ ವಿವರವನ್ನು ಬರೆದಿದ್ದೇವೆ. ಈ ನಮ್ಮ ಬರಹದಿಂದ ಅವಸಾನದಶೆಯಲ್ಲಿ ಮರಣಶಯ್ಯದ ಮೇಲಿರುವ ತತ್ತ್ವಗಳು ಹೊಸದಾಗಿ ಯೌವ್ವನ ರೂಪಹೊಂದಿ ಎಲ್ಲರನ್ನು ಆಕರ್ಷಿಸುತ್ತವೆಂದು ಅಂದುಕೊಳ್ಳುತ್ತಿದ್ದೇವೆ. ಈ ತತ್ತ್ವಗಳನ್ನು ನೀವು ಓದಿ ತತ್ತ್ವಗಳು ಇಂತಹವೆಂದು, ದೇವರ ಹತ್ತಿರಕ್ಕೆ ಸೇರಿಸುವವೆಂದು, ಇತರರಿಗೆ ತಿಳಿಸುವುದರಿಂದ ನೀವು ಕೂಡಾ ದೇವರ ಸೇವೆಯಲ್ಲಿ ಪಾಲು ಹಂಚಿಕೊಂಡವರಾಗುತ್ತೀರ. ಲಾಭಗಳು ಬರಬೇಕೆಂದು ಮುಗಿದು ಅಕ್ರಮಾರ್ಜನೆಗಳಿಂದ ಹುಂಡಿಗಳಲ್ಲಿ ಲಕ್ಷಗಳು ಹಾಕಿಬಂದರೂ ಸ್ವಲ್ಪವೂ ಉಪಯೋಗವಿಲ್ಲ. ನಿನಗಿರುವ ಸಾಮರ್ಥ್ಯದಿಂದ ಕೆಲವು ಗ್ರಂಥಗಳನ್ನು ಕೊಂಡು ಆಸಕ್ತಿ ಇರುವವರಿಗೆ ದಾನ ಮಾಡಿದರೆ ಜ್ಞಾನದಾನವಾಗುತ್ತದೆ. ಅದರಿಂದ ವಿಶೇಷವಾದ ಫಲಿತ ನಿನಗೆ ತಿಳಿಯದೆಯೇ ಸೇರುತ್ತದೆ. ದೇವರಲ್ಲದ ದೇವರುಗಳಿಗೆ ಹಣವನ್ನು ವ್ಯರ್ಥವಾಗಿ ಧಾರೆಯೆರೆಯುವು ದಕ್ಕಿಂತ ದೈವ ಸ್ವರೂಪಗಳಾಗಿ, ದೈವಜ್ಞಾನ ಸಂಪೂರ್ಣವಾಗಿ ತಿಳಿಸುವ ಗ್ರಂಥಗಳನ್ನು ಇತರರಿಗೆ ದಾನ ಮಾಡುವುದರಿಂದ ದೇವರ ಕೆಲಸ ಎಷ್ಟೋ ಮಾಡಿದಂತಾಗುತ್ತದೆ. ಇದೇ ವಿಷಯವನ್ನೇ ಭಗವದ್ಗೀತೆಯಲ್ಲಿ "ಮದರ್ಥಮಪಿ ಕರ್ಮಾಣಿ ಕುರ್ವನ್ ಸಿದ್ಧಿ ಮವಾಪ್ಯಸಿ" ಎಂದಿದ್ದಾರೆ. **ನನಗಾಗಿ ಕೆಲಸ ಮಾಡಿದರೆ ನಿನಗೆ ಸಿದ್ಧಿ ಲಭಿಸುತ್ತದೆಂದು** ಇದರ ಅರ್ಥ. ಈಗಿನಿಂದಾದರೂ ನಿಜವಾದ ದೇವರ ಸೇವೆ ಮಾಡಿರೆಂದು, ತತ್ತ್ವಗಳಲ್ಲಿನ ರಹಸ್ಯಗಳನ್ನು ತಿಳಿದುಕೊಳ್ಳಿರೆಂದು ತಿಳಿಸುತ್ತಾ ಮುಗಿಸುತ್ತಿದ್ದೇವೆ.

ಇಂತಿ

**ತ್ರಿಮತ ಏಕೈಕ ಗುರು, ತ್ರೈತ ಸಿದ್ಧಾಂತ ಆದಿಕರ್ತ**

**ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

## ಶ್ರೀ ಪೋತುಲೂರಿ ವೀರಬ್ರಹ್ಮಯ್ಯರವರ ಕಾಲಜ್ಞಾನದಲ್ಲಿ

**"ಪ್ರಬೋಧಾಶ್ರಮ", "ಪ್ರಬೋಧಾನಂದ ಯೋಗೀಶ್ವರರನ್ನು" ಕುರಿತು ಬರೆದ ವಾಕ್ಯಗಳು.**

1) ಪ್ರಬೋಧಾಶ್ರಮ ಉನ್ನತವಾದ ಜ್ಞಾನ ಇರುವುದು.
2) ಕಲಿಯುಗ 5110 ಸಂ॥ (ಕ್ರಿ.ಶ.2010 ಸಂ॥) ಗಳಿಗೆ ಆಧ್ಯಾತ್ಮಿಕ ಪುರುಷನು ಪ್ರಕಾಶವಾಗುತ್ತಾನೆ.
3) ಮಧ್ಯಾತ್ಮ ಯೋಗಪುರುಷನ ಮಹತ್ವ ಮಹಾಪ್ರಕಾಶವಾಯಿತು.
4) ಪ್ರಬೋಧಾಶ್ರಮದವರ ಆದಿಗುಣವೆಲ್ಲ ಶಯನಾಧಿಪತಿಗೆ ಇದೆ.
5) ಶಯನಾಧಿಪತಿಯೇ ಆನಂದ ಗುರುವು. ಆನಂದಗುರು ನಿಮಗೂ ಗುರುವೇ, ನನಗೂ ಗುರುವೇ.
6) ಆನಂದಾಶ್ರಮದವರ ವಾಕ್ಯ ಸಪ್ತಮಿ ನಿಶ್ಚಯ, ಸರ್ವದಾ ಸಪ್ತಮಿ ಆಗುತ್ತದೆ.
7) ಮಹಾ ದೇವತೆಗಳೆಲ್ಲರೂ ಆನಂದಾಶ್ರಮದ ಹತ್ತಿರವೇ ಇದ್ದಾರೆ.
8) ಬ್ರಹ್ಮಾದಿ ದೇವತೆಗಳಲ್ಲಿಯೂ ಆನಂದಾಶ್ರಯರು ಆದಿಮೂರ್ತಿ. ಶಾಸ್ತ್ರವು ನಿಮಗೆ ವಿವರವಾಗಿ ಆನತಿಕೊಟ್ಟಿದ್ದಾರೆ. ಆತನಿಂದಲೇ ನಾವು ಶಾಸ್ತ್ರವನ್ನು ಕೇಳಿದ್ದೇವೆ.
9) ಸಾಂಧ್ರಸಿಂಧು ವೇದಕ್ಕೆ ಆನಂದಾಶ್ರಮದ ಕರ್ತ ಬರಬೇಕು.
10) ಈ ಸಾಂಧ್ರಸಿಂಧು ವೇದದಲ್ಲಿನ ಮಾತುಗಳು ಬ್ರಹ್ಮನಿಗೂ ತಿಳಿದಿಲ್ಲ.
11) ಆದಿ ವೇದಗಳೆಲ್ಲವೂ ಆನಂದಾಶ್ರಮದ ಹಿಂದೆಯೇ ಬಂದಿವೆ. ನಿಮಗು ನಮಗು ಅದೇ ಗೋತ್ರ.
12) ಸಿದ್ಧಾಂತ ಶರೋಮಣಿ ಗುರುಸ್ವಾಮಿ, ಗುರುಸ್ವಾಮಿ ಸಿದ್ಧಾಂತ ನಿತ್ಯ ಸತ್ಯವಾಯಿತಯ್ಯ.
13) ಸೋಮ ಸಿದ್ಧಾಂತ ಸೊಂಪಾಗಿ ನಡೆಯುವುದು, ಶುಭಾಶುಭಗಳು ನಡೆಯುವವಯ್ಯ.
14) ಸಾಂದ್ರಸಿಂಧು ವೇದದಲ್ಲಿನ ಮಾತುಗಳು ಬ್ರಹ್ಮನಿಗೂ ತಿಳಿದಿಲ್ಲ.
15) ಆನಂದ ಕಂದಳಿತ ಹೃದಯಾರವಿಂದಗಳಾದ ಆತ್ಮ ತ್ರಯಗಳನ್ನು.